23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 326 | ನವದೆಹಲಿ | ಬೆಲೆ ₹10 | ಜೂನ್ 1 2026, ಸೋಮವಾರ

# ಅಪ್ರತಿಮ ಸಂಘಟಕ, ಪಕ್ಷನಿಷ್ಠ ಡಿ.ಕೆ.ಶಿವಕುಮಾರ್ ಅವರಿಗೆ

# ಕರ್ನಾಟಕದ ಸಾರಥ್ಯ

**ಕೆಪಿಸಿಸಿ ಅಧ್ಯಕ್ಷರು ಮತ್ತು ಉಪಮುಖ್ಯಮಂತ್ರಿಗಳಾಗಿದ್ದ ಟ್ರಬಲ್ ಶೂಟರ್ ಡಿ.ಕೆ.ಶಿವಕುಮಾರ್ ಅವರೇ ಈಗ ಮುಖ್ಯಮಂತ್ರಿಯಾಗಿ ಕರ್ನಾಟಕದ ಆಡಳಿತ ಸೂತ್ರ ಹಿಡಿಯಲಿದ್ದಾರೆ. ರಾಜಕೀಯದಲ್ಲಿ ವಿವಿಧ ಮಜಲುಗಳನ್ನು ದಾಟಿ ಬಂದಿರುವ ಡಿ.ಕೆ.ಶಿವಕುಮಾರ್ ಎಂಟು ಬಾರಿ ಶಾಸಕರಾಗಿ, ಸಚಿವರಾಗಿ, ಉಪಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿ, ಇದೀಗ ಅವರೇ ಮುಖ್ಯಮಂತ್ರಿಯಾಗಿ ರಾಜ್ಯದ ಅಧಿಕಾರ ಸೂತ್ರ ಹಿಡಿಯಲಿದ್ದಾರೆ.**






ಡಿ.ಕೆ.ಶಿವಕುಮಾರ್ ಅವರಿಗೆ ಈ ಸ್ಥಾನ ರತ್ನಗಂಬಳಿ ಹಾಕಿ ಕರೆದುಕೊಡಲಿಲ್ಲ. ಅವರ ಪಕ್ಷ ನಿಷ್ಠೆ, ಪಕ್ಷಕ್ಕಾಗಿ ಮಾಡಿರುವ ತ್ಯಾಗ, ಸಂಘಟನೆಯ ಮೂಲಕ ಪಕ್ಷಕ್ಕೆ ಪುನಃಶ್ಚೇತನ ನೀಡುವುದರೊಂದಿಗೆ ಅಧಿಕಾರಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಮಾತ್ರವಲ್ಲದೇ ನೆರೆಯ ತೆಲಂಗಾಣ ರಾಜ್ಯದಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ತರಲು ಪ್ರಯತ್ನಿಸಿ ಯಶಸ್ವಿಯಾದರು.

- ಜೀವನದುದ್ದಕ್ಕೂ ಅನೇಕ ಹೋರಾಟಗಳ ಮೂಲಕ ಬೆಳೆದು ಬಂದ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ಪ್ರಮುಖ ಹುದ್ದೆಯಲ್ಲಿದ್ದ ಅಹ್ಮದ್ ಪಟೇಲ್ ಅವರು ರಾಜ್ಯಸಭೆಗೆ ಆಯ್ಕೆಯಾಗಲು ಗುಜರಾತ್ ಶಾಸಕರನ್ನೇ ಕರೆತಂದು ರಕ್ಷಿಸುವ ಮೂಲಕ, ಅಹ್ಮದ್ ಪಟೇಲ್ ಆಯ್ಕೆಯಾಗುವಂತೆ ಮಾಡಿದರು. ಅನಂತರ ಅವರ ಮೇಲೆ ಇಡಿ ಮತ್ತು ಐಟಿ ದಾಳಿಗಳು ನಡೆದು ಕೆಲಕಾಲ ಕಾನೂನು ಸಂಕಷ್ಟ ಎದುರಿಸಿದರು. ಅವರ ಈ ತ್ಯಾಗಕ್ಕೆ 2023ರಲ್ಲೇ ಅವರು ಸಿಎಂ ಆಗಬೇಕಿತ್ತು. ಕಾರಣಾಂತರಗಳಿಂದ ಮತ್ತೆ ಅವರು ತ್ಯಾಗ ಮಾಡಬೇಕಾಗಿ ಬಂದಿತು. ಅವರ ತ್ಯಾಗಕ್ಕೆ ತಡವಾಗಿಯಾದರೂ ಕೊನೆಗೂ ಸಿಎಂ ಪಟ್ಟ ದೊರೆಯುವಂತೆ ಮಾಡಿದ್ದು ಕಾಂಗ್ರೆಸ್ ಹೈಕಮಾಂಡ್.
- ರಾಜಕೀಯದಲ್ಲಿ ಇವರು ಏನೇ ಕಷ್ಟಗಳು ಬಂದರೂ ಅವುಗಳನ್ನು ಧೈರ್ಯದಿಂದ ಎದುರಿಸಿ ದೃಢವಾಗಿ ಮತ್ತು ಅತ್ಯಂತ ತಾಳ್ಮೆಯಿಂದ ಎಲ್ಲವನ್ನೂ ಸಹಿಸಿಕೊಂಡು ಬಂದಿರುವುದರಿಂದಲೇ ಅವರನ್ನು ಕನಕಪುರದ ಬಂಡೆ ಎಂದು, ಪಕ್ಷ ಮತ್ತು ಸರ್ಕಾರದಲ್ಲಿ ಏನೇ ಸಂಕಷ್ಟಗಳು ಬಂದರೂ ಅವುಗಳನ್ನು ಅತ್ಯಂತ ಸಮರ್ಥವಾಗಿ ಪರಿಹರಿಸಬಲ್ಲ ಚಾಣಾಕ್ಷತೆ ಹೊಂದಿರುವುದರಿಂದ ಅವರನ್ನು ರಾಜಕೀಯ ಟ್ರಬಲ್ ಶೂಟರ್ ಎಂದೂ ಕರೆಯುತ್ತಾರೆ.
- ಡಿ.ಕೆ.ಶಿವಕುಮಾರ್ ರೈತ ಕುಟುಂಬದಿಂದ ಬಂದವರು. ದೊಡ್ಡ ಆಲಹಳ್ಳಿಯ ಕೆಂಪೇಗೌಡ ಮತ್ತು ಗೌರಮ್ಮ ದಂಪತಿಯ ಪುತ್ರರಾಗಿ ಜನಿಸಿದ ಅವರು ಒಕ್ಕಲಿಗ ಸಮುದಾಯಕ್ಕೆ ಸೇರಿದವರು. ಬಾಲ್ಯದಿಂದಲೇ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ಬಂದಿರುವ ಡಿ.ಕೆ.ಶಿವಕುಮಾರ್ ವಿದ್ಯಾರ್ಥಿ ಕಾಂಗ್ರೆಸ್ ಮೂಲಕ ರಾಜಕೀಯ ಜೀವನ ಆರಂಭಿಸಿದರು.
- 1985ರಲ್ಲಿ ವಿಧಾನಸಭಾ ಚುನಾವಣೆಯೇ ಅವರ ರಾಜಕೀಯ ಜೀವನದ ಮೊದಲ ಘಟ್ಟ. ಅಂದು ಜನತಾದಳದ ಹಿರಿಯ ನಾಯಕ ಎಚ್.ಡಿ.ದೇವೇಗೌಡರ ಎದುರಾಳಿಯಾಗಿ ಸ್ಪರ್ಧಿಸಿದರು. ಗೆಲುವು ಸಾಧಿಸಲಾಗದಿದ್ದರೂ, ಅವರ ಆಕ್ರಮಣಕಾರಿ ಪ್ರಚಾರ ವೈಖರಿಮತ್ತು ಜನಸಂಪರ್ಕದಿಂದ ಇಡೀ ಕ್ಷೇತ್ರದಲ್ಲಿ ಮನೆಮಾತಾಗಿ ರಾಜಕೀಯದಲ್ಲಿ ಬೆಳೆದು ನಿಂತರು.
- ಅನಂತರ 1999ರಲ್ಲಿ ಸಾತನೂರು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದ ಡಿ.ಕೆ.ಶಿವಕುಮಾರ್ ಅವರು, ತಮ್ಮ 27ನೇ ವಯಸ್ಸಿನಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಅನಂತರ ರಾಜಕೀಯದಲ್ಲಿ ಹಿಂತಿರುಗಿ ನೋಡಲಿಲ್ಲ. ನಿರಂತರ ಎಂಟು ಬಾರಿ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ಉಪಮುಖ್ಯಮಂತ್ರಿಯಾಗಿ ಅನಂತರ ಇದೀಗ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ.

ಡಿ.ಕೆ.ಶಿವಕುಮಾರ್ ನೇರವಾಗಿ ಅಧಿಕಾರಕ್ಕೆ ಬಂದವರಲ್ಲ. ರಾಜಕೀದಲ್ಲಿ ಹಂತ ಹಂತವಾಗಿ ಬೆಳೆದು ಬಂದವರು. ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಪ್ರಥಮ ಬಾರಿಗೆ ಚುನಾಯಿತ ಸದಸ್ಯರಾಗಿ ಆಯ್ಕೆಯಾದ ಅವರು, ಆಗಲೇ ರಾಜಕೀಯದ ಒಳಹೊರಗನ್ನು ಅರಿತುಕೊಂಡರು.

- 2018ರ ಚುನಾವಣೆಯ ನಂತರ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದನ್ನು ತಡೆದು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಜನತಾ ದಳ (ಜಾತ್ಯತೀತ) ಸಮ್ಮಿಶ್ರ ಸರ್ಕಾರ ರಚನೆಯಲ್ಲಿ ಕೂಡ ನಿರ್ಣಾಯಕ ಪಾತ್ರ ವಹಿಸಿದ ಕೀರ್ತಿ ಡಿ.ಕೆ.ಶಿವಕುಮಾರ್ ಅವರಿಗೆ ಸಲ್ಲುತ್ತದೆ.
- ಕಾಂಗ್ರೆಸ್ ಪಕ್ಷದ ನಿಷ್ಠೆ ಮತ್ತು ಪಕ್ಷವನ್ನು ಸಂಕಷ್ಟಗಳಿಂದ ಪಾರುಮಾಡುವ ಮೂಲಕ ಡಿ.ಕೆ.ಶಿವಕುಮಾರ್ ಅವರು ಪಕ್ಷದ ನಾಯಕರಾದ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿಯವರ ಅತ್ಯಂತ ಆಪ್ತವಲಯದಲ್ಲಿ ಗುರುತಿಸಿಕೊಂಡವರು.
- ಜುಲೈ 2, 2020 ರಂದು, ದಿನೇಶ್ ಗುಂಡೂರಾವ್ ಅವರ ನಂತರ ಡಿ.ಕೆ.ಶಿವಕುಮಾರ್ ಅಧಿಕೃತವಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಡಿ.ಕೆ.ಶಿವಕುಮಾರ್ ಅವರು, ಪಕ್ಷ ಸಂಘಟನೆಯಲ್ಲಿ ಮಹತ್ವದ ಪಾತ್ರ ವಹಿಸಿದರು. ಕಾರ್ಯಕರ್ತರಲ್ಲಿ ಚೈತನ್ಯ ತುಂಬಿ ಪಕ್ಷವನ್ನು ಅಧಿಕಾರಕ್ಕೆ ತರಲು ಅವಿರತ ಶ್ರಮಿಸಿದರು.
- ಅನಂತರ 2023ರ ರಾಜ್ಯ ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಸಂಘಟಿಸಿ, ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದ ಡಿ.ಕೆ.ಶಿವಕುಮಾರ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರುವಲ್ಲಿ ಹಗಲೂ ರಾತ್ರಿಯೆನ್ನದೇ ಶ್ರಮಿಸಿದರು. ಅನಂತರ ಅವರೇ ಮುಖ್ಯಮಂತ್ರಿಯಾಗಬಹುದಿತ್ತು. ಆದರೆ, ಕಾರಣಾಂತರಗಳಿಂದ ಸಿಎಂ ಸ್ಥಾನವನ್ನು ತ್ಯಾಗ ಮಾಡಿದ ಡಿ.ಕೆ.ಶಿವಕುಮಾರ್ 20 ಮೇ 2023 ರಂದು ಶಿವಕುಮಾರ್ ಕರ್ನಾಟಕದ ಪ್ರಭಾವಿ ಉಪಮುಖ್ಯಮಂತ್ರಿಯಾದರು.
- ಡಿ.ಕೆ.ಶಿವಕುಮಾರ್ ರಾಜಕೀಯ ಪ್ರವೇಶ ಮಾಡಿದಾಗಿನಿಂದಲೂ ಪಕ್ಷನಿಷ್ಠೆಯಿಂದಾಗಿ ಗಾಂಧಿ ಕುಟುಂಬದ ಅಂತ್ಯಂತ ಆಪ್ತವಲಯದಲ್ಲಿ ಗುರುತಿಸಿಕೊಂಡವರು. ಹೀಗಾಗಿ ಅವರು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಲೇ ಉಪ ಮುಖ್ಯಮಂತ್ರಿ ಯಂತಹ ಮಹತ್ವದ ಸಚಿವ ಸ್ಥಾನದೊಂದಿಗೆ ಜಲಸಂಪನ್ಮೂಲ ಮತ್ತು ರಾಜಧಾನಿ ಬೆಂಗಳೂರು ಅಭಿವೃದ್ಧಿ ಖಾತೆಯನ್ನೂ ವಹಿಸಿಕೊಂಡರು.
- ಬೆಂಗಳೂರು ಅಭಿವೃದ್ಧಿ ಖಾತೆ ವಹಿಸಿಕೊಳ್ಳುತ್ತಲೇ ದೇಶದಲ್ಲಿ 'ಬ್ರ್ಯಾಂಡ್ ಬೆಂಗಳೂರು' ಮಾಡುವ ಸಂಕಲ್ಪದ ಘೋಷಣೆ ಮಾಡಿದರು. ಈ ದಿಸೆಯಲ್ಲಿ ಸಮಗ್ರ ಬೆಂಗಳೂರು ಅಭಿವೃದ್ಧಿಯ ನೀಲನಕ್ಷೆಯನ್ನು ಸಿದ್ಧಪಡಿಸಿ'ಬ್ರ್ಯಾಂಡ್ ಬೆಂಗಳೂರು' ಯಶಸ್ಸಿಗಾಗಿ ಶ್ರಮಿಸುತ್ತಿದ್ದಾರೆ.
- ಇಡಿ ಪ್ರಕರಣದಿಂದ ಹಿನ್ನಡೆಯಾಗಿದ್ದರೂ ಅವರೆಂದೂ ಅದಕ್ಕೆ ಹೆದರದೇ ಎದುರಿಸಿ, ನನ್ನದೇನೂ ತಪ್ಪಿಲ್ಲವೆಂದು ಎಲ್ಲವನ್ನೂ ಎದುರಿಸುತ್ತ ಬಂದಿರುವ ಅವರಿಗೆ ಇದೀಗ ದೊಡ್ಡಶಕ್ತಿ ಬಂದಂತಾಗಿದ್ದು, ಯಾವುದೇ ಸವಾಲನ್ನು ನಿರ್ಭೀತಿಯಿಂದ ಎದುರಿಸುವ ಎದೆಗಾರಿಕೆಯಿಂದ ಎಲ್ಲವನ್ನೂ ಗೆದ್ದು ಸತ್ಯ ನನ್ನನ್ನು ಕಾಪಾಡಿದೆ ಎನ್ನುತ್ತಾರೆ.
- ಗಾಂಧಿ ಕುಟುಂಬದ ಆಪ್ತರಾಗಿರುವುದರಿಂದಲೇ, ಡಿ.ಕೆ.ಶಿವಕುಮಾರ್ ಅವರಿಗೆ ತೆಲಂಗಾಣ ರಾಜ್ಯ ವಿಧಾನಸಭಾ ಚುನಾವಣೆಯ ಉಸ್ತುವಾರಿಯನ್ನೂ ವಹಿಸಲಾಗಿತ್ತು. ಈ ಸಂದರ್ಭದಲ್ಲೂ ಕೂಡ ತಾವೇ ಮುಂಚೂಣಿಯಲ್ಲಿ ನಿಂತು, ಚುನಾವಣೆ ಮುಗಿಯುವವರೆಗೂ ಮೇಲಿಂದ ಮೇಲೆ ತೆಲಂಗಾಣಕ್ಕೆ ಭೇಟಿ ನೀಡಿ, ಎಲ್ಲ ತಂತ್ರಗಾರಿಕೆಗಳನ್ನೂ ರೂಪಿಸುವ ಮೂಲಕ ಹತ್ತು ವರ್ಷಗಳಿಂದ ಅಧಿಕಾರದಲ್ಲಿ ಬೇರುಬಿಟ್ಟಿದ್ದ ಕೆ.ಚಂದ್ರಶೇಖರ ರಾವ್ ನೇತೃತ್ವದ ಬಿ.ಆರ್.ಎಸ್.ಪಕ್ಷವನ್ನು ಪರಾಭವಗೊಳಿಸಿ, ಪ್ರಚಂಡ ಬಹುಮತದೊಂದಿಗೆ ಕಾಂಗ್ರೆಸ್ ಸರ್ಕಾರ ಸ್ಥಾಪನೆ ಮಾಡುವಲ್ಲಿಯೂ ಡಿ.ಕೆ.ಶಿವಕುಮಾರ್ ಅವರು ಮಹತ್ವದ ಪಾತ್ರ ವಹಿಸಿದರು. ಕಾಂಗ್ರೆಸ್ ವರಿಷ್ಠರು ತಮಗೆ ಯಾವುದೇ ಕೆಲಸವನ್ನು ವಹಿಸಿದರೂ ಅದನ್ನು ಯಶಸ್ವಿಯಾಗಿ ಮಾಡಬಲ್ಲೆ ಎಂದು ತೋರಿಸಿಕೊಟ್ಟರು.
- ಕಾಂಗ್ರೆಸ್ ಪಕ್ಷದ ಅತ್ಯಂತ ನಿಷ್ಠರಾಗಿರುವ ಮತ್ತು ಕಾಂಗ್ರೆಸ್ ವರಿಷ್ಠರಿಗೂ ಕೂಡ ಡಿ.ಕೆ.ಶಿವಕುಮಾರ್ ಅವರು, ಪಕ್ಷದ ಯಾವುದೇ ಕೆಲಸವನ್ನು ಅತ್ಯಂತ ನಿಷ್ಠೆಯಿಂದಲೇ ಮಾಡುತ್ತಾರೆಂಬ ವಿಶ್ವಾಸ ಇರುವುದರಿಂದಲೇ ಅವರು ಇಂದು ದೊಡ್ಡ ನಾಯಕರಾಗಿ ಬೆಳೆದಿದ್ದಾರೆ. ಅವರ ಈ ಪಕ್ಷನಿಷ್ಠೆ ಕಾಂಗ್ರೆಸ್ ಪಕ್ಷದಲ್ಲಿ ಇಂದು ದೊಡ್ಡ ನಾಯಕರಾಗಿ ಮುಖ್ಯಮಂತ್ರಿಯಾಗಲು ಕಾರಣವಾಯಿತು. ಜೂನ್ 3ರಂದು ಡಿ.ಕೆ.ಶಿವಕುಮಾರ್ ಕರ್ನಾಟಕದ 25ನೇ ಮುಖ್ಯಮಂತ್ರಿಯಾಗಲಿದ್ದಾರೆ

## ಪಕ್ಷದ ಆಪದ್ಬಾಂಧವ

ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ವಿಲಾಸರಾವ್ ದೇಶಮುಖ್ ಅವರು 2002ರಲ್ಲಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾದ ಸಂದರ್ಭದಲ್ಲಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ನಿಕಟವಾಗಿ ಕೆಲಸ ಮಾಡಿದರು. ಮತದಾನದ ದಿನಾಂಕದವರೆಗೆ ಒಂದು ವಾರದ ವರೆಗೆ ಬೆಂಗಳೂರಿನ ಹೊರವಲಯದಲ್ಲಿರುವ ತಮ್ಮ ರೆಸಾರ್ಟ್‌ನಲ್ಲಿ ಮಹಾರಾಷ್ಟ್ರ ಶಾಸಕರಿಗೆ ಆತಿಥ್ಯ ನೀಡಿ, ದೇಶಮುಖ್ ಸರ್ಕಾರವನ್ನು ಉಳಿಯುವಂತೆ ಮಾಡಿದ ಶ್ರೇಯಸ್ಸು ಡಿ.ಕೆ.ಶಿವಕುಮಾರ್ ಅವರಿಗೆ ಸಲ್ಲುತ್ತದೆ. 2017 ರಲ್ಲಿ ಕಾಂಗ್ರೆಸ್ ಪ್ರಭಾವಿ ನಾಯಕ ಅಹ್ಮದ ಪಟೇಲ್ ಅವರು ರಾಜ್ಯಸಭೆಗೆ ಆಯ್ಕೆಯಾಗುವ ಮುನ್ನ, 42 ಗುಜರಾತ್ ಕಾಂಗ್ರೆಸ್ ಶಾಸಕರು ಬೇರೆ ರಾಜಕೀಯ ಪಕ್ಷಕ್ಕೆ ಹೋಗುವುದನ್ನು ತಪ್ಪಿಸಲು ಬೆಂಗಳೂರಿನಲ್ಲಿರುವ ತಮ್ಮ ರೆಸಾರ್ಟ್‌ನಲ್ಲಿಟ್ಟುಕೊಂಡು ಆತಿಥ್ಯ ನೀಡಿದ್ದಲ್ಲದೇ, ಅಹ್ಮದ್ ಪಟೇಲ್ ಅವರು ರಾಜ್ಯಸಭೆಗೆ ಆಯ್ಕೆಯಾಗುವಲ್ಲಿ ಮಹತ್ವದ ಪಾತ್ರವಹಿಸಿದರು.

## ಅಪಾರ ಆಡಳಿತಾನುಭವಿ

ಡಿ.ಕೆ.ಶಿವಕುಮಾರ್ ಅವರು ಪ್ರಥಮ ಬಾರಿಗೆ 1990ರಿಂದ 1992ರವರೆಗೆ ಕಾರಾಗೃಹ ಮತ್ತು ಗೃಹರಕ್ಷಕ ಖಾತೆ ಸಚಿವರಾಗಿ ಮತ್ತು 1994ರಿಂದ 1999ರವರೆಗೆ ನಗರಾಭಿವೃದ್ಧಿ ಸಚಿವರಾಗಿ ಸೇವೆ ಸಲ್ಲಿಸಿದರು. 2008 ರಿಂದ 2013 ರ ವರೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು, 2013ರಲ್ಲಿ ಮತ್ತೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿ, 2013 ರಿಂದ 2018ರ ವರೆಗೆ ಇಂಧನ ಸಚಿವರಾಗಿ ಕಾರ್ಯ ನಿರ್ವಹಿಸಿ ಪಾವಗಡದಲ್ಲಿ ದೇಶದ ಅತಿದೊಡ್ಡ ಸೋಲಾರ್ ವಿದ್ಯುತ್ ಸ್ಥಾವರ ಸ್ಥಾಪಿಸಿದ ಕೀರ್ತಿ ಡಿ.ಕೆ.ಶಿವಕುಮಾರ್ ಅವರಿಗೆ ಸಲ್ಲುತ್ತದೆ. ಅನಂತರ ರಾಜ್ಯದ ಭಾರೀ ನೀರಾವರಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾಗಿಯೂ ಕಾರ್ಯ ನಿರ್ವಹಿಸಿದರು. ಅನಂತರ ಕೆಪಿಸಿಸಿ ಅಧ್ಯಕ್ಷರಾಗಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತಂದ ಡಿ.ಕೆ.ಶಿವಕುಮಾರ್, ಬೃಹತ್ ನೀರಾವರಿ (ಜಲಸಂಪನ್ಮೂಲ) ಮತ್ತು ಬೆಂಗಳೂರು ನಗರಾಭಿವೃದ್ಧಿ ಖಾತೆಗಳನ್ನು ಹೊಂದಿರುವ ಉಪಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದು ಇದೀಗ ರಾಜ್ಯದ ಉನ್ನತ ಸ್ಥಾನಕ್ಕೇರಿದ್ದಾರೆ.

## ನಿತ್ಯ ಪಂಚಾಂಗ 1.06.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ–ವಸಂತ/ಗ್ರೀಷ್ಮ ಋತು, ಚಾಂದ್ರಮಾನ, ವೈಶಾಖ ಅಧಿಕ ಜ್ಯೇಷ್ಠ ಮಾಸ

ಅಧಿಕ ಜ್ಯೇಷ್ಠ ಬಹುಳ,
ಪಾಡ್ಯ, ಜ್ಯೇಷ್ಠ ನಕ್ಷತ್ರ,

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ವಾರ | ರಾಹುಕಾಲ | ಯಮಗಂಡ | ಗುಳಿಕಕಾಲ |
| ಭಾನು | ಸ.5.04–6.33 | 12.00–1.30 | 3.00–4.00 |
| ಸೋಮ | ಬೆ.7.20–9.04 | 10.30–12.00 | 1.30–12.00 |
| ಮಂಗಳ | ಮ.3.25–4.59 | 9.00–10.30 | 12.00–1.30 |
| ಬುಧ | ಮ.12.16–1.50 | 7.30–9.00 | 10.30–12.00 |
| ಗುರು | ಮ.1.50–3.29 | 6.00–7.30 | 9.00–10.30 |
| ಶುಕ್ರ | ಬೆ.10.42–12.16 | 3.00–4.30 | 7.30–9.00 |
| ಶನಿ | ಬೆ.9.07–10.41 | 1.30–3.00 | 6.00–7.30 |

# ಯು.ಟಿ. ಖಾದರ್ ಮಂಜುನಾಥ್ ಭಂಡಾರಿಗೆ ಸಚಿವ ಸ್ಥಾನ ಸಾಧ್ಯತೆ





ಬೆಂಗಳೂರು, ಮೇ31: ಡಿ.ಕೆ. ಶಿವಕುಮಾರ್‌ಅವರ ನೇತೃತ್ವದ ನೂತನ ಸಂಪುಟದಲ್ಲಿ ಕರಾವಳಿ ಭಾಗಕ್ಕೆ ಬಂಪರ್ ಕೊಡುಗೆ ಸಿಗುವುದು ಖಚಿತ ಎನ್ನಲಾಗುತ್ತಿದ್ದು, ಹಿರಿಯ ಕಾಂಗ್ರೆಸ್ ನಾಯಕರಾದ ಯು.ಟಿ. ಖಾದರ್ಮತ್ತು ಮಂಜುನಾಥ್ ಭಂಡಾರಿ ಅವರಿಗೆ ಮಂತ್ರಿ ಸ್ಥಾನ ಸಿಗುವ ಸಾಧ್ಯತೆ ದಟ್ಟವಾಗಿದೆ.ಹಿಂದಿನ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಕರಾವಳಿ ಜಿಲ್ಲೆಯ ಯಾವೊಬ್ಬ ಕಾಂಗ್ರೆಸ್ ನಾಯಕರಿಗೂ ಸಚಿವ ಸ್ಥಾನ ಸಿಕ್ಕಿರಲಿಲ್ಲ. ಆದರೆ, ರಾಜ್ಯದಲ್ಲಿ ರಾಜಕೀಯ ಬದಲಾವಣೆಯಾಗಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ, ಮುಂದಿನ ಚುನಾವಣೆಗಳ ದೃಷ್ಟಿಯಿಂದ ಕರಾವಳಿ ಭಾಗಕ್ಕೆ ಸೂಕ್ತ ಪ್ರಾತಿನಿಧ್ಯ ನೀಡಲು ಹೈಕಮಾಂಡ್ ನಿರ್ಧರಿಸಿದೆ. ಉಳ್ಳಾಲ (ಮಂಗಳೂರು) ಕ್ಷೇತ್ರದಿಂದ ಸತತ 5 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಯು.ಟಿ. ಖಾದರ್ ಅವರು ಈಗಾಗಲೇ ಮೂರು ಬಾರಿ ಸಚಿವರಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸಿದ್ದಾರೆ. ಅದರಲ್ಲೂ ಅವರು ಆರೋಗ್ಯ ಸಚಿವರಾಗಿದ್ದ ಅವಧಿಯಲ್ಲಿ ಜನಪ್ರಿಯ ಯೋಜನೆಗಳನ್ನು ಜಾರಿಗೆ ತಂದು ಉತ್ತಮ ಹೆಸರು ಸಂಪಾದಿಸಿದ್ದರು.:

ಸಿದ್ದರಾಮಯ್ಯ ಅವರ ಅವಧಿಯಲ್ಲಿ ಯು.ಟಿ. ಖಾದರ್ ಅವರು ವಿಧಾನಸಭಾ ಸ್ಪೀಕರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಆದರೆ, ಕರಾವಳಿಯಲ್ಲಿ ಪಕ್ಷವನ್ನು ಬಲಪಡಿಸಲು ಸಚಿವ ಸ್ಥಾನ ನೀಡುವುದು ಅನಿವಾರ್ಯವಾಗಿರುವುದರಿಂದ, ಅವರು ಸ್ಪೀಕರ್ ಹುದ್ದೆಯಿಂದ ಕೆಳಗಿಳಿದು ಸಂಪುಟ ಸೇರಲಿದ್ದಾರೆ ಎನ್ನಲಾಗಿದೆ. ಕರಾವಳಿಯಲ್ಲಿ ಕಾಂಗ್ರೆಸ್ ಮರುಸಂಘಟನೆಮುಂದಿನ ಚುನಾವಣೆಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಬೇಕಾದರೆ ಪ್ರಭಾವಿ ನಾಯಕರಿಗೆ ಸಚಿವ ಸ್ಥಾನ ನೀಡಲೇಬೇಕಾದ ಸಂದಿಗ್ಧತೆಗೆ ಕಾಂಗ್ರೆಸ್ ಸಿಲುಕಿದೆ. ಈ ಹಿನ್ನೆಲೆಯಲ್ಲಿ ಯು.ಟಿ. ಖಾದರ್ ಅವರೊಂದಿಗೆ ವಿಧಾನ ಪರಿಷತ್ ಸದಸ್ಯ ಮಂಜುನಾಥ್ ಭಂಡಾರಿ ಅವರಿಗೂ ಸಚಿವ ಸ್ಥಾನ ನೀಡುವ ಮೂಲಕ ಕರಾವಳಿ ಭಾಗದ ಮತದಾರರನ್ನು ಸೆಳೆಯಲು ಡಿ.ಕೆ. ಶಿವಕುಮಾರ್ ಮಾಸ್ಟರ್ ಪ್ಲಾನ್ ಮಾಡಿಕೊಂಡಿದ್ದಾರೆ.

# ಡಿ.ಕೆ.ಶಿವಕುಮಾರ್‌ಗೆ ಸಿಎಂ ಸ್ಥಾನ: ಶಾಸಕ ಗಣಿಗ ರವಿ ಹರ್ಷ



ಮಂಡ್ಯ, ಮೇ 31: ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾಗಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವುದು ಖಚಿತವಾಗು ತ್ತಿದ್ದಂತೆ, ಇತ್ತ ಮಂಡ್ಯ ಜಿಲ್ಲೆಯಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಸಿಕ್ಕರೆ ಅದು ನನಗೆ ಸಿಕ್ಕಹಾಗೆಯೇ. ಆದರೆ, ಹೊಸ ಸರ್ಕಾರದ ಸಂಪುಟದಲ್ಲಿ ಮಂಡ್ಯ ಜಿಲ್ಲೆಗೆ ಎರಡು ಸಚಿವ ಸ್ಥಾನಗಳನ್ನು ನೀಡಬೇಕು ಎನ್ನುವುದು ನನ್ನ ಬಲವಾದ ಬೇಡಿಕೆಯಾಗಿದೆ ಎಂದು ಮಂಡ್ಯ ಶಾಸಕ ಗಣಿಗ ರವಿಕುಮಾರ್ ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಅವರ ಮುಖ್ಯಮಂತ್ರಿ ಪಟ್ಟಾಭಿಷೇಕದ ಕುರಿತು ಹರ್ಷ ವ್ಯಕ್ತಪಡಿಸಿದರು. ಡಿಕೆಶಿ ಅವರ 40 ವರ್ಷಗಳ ರಾಜಕೀಯ ಪರಿಶ್ರಮಕ್ಕೆ ಇಂದು ಸೂಕ್ತಫಲ ಸಿಕ್ಕಿದೆ. ನನ್ನ ವೈಯಕ್ತಿಕ ಕಷ್ಟದ ಕಾಲದಲ್ಲಿ ಡಿಕೆಶಿ ಅವರು ಯಾವಾಗಲೂ ನನ್ನೊಂದಿಗೆ ನಿಂತಿದ್ದರು. ಅವರು ಮುಖ್ಯಮಂತ್ರಿ ಆಗುತ್ತಿರುವುದು ನನಗೆ ಅತ್ಯಂತ ಖುಷಿ ತಂದಿದೆ.

ಇನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದಿರುವ ಸಿದ್ದರಾಮಯ್ಯ ಅವರು ತಮ್ಮ ಅವಧಿಯಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದಂತೆ ಅತ್ಯುತ್ತಮ ಆಡಳಿತ ನಡೆಸಿದ್ದರೆ. ಅದೇ ಮಾದರಿಯ ಜನಪರ ಆಡಳಿತವನ್ನು ಡಿಕೆ ಶಿವಕುಮಾರ್ ಕೂಡ ರಾಜ್ಯದಲ್ಲಿ ಮುಂದುವರಿಸಿಕೊಂಡು ಹೋಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ವಿರೋಧ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಗಣಿಗ ರವಿಕುಮಾರ್, ಇಷ್ಟು ದಿನ ಸಿದ್ದರಾಮಯ್ಯ ಅವರ ಆಡಳಿತ ಸರಿಯಿಲ್ಲ ಎಂದು ಬೊಬ್ಬೆ ಹೊಡೆಯುತ್ತಿದ್ದ ವಿರೋಧ ಪಕ್ಷದ ನಾಯಕರು, ಈಗ ಸಿದ್ದರಾಮಯ್ಯ ಅವರಿಗೆ ಅನ್ಯಾಯವಾಗಿದೆ ಎಂದು ಕಣ್ಣೀರು ಸುರಿಸುತ್ತಿದ್ದಾರೆ. ಇದು ವಿರೋಧ ಪಕ್ಷಗಳ ಇಬ್ಬಂದಿ ನೀತಿಯನ್ನು ತೋರಿಸುತ್ತದೆ. ಕಾಂಗ್ರೆಸ್ನಲ್ಲಿ ನಾಯಕತ್ವ ಬದಲಾವಣೆ ಪ್ರಕ್ರಿಯೆಯಲ್ಲಿ ದೊಡ್ಡ ಮಟ್ಟದ ಜಗಳ, ಅಸಮಾಧಾನ ಸ್ಫೋಟಗೊಳ್ಳಬಹುದು ಎಂದು ಅವರು ಹಗಲು ಗನಸು ಕಾಣುತ್ತಿದ್ದರು. ಆದರೆ, ನಮ್ಮ ಹೈಕಮಾಂಡ್ ಅತ್ಯಂತ ಸುಲಭವಾಗಿ ಮತ್ತು ಸೌಹಾರ್ದ ಯುತವಾಗಿ ಅಧಿಕಾರ ಹಸ್ತಾಂತರ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ ಎಂದು ತಿರುಗೇಟು ನೀಡಿದರು. ನೂತನ ಸಂಪುಟ ಸೇರ್ಪಡೆ ಹಾಗೂ ಮಂಡ್ಯ ಜಿಲ್ಲೆಯ ಕೋಟಾದ ಕುರಿತು ಮಾತನಾಡಿದ ಅವರು, ನನಗೆ ವೈಯಕ್ತಿಕವಾಗಿ ಸಚಿವ ಸ್ಥಾನದ ಮೇಲೆ ಯಾವುದೇ ಆಸೆ ಇಲ್ಲ. ನಾನು ಮೊದಲ ಬಾರಿಗೆ ಶಾಸಕನಾಗಿ ಗೆದ್ದಿದ್ದೇನೆ. ನನ್ನ ಕ್ಷೇತ್ರಕ್ಕೆ ಈಗಾಗಲೇ ಸಾಕಷ್ಟು ಅನುದಾನ ಸಿಕ್ಕಿದ್ದು, ನಾನಿನ್ನು ಕ್ಷೇತ್ರದಲ್ಲೇ ನಿಂತು ಕೆಲಸ ಮಾಡಬೇಕಿದೆ ಎಂದರು.

ಸಂಪುಟದಲ್ಲಿ ಹಿರಿಯರಿಗೆ ಗೌರವಯುತ ಅವಕಾಶ ಸಿಗಲಿ, ಅದರ ಜೊತೆಯಲ್ಲೇ ಅರ್ಹತೆ ಇರುವ ಹೊಸಬರಿಗೂ ಮಂತ್ರಿ ಸ್ಥಾನ ನೀಡಬೇಕು. ಅಶೋಕ್ ರೈ, ಶಿವಗಂಗಾ ಬಸವರಾಜು, ಭರತ್ ರೆಡ್ಡಿ ಹಾಗೂ ಪ್ರದೀಪ್ ಈಶ್ವರ್ ಅವರಂತಹ ಯುವ ಮತ್ತು ಹೊಸ ಮುಖಗಳಿಗೆ ಹೈಕಮಾಂಡ್ ಮನ್ನಣೆ ನೀಡಬೇಕು ಎಂದು ಬ್ಯಾಟ್ ಬೀಸಿದರು.

# ಸಿರಿ ಮಾತೃಶ್ರೀ ಕೈಗಾರಿಕಾ ಪಾರ್ಕ್ ಲೋಕಾರ್ಪಣೆ

## ಮಹಿಳಾ ಉದ್ಯಮ, ಇದು ಲಾಭಕ್ಕಾಗಿ ಹುಟ್ಟು ಹಾಕಿದ ಸಂಸ್ಥೆಯಲ್ಲ. ಮಹಿಳಾ ಸ್ವಾವಲಂಬನೆ ಮತ್ತು ಆತ್ಮಗೌರವದ ಪ್ರತೀಕ: ಉಪರಾಷ್ಟ್ರಪತಿ ಪ್ರತಿಪಾದನೆ







ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಸನ್ಮಾನಿಸಿದರು.

ಧರ್ಮಸ್ಥಳ, ಮೇ 31: ಮತಾಂತರ ಸಂಘರ್ಷವನ್ನು ಸೃಷ್ಟಿಸುತ್ತದೆ. ಅದು ಇರುವಲ್ಲಿ ಸಾಮರಸ್ಯಕ್ಕೆ ಅವಕಾಶ ಇಲ್ಲ. ಧರ್ಮಗಳ ನಡುವೆ ಸಾಮರಸ್ಯ ಕಾಪಾಡಬೇಕಾದರೆ ಧಾರ್ಮಿಕ ಮತಾಂತರಕ್ಕೆ ಪೂರ್ಣವಿರಾಮ ಹಾಕಬೇಕು' ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು. ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ ಬೆಳ್ತಂಗಡಿಯಲ್ಲಿ ನಿರ್ಮಿಸಿರುವ 'ಸಿರಿ ಮಾತೃಶ್ರೀ ಕೈಗಾರಿಕಾ ಪಾರ್ಕ್' ಅನ್ನು ಭಾನುವಾರ ಇಲ್ಲಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು. ಹಿಂದೂ ಮೂಲಭೂತವಾದಿ ಯನ್ನು ಯಾವತ್ತೂ ನೋಡಿಲ್ಲ. ಹಿಂದೂಗಳು ಬೇರೆ ಧರ್ಮವನ್ನು ದ್ವೇಷಿಸುವುದನ್ನು ನೋಡಿಲ್ಲ. ನಾವು ಎಲ್ಲ ಧರ್ಮಗಳನ್ನು ಗೌರವದಿಂದ ಕಾಣುತ್ತೇವೆ. ನಾವು ಎಲ್ಲ ಧರ್ಮಗಳ ಪರ ಇರುವವರು. ಆದರೆ ಮತಾಂತರದ ವಿರುದ್ಧ ಇದ್ದೇವೆ' ಎಂದರು. 21ನೇ ಶತಮಾನದಲ್ಲೂ ಮತಾಂತರದ ಔಚಿತ್ಯ ಇದೆಯೇ ಎಂದು ಯೋಚಿಸಬೇಕು. ಎಲ್ಲರಿಗೂ ದೇವರ ಆರಾಧನೆಯ ಹಕ್ಕು ಇದೆ. ದೇವರು ಒಬ್ಬನೇ. ಎಲ್ಲ ಧರ್ಮಗಳೂ ಮಾನವರ ಏಳಿಗೆಗೆ ಶ್ರಮಿಸುತ್ತಿವೆ. ಎಲ್ಲರಿಗೂ ಭಕ್ತಿ ಮುಖ್ಯವೇ ಹೊರತು ಅದು ಕ್ರೈಸ್ತ, ಇಸ್ಲಾಂ, ಹಿಂದೂ ಭಕ್ತಿಯೇ ಎಂಬುದು ಮುಖ್ಯವಲ್ಲ' ಎಂದರು.

ಅಲ್ಲಾಹ್, ಯೇಸುಕ್ರಿಸ್ತರನ್ನು ದೇವರು ಎಂದು ಒಪ್ಪಲು ಹಿಂದೂಗಳಿಗೆ ಹಿಂಜರಿಕೆ ಇಲ್ಲ. ಆದರೆ ನಾವು ಮಂಜುನಾಥ ಸ್ವಾಮಿ ಮೇಲೆ ಹೊಂದಿರುವ ಭಕ್ತಿಯನ್ನು ಬದಲಿಸುವಂತೆ ಬಲವಂತ ಮಾಡಬೇಡಿ ಎಂದು ಹೇಳುತ್ತೇವೆ. ಇದರಲ್ಲಿ ಬೇರೆ ಧರ್ಮಕ್ಕೆ ಹಾನಿ ಮಾಡುವ ಅಂಶವೇನಿದೆ ಎಂದು ಅವರು ಪ್ರಶ್ನಿಸಿದರು.



ಕಾರ್ಯಕ್ರಮಕ್ಕೂ ಮುನ್ನ ಉಪರಾಷ್ಟ್ರಪತಿಯವರು ಧರ್ಮಸ್ಥಳದ ದೇವಾಲಯಕ್ಕೂ ಭೇಟಿ ನೀಡಿ, ಶ್ರೀಮಂಜುನಾಥ ಸ್ವಾಮಿಯ ದರ್ಶನ ಪಡೆದು, ಪೂಜೆ ಸಲ್ಲಿಸಿದರು. ಭಕ್ತರೊಂದಿಗೆ ಸಂವಾದ ನಡೆಸಿ, ಧರ್ಮಸ್ಥಳದಲ್ಲಿ ನಡೆಯುತ್ತಿರುವ ಅನ್ನದಾನ, ವಿದ್ಯಾದಾನ ಹಾಗೂ ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಜಾತ್ಯತೀತ ಎಂದರೆ ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣುವುದು. ಎಲ್ಲ ಧಾರ್ಮಿಕ ವ್ಯಕ್ತಿಗಳನ್ನು ಗೌರವದಿಂದ ಕಾಣುವುದು. ಧರ್ಮವನ್ನು ಒಲೈಕೆ ಮಾಡುವುದಲ್ಲ. ನನಗೆ ಮಂಜುನಾಥ ಸ್ವಾಮಿ ಮೇಲೆ ನಂಬಿಕೆ ಇದೆ. ಬೇರೆಯಾರಾದರೂ ಯೇಸುಕ್ರಿಸ್ತರ ಮೇಲೆ ನಂಬಿಕೆ ಇಟ್ಟುಕೊಂಡರೆ ಅದಕ್ಕೆ ಆಭ್ಯಂತರ ಇಲ್ಲ ಎಂದರು. ಗ್ರಾಮೀಣ ಅಭಿವೃದ್ಧಿ ಆಗಬೇಕು ಎಂದು ರಾಜಕೀಯ ವ್ಯಕ್ತಿಗಳಿಂದ ಹಿಡಿದು ಎಲ್ಲರೂ ಬಯಸುತ್ತಾರೆ. ಆದರೆ ಇಲ್ಲಿ ಕುಳಿತಿರುವ ಗ್ರಾಮೀಣ ಮಹಿಳೆಯರು ಇದನ್ನು ಸಾಧಿಸಿ ತೋರಿಸಿದ್ದಾರೆ.

ವೀರೇಂದ್ರ ಹೆಗ್ಗಡೆ ಅವರ ಕಳಕಳಿ ಹಾಗೂ ಸಾಮಾಜಿಕ ಜವಾಬ್ದಾರಿಯಿಂದ, ಹೇಮಾವತಿ ವಿ.ಹೆಗ್ಗಡೆ ಪ್ರೇರಣೆಯಿಂದ ಗ್ರಾಮೀಣ ಮಹಿಳೆಯರ ಸಬಲೀಕರಣ ಸಾಧ್ಯವಾಗಿದೆ. ಮಹಿಳೆಯರು ಗೌರವಯುತ ಬದುಕು ರೂಪಿಸಿಕೊಳ್ಳಲು ಅವಕಾಶ ಸಿಕ್ಕಿದೆ' ಎಂದರು.

ಆಧ್ಯಾತ್ಮಿಕತೆಯ ಮೂಲಕವೂ ಸಾಮಾಜಿಕ ಬದಲಾವಣೆ ಸಾಧ್ಯ ಎಂದು ವೀರೇಂದ್ರ ಹೆಗ್ಗಡೆ ತೋರಿಸಿದ್ದಾರೆ. ಆಡಳಿತದಲ್ಲಿ ಶಿಸ್ತು, ಕಾಯಕದಲ್ಲಿ ಶ್ರದ್ಧೆಯ ಮೂಲಕ ದೇಶ ಕಟ್ಟುವ ಮಾದರಿಯನ್ನು ಮುಂದಿಟ್ಟಿದ್ದಾರೆ. ಈ ಕ್ಷೇತ್ರವು ಶಿಕ್ಷಣ, ಆರೋಗ್ಯ ಸಂಸ್ಕೃತಿ, ಪರಂಪರೆಯ ರಕ್ಷಣೆ, ಪರಿಸರ ಸುಸ್ಥಿರತೆ, ಸಾಮಾಜಿಕ ಬದಲಾವಣೆಗಾಗಿ ಕೈಗೊಂಡ ಕಾರ್ಯಗಳನ್ನು ನೋಡಿ ಹೆಮ್ಮೆಯಾಗುತ್ತದೆ' ಎಂದರು.

ನಮ್ಮ ಸೋದರಿಯರು ತಾಯಂದರಿ ತಯಾರಿಸಿದ ಸಿರಿ ಉತ್ಪನ್ನಗಳು ಗುಣಮಟ್ಟಕ್ಕೆ ಸಾಕ್ಷಿ. ಈ ಕೈಗಾರಿಕಾ ಪಾರ್ಕ್ ಯಶಸ್ವಿ ಆಗಲಿದೆ ಎಂದರು. ಈ ಕ್ಷೇತ್ರದಲ್ಲಿ ಧರ್ಮಗಳಿಗೂ ಮೀರಿ ಬಡವರ ಸೇವೆ ಪ್ರತಿನಿತ್ಯ ನಿರಂತರವಾಗಿ ನಡೆಯುತ್ತಿದೆ. ಸಮಾಜ ಸೇವಾ ಸಂಸ್ಥೆಗಳ ಮೂಲಕ ಸಮಾಜಿಕ ಚಳವಳಿಯೇ ನಡೆಯುತ್ತಿದೆ. ಸಹಬಾಳ್ವೆ ಸಾಮರಸ್ಯ ಶತಮಾನಗಳಿಂದ ಇಲ್ಲಿ ನೆಲೆಸಿದೆ. ಪರಸ್ಪರ ಗೌರವದಿಂದ ಕಾಣುವ, ಅವಕಾಶಗಳನ್ನು ಸೃಷ್ಟಿಸುವ ಎಲ್ಲರನ್ನು ಒಳಗೊಳ್ಳುವ ಅಭಿವೃದ್ಧಿಯ ಮಾದರಿ ಇದು. ಪ್ರಧಾನಿ ನರೇಂದ್ರ ಮೋದಿ ಅವರ ಆಶಯವೂ ಇದೇ ಆಗಿದೆ ಎಂದರು.

ಡಾ. ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, ಮಹಿಳಾ ಉದ್ಯಮಿಗಳನ್ನು ರೂಪಿಸುತ್ತಿರುವ ಸಿರಿ, ಸಮೃದ್ಧಿಯ ಸಂಕೇತ. ಇದು ಲಾಭಕ್ಕಾಗಿ ಹುಟ್ಟು ಹಾಕಿದ ಸಂಸ್ಥೆಯಲ್ಲ. ಮಹಿಳಾ ಸ್ವಾವಲಂಬನೆ ಮತ್ತು ಆತ್ಮಗೌರವದ ಪ್ರತೀಕವಿದು. ಸುಮಾರು 3000 ಮಂದಿಗೆ ನೇರ ಹಾಗೂ 10 ಸಾವಿರ ಮಂದಿಗೆ ಪರೋಕ್ಷವಾಗಿ ನೆರವಾಗಿದೆ. ಗ್ರಾಮೀಣ ಬಡ ಹಾಗೂ ದುರ್ಬಲ ವರ್ಗದ ಮಹಿಳೆಯರ ನಿಜವಾದ ಸಾಮಾಜಿಕ ಪರಿವರ್ತನೆ ಎಂದರೆ ಇದುವೇ. ರಾತ್ರಿ ಬೆಳಗಾಗುವಷ್ಟರಲ್ಲಿ ನಡೆದಿದ್ದಲ್ಲ. ಇದರ ಹಿಂದೆ ದಶಕಗಳ ತಾಳ್ಮೆ, ಪರಿಶ್ರಮ ಇದೆ. ಪ್ರಯೋಗಶೀಲತೆ ಅಡಗಿದೆ ಎಂದರು.'ನಾವು ಬೇರೆ ದೇಶಗಳ ಮೇಲಿನ ಅವಲಂಬನೆ ಕಡಿಮೆ ಮಾಡಬೇಕಿದೆ. ಆತ್ಮನಿರ್ಭರತೆಗೆ, ಸ್ಥಳಿಯ ಉತ್ಪನ್ನಗಳಿಗೆ ದನಿಯಾಗಬೇಕಿದೆ' ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಮಾತೃಶ್ರೀ ಕೈಗಾರಿಕಾ ಪಾರ್ಕ್ ಉದ್ಯೋಗ ಗ್ರಾಮಿಣ ಮಹಿಳೆ ಆರ್ಥಿಕ ಸಶಕ್ತೀಕರಣವು ಆತ್ಮನಿರ್ಭರ ಭಾರತ ನಿರ್ಮಾಣದತ್ತ ಮಹತ್ವದ ಹೆಜ್ಜೆ. ಗ್ರಾಮ ವಿಕಾಸ ಯೋಜನೆ ಗ್ರಾಮೀಣ ಭಾಗದ ಲಕ್ಷಾಂತರ ಜನರ ಬದುಕು ಬದಲಿಸಿದೆ. ಉದ್ಯೋಗ ಹೆಚ್ಚಿದಷ್ಟೂ ದೇಶ ಸಮೃದ್ಧವಾಗುತ್ತದೆ' ಎಂದರು. ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯ ಸಭಾ ಸದಸ್ಯ ವೀರೇಂದ್ರ ಹೆಗ್ಗಡೆ, ಬೆಳ್ತಂಗಡಿಯ ರೆಂಕೆದ ಗುತ್ತು ಬಳಿ ಏಳು ಎಕರೆ ಪ್ರದೇಶದಲ್ಲಿ 1.5 ಲಕ್ಷ ಚ.ಅಡಿ ಜಾಗದಲ್ಲಿ ಸುಮಾರು 71 ಕೋಟಿ ಮೊತ್ತದಲ್ಲಿ ಸುಸಜ್ಜಿತ ಸಿರಿ ಕೈಗಾರಿಕಾ ಪಾರ್ಕ್ ನಿರ್ಮಾಣವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ 2000 ಸ್ವಸಹಾಯ ಸಂಘಗಳು ಸಿರಿ ಅಡಿ ಕಾರ್ಯನಿರ್ವಹಿಸುತ್ತಿವೆ. ಗುಣಮಟ್ಟದ ಆಹಾರೋತ್ಪನ್ನಗಳು, ಸಿರಿಧಾನ್ಯ ಉತ್ಪನ್ನಗಳು, ಜವಳಿ, ಅಗರಬತ್ತಿ, ರೆಕ್ಸಿನ್ ಸಾಮಗ್ರಿಗಳು ಹಾಗೂ ಸ್ವಚ್ಛತಾ ಸಾಮಗ್ರಿಗಳನ್ನು ಈ ಕೈಗಾರಿಕಾ ಪಾರ್ಕ್ ನಲ್ಲಿ ತಯಾರಿಸಲಾಗುತ್ತದೆ. ಸುಮಾರು 1000ಕ್ಕೂ ಅಧಿಕ ಮಹಿಳೆಯರಿಗೆ ಉದ್ಯೋಗ ಸಿಗಲಿದೆ ಎಂದು ತಿಳಿಸಿದರು. ಸಿರಿ ಕೈಪಿಡಿಯನ್ನು ರಾಧಾಕೃಷ್ಣನ್ ಬಿಡುಗಡೆಮಾಡಿದರು. ಸಿರಿ ಕೈಗಾರಿಕಾ ಪಾರ್ಕ್ ನ ಫಲಕ ಅನಾವರಣಗೊಳಿಸಿದರು.

ಸಂಸದ ಕ್ಯಾ.ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್, ಹೇಮಾವತಿ ವಿ. ಹೆಗ್ಗಡೆ, ಎಸ್ ಡಿಎಂ ಸೊಸೈಟಿ ಉಪಾಧ್ಯಕ್ಷ ಸುರೇಂದ್ರ ಕುಮಾರ್ ಭಾಗವಹಿಸಿದ್ದರು.

# ರಾಜಕಾರಣಿಗಳ ಜೊತೆ ಪತ್ರಕರ್ತರಿಗೂ ಸಾಮಾಜಿಕ ಜವಾಬ್ದಾರಿ ಇದೆ: ಬೊಮ್ಮಾಯಿ

**ರಾಜಕಾರಣಿಗಳು ಹಾಗೂ ಪತ್ರಕರ್ತರ ಬುದ್ಧಿವಂತಿಕೆ ಸಮಾಜದ ಒಳಿತಿಗೆ ಬಳಕೆ ಆಗಬೇಕು: ಬಸವರಾಜ ಬೊಮ್ಮಾಯಿ**



ಈ ಸಂದರ್ಭದಲ್ಲಿ ಸಂಸದ ಡಾ. ಕೆ. ಸುಧಾಕರ, ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಬೆಂಗಳೂರು ಉತ್ತರ ವಿವಿ ಕುಲಪತಿ ಡಾ. ಬಿ.ಕೆ. ರವಿ, ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಜಿ.ಪ್ರಭು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಜಿಲ್ಲಾಧ್ಯಕ್ಷ ರವಿಕುಮಾರ್ ಸೇರಿದಂತೆ ಅನೇಕ ಹಿರಿಯ ಪತ್ರಕರ್ತರು ಪಾಲ್ಗೊಂಡಿದ್ದರು.

**ಚಿಕ್ಕಬಳ್ಳಾಪುರ, ಮೇ 31:** ರಾಜಕಾರಣಿ ಹಾಗೂ ಅಧಿಕಾರದಲ್ಲಿರುವವರಿಗೆ ಸಾರ್ವಜನಿಕವಾಗಿರುವ ಜವಾಬ್ದಾರಿ ಎಷ್ಟಿದೆಯೋ ಅಷ್ಟೇ ಜವಾಬ್ದಾರಿ ಪತ್ರಕರ್ತರಿಗೂ ಇದೆ. ನಾವು ತೆಗೆದುಕೊಳ್ಳುವ ತೀರ್ಮಾಣ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ತಾವು ಬರೆಯುವ ವರದಿ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ನಮ್ಮ ಬುದ್ದಿವಂತಿಕೆ ಸಮಾಜದ ಒಳಿತಿಗೆ ಬಳಕೆ ಆಗಬೇಕು. ಸಮಾಜದಲ್ಲಿನ ದೃಷ್ಕೃತ್ಯ ಮುಚ್ಚುವುದಕ್ಕೆ ಬಳಕೆ ಆಗಬಾರದು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಚಿಕ್ಕಬಳ್ಳಾಪುರದಲ್ಲಿ ನಡೆದ ಚಿಕ್ಕಬಳ್ಳಾಪುರ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಕರ್ತರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದಿಕ್ಸೂಚಿ ಭಾಷಣ ಮಾಡಿದರು. ಒಬ್ಬ ರಾಜಕಾರಣಿ ಅಧಿಕಾರದಲ್ಲಿದ್ದಾಗ ಕರೆಯುವುದು ಬಹಳ ಸಹಜ.ಆದರೆ ಅಧಿಕಾರದಲ್ಲಿ ಇಲ್ಲದಿರುವಾಗ ನನ್ನನ್ನು ನೆನಪು ಮಾಡಿಕೊಂಡು ಕರೆದಿರುವುದು ನಿಮ್ಮದೊಡ್ಡ ಗುಣ. ಇದು ನಿಮ್ಮ ಕೃತಜ್ಞತಾ ಗುಣ. ಬೈಬಲ್ನಲ್ಲಿ ಹೇಳುತ್ತಾರೆ ಕೃತಜ್ಞತೆ ಇಲ್ಲದವರು ಮನುಷ್ಯರು ಅಲ್ಲವೇ ಅಲ್ಲ. ಜಾಗತೀಕರಣ, ಖಾಸಗೀಕರಣದ ನಡುವೆ ನಾವು ಅಂತಕರಣವನ್ನು ಮರೆಯುತ್ತಿದ್ದೇವೆ. ಅಂತಕರಣ ಇಲ್ಲದಿರುವ ಮನುಷ್ಯರ ಸಂಬಂಧವೇ ಇರುವುದಿಲ್ಲ. ಅಂತದರಲಿ ತಾವು ಅಂತಕರಣವನ್ನು ಪುನರ್ ಸ್ಥಾಪನೆ ಮಾಡಿದ್ದೀರಿ ಎಂದು ಹೇಳಿದರು.

**ಪ್ರಶ್ನಿಸುವ ಅಧಿಕಾರ**

ಯಾವುದಾದರೂ ಒಂದು ಶಕ್ತಿ ಬೆಳೆಯಬೇಕೆಂದರೆ ಅದನ್ನು ಪ್ರಶ್ನೆ ಮಾಡಲೇಬೇಕು. ನಂಬಿಕೆಗೆ ಯಾವುದೇ ಆಧಾರ ಇಲ್ಲ. ಆದರೆ, ವಿಜ್ಞಾನಕ್ಕೆ ಆಧಾರ ಬೇಕು. ವಿಜ್ಞಾನಕ್ಕೆ ತರ್ಕಬದ್ಧ ಚಿಂತನೆ ಬೇಕಾದರೆ ಹೊಸ ಚಿಂತನೆ ಹುಟ್ಟು ಹಾಕುತ್ತದೆ. ಪ್ರಜಾಪಭುತ್ತದಲ್ಲಿ ಪಶ್ನೆ ಕೇಳುವ ಅಧಿಕಾರ ಕೊಟ್ಟಿರುವುದು ಪತ್ರಕರ್ತರಿಗೆ ನೀವು ಎಷ್ಟು ಅರ್ಥಗರ್ಭವಾದ ಪ್ರಶ್ನೆಗಳನ್ನು ಕೇಳುತ್ತಿರೋ ಅಷ್ಟು ಒಳ್ಳೆಯ ವಿಚಾರಗಳು ಸಮಾಜಕಷ್ಟೇ ಅಲ್ಲದೇ ರಾಜಕಾರಣಕ್ಕೂ ಬರುತ್ತದೆ. ನೀವು ಕೇಳುವ ಪಶ್ನೆ ಸರಳವಾಗಿದ್ದರೆ ಸರಿಯಾದ ಉತ್ತರ ಬರುವುದಿಲ್ಲ. ಪಶ್ನೆ ಕೇಳುವ ಹಕ್ಕು ಪತ್ರಕರ್ತರಿಗಿದೆ. ಇತ್ತೀಚಿನ ದಿನಗಳಲ್ಲಿ ಬಹಳ ಕಂಫರ್ಟ್ ರೋನ್ ಇದೆ. ರಾಜಕಾರಣಿಗಳು ಮತ್ತು ಪತಕರ್ತರ ನಡುವೆ ಒಳ್ಳೆಯ ಸಂಬಂಧ ಇದೆ. ಪತ್ರಕರ್ತರು ಮತ್ತು ರಾಜಕಾರಣಿಗಳ ನಡುವೆ ಒಳ್ಳೆಯ ಸಂಬಂಧ ಇದ್ದರೆ ಕಳ್ಳರು ಪೊಲೀಸರ ನಡುವಿನ ಸಂಬಂಧ ಇದ್ದಂಗೆ ಆಗಿದೆ. ಎಲ್ಲಿವರೆಗೂ ಕಠಿಣ ಪಶ್ನೆ ಕೇಳುವುದಿಲ್ಲವೋ ಅಲ್ಲಿಯವರೆಗೂ ರಾಜಕಾರಣಿಗಳಿಂದ ಒಳ್ಳೆಯ ಆಡಳಿತ ನಿರೀಕ್ಷೆ ಮಾಡಬೇಡಿ ಎಂದು ಹೇಳಿದರು.

ಹುಬ್ಬಳ್ಳಿಯಲ್ಲಿ ಮದನ್ ಮೋಹನ್ ಹಿರಿಯ ಪತ್ರಕರ್ತರಿದ್ದರು. ಅವರು ಪತ್ರಿಕಾಗೋಷ್ಠಿಗೆ ಬಂದಾಗ ದೊಡ್ಡವರಿಗೂ ಭಯವಾಗುತ್ತಿತ್ತು. ಅವರು ಕಠಿಣ ಪ್ರಶ್ನೆಗಳನ್ನು ಕೇಳುತ್ತಿದ್ದರು. ಆದರೆ, ಅವರು ಸುದ್ದಿಯನ್ನು ಸಕಾರಾತ್ಮಕವಾಗಿ ಬರೆಯುತ್ತಿದ್ದರು. ಅದು ಒಂದು ಕಲೆ, ಆಡಳಿತಗಾರರಿಗೆ ಒಳ್ಳೆಯ ಪಶ್ನೆ ಕೇಳಿದರೆ ಆಡಳಿತಗಾರರಿಗೂ ಉತ್ತಮ ಆಡಳಿತ ನಡೆಸಲು ಅನುಕೂಲವಾಗುತ್ತದೆ. ಎಲ್ಲರ ಮನೆಯಲ್ಲಿಯೂ ಇಡ್ಲಿ ದೋಸೆ ಇದ್ದೇ ಇರುತ್ತದೆ. ಅದರ ಬಗ್ಗೆ ಎಷ್ಟು ದಿನ ಬರೆಯುತ್ತೀರಿ ಎಂದು ಪಶ್ನಿಸಿದರು.

**ಗಂಡ ಹೆಂಡತಿ ಸಂಬಂಧ**

ಈಗ ಡಿಜಿಟಲ್ ಪತ್ತಿಕೋದ್ಯಮ ಬಂದಿದೆ. ಅದರಲ್ಲಿ ಸತ್ಯ ಎಷ್ಟು ಸುಳ್ಳು ಎಷ್ಟು ಅನ್ನುವುದು ಗೊತ್ತಿಲ್ಲ. ರಾಜಕಾರಣಿಗಳಿಗೆ ಪತಕರ್ತರಿಗೆ ಅವಿನಾಭಾವ ಸಂಬಂಧ. ಗಂಡ ಹೆಂಡತಿ ಸಂಬಂಧ ಇದ್ದಹಾಗೆ ಪತ್ರಿಕೆ ಇಲ್ಲದಿದ್ದರೆ ರಾಜಕಾರಣಿಗಳ ಪರಿಸ್ಥಿತಿ ಏನಾಗುತ್ತಿತ್ತು. ಅವರು ಮಾಡಿರುವ ಕೆಲಸ, ಅವರ ಸರ್ಕಾರಕ್ಕೆ ಬೇಕಾಗಿರುವ ಪ್ರಚಾರ ಸಿಗದಿದ್ದರೆ ರಾಜಕಾರಣಿಗೆ ಯಾವುದೇ ಪ್ರಯೋಜನ ಇಲ್ಲ. ಪತ್ರಿಕೆಗಳಿಗೂ ರಾಜಕಾರಣಿಯ ಸುದ್ದಿ ಬರೆಯದಿದ್ದರೆ ಅವರ ಪತ್ರಿಕೆಯನ್ನೂ ಓದುವುದಿಲ್ಲ. ಇದೊಂದು ರೀತಿ ಗಂಡ ಹೆಂಡತಿ ಸಂಬಂಧ ಇದ್ದಹಾಗೆ ಎಂದರು. ರಾಜಕಾರಣಿಗೆ ನಿವೃತ್ತಿ ಇಲ್ಲ. ರಾಜಕಾರಣಕ್ಕೆ ಬರಲು ಅರ್ಹತೆಯೂ ಇಲ್ಲ. ಹಾಗೇ ಪತ್ರಕರ್ತರಿಗೆ ಎಲ್ಲಿಯವರೆಗೂ ಬರೆಯುವ ಶಕ್ತಿ ಇರುತ್ತದೆಯೋ ಅವರು ಪತ್ರಕರ್ತರೇ, ಸಿದ್ದರಾಮಯ್ಯನವರು ಇವತ್ತು

ಇಂದು ಚಿಕ್ಕಬಳ್ಳಾಪುರದಲ್ಲಿ ನಡೆದ ಚಿಕ್ಕಬಳ್ಳಾಪುರ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಕರ್ತರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಪಾಲ್ಗೊಂಡು ದಿಕ್ಸೂಚಿ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಬೆಂಗಳೂರು ಉತ್ತರ ವಿವಿ ಕುಲಪತಿ ಡಾ. ಬಿ.ಕೆ. ರವಿ, ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಜಿ.ಪ್ರಭು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಜಿಲ್ಲಾಧ್ಯಕ್ಷ ರವಿಕುಮಾರ್ ಸೇರಿದಂತೆ ಅನೇಕ ಹಿರಿಯ ಪತ್ರಕರ್ತರು ಪಾಲ್ಗೊಂಡಿದ್ದರು.

ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆ. ಆದರೆ, ಅವರು ಬಹಳ ಪ್ರಾಮಾಣಿಕವಾಗಿ ಹೇಳಿದ್ದಾರೆ. ರಾಜಕಾರಣಕ್ಕೆ ರಾಜೀನಾಮೆ ನೀಡಿಲ್ಲ. ಅದು ಅವರ ಶಕ್ತಿ, ಯಾರು ತಾವು ಮಾಡಿರುವ ಸೇವೆಯನ್ನು ಮುಂದುವರೆಸುತ್ತೇನೆ ಎನ್ನುವ ಸೇವಕರೆ ಜನಪರ ಇರುವ ರಾಜಕಾರಣಿ. ಪತ್ರಕರ್ತರೂ ಅಷ್ಟೇ ಎಲ್ಲಿಯವರೆಗೂ ಬರೆಯುವ ಇಚ್ಛಾಶಕ್ತಿ ಇದೆಯೋ ಅಲ್ಲಿವರೆಗೂ ನಿಮ್ಮ ವೃತ್ತಿ ಮುಂದುವರೆಸಬಹುದು. ಮೂರನೇಯದ್ದು ಎಷ್ಟು ಸಾರ್ವಜನಿಕವಾಗಿರುವ ಜವಾಬ್ದಾರಿ ರಾಜಕಾರಣಿಗೆ ಅಧಿಕಾರದಲ್ಲಿರುವವರಿಗೆದೆಯೋ ಅಷ್ಟೇ ಪತ್ರಕರ್ತರಿಗೂ ಇದೆ. ನಾವು ತೆಗೆದುಕೊಳ್ಳುವ ತೀರ್ಮಾಣ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ತಾವು ಬರೆಯುವ ವರದಿ

ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಒಂದು ರೀತಿಯಲ್ಲಿ ನೀವೂ ಕೂಡ ರಾಜಕಾರಣಿಗಳು, ನಾವು ಪತ್ರಕರ್ತರು. ನಿಮಗೆ ಏನು ಉತ್ತರ ಬೇಕೊ ಅದನ್ನು ಪಶ್ನೆ ಕೇಳುತ್ತೀರಿ. ನಾವೂ ಬುದ್ಧಿವಂತರಿದ್ದೇವೆ. ಪತ್ರಿಕೆಯಲ್ಲಿ ಏನು ಬರಬೇಕೊ ಅದನ್ನು ಹೇಳುತ್ತೇವೆ. ಈ ಬುದ್ಧಿವಂತಿಕೆ ಸಮಾಜದ ಒಳಿತಿಗೆ ಬಳಕೆ ಆಗಬೇಕು. ಸಮಾಜದ ದೃಷ್ಕೃತ ಮುಚ್ಚುವುದಕ್ಕೆ ಬಳಕೆ ಆಗಬಾರದು ಎಂದು ಹೇಳಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಜೂನ್ 1 2026, ಸೋಮವಾರ

## ಒಳಪುಟಗಳಲ್ಲಿ

ಕಾಂಗ್ರೆಸ್ ಯುವನಾಯಕ ಮೊಹಮ್ಮದ್ ನಲಪಾಡ್ ವಿಚಾರಣೆಗೆ ಒಳಪಡಿಸಲು ಇ.ಡಿ.ಯಿಂದ ಮತ್ತೆ ಸಮನ್ಸ್ - ಪು5

ಹೆಗ್ಗಡೆ ಅವರು ಜಿಲ್ಲೆಗೆ ಅನುದಾನ ನೀಡಿರುವುದು ಪ್ರಗತಿಗೆ ಉತ್ತೇಜನ: ವಿರೂಪಾಕ್ಷ ಗಾದಗಿ - ಪು.6

# ಹೊಸ ಡಿಸಿಎಂ ಪ್ರಸ್ತಾವ ಇನ್ನೂ ಬಂದಿಲ್ಲ: ಮಲ್ಲಿಕಾರ್ಜುನ ಖರ್ಗೆ

**ಬೆಂಗಳೂರು, ಮೇ31:** ಮುಖ್ಯಮಂತ್ರಿಯಾಗಿ ನೇಮಕಗೊಂಡ ಡಿ.ಕೆ. ಶಿವಕುಮಾರ್ ನೇತೃತ್ವದ ಕರ್ನಾಟಕದಲ್ಲಿ ನೂತನ ಸಚಿವ ಸಂಪುಟ ರಚನೆಗೆ ಸಂಬಂಧಿಸಿದಂತೆ ಪಕ್ಷದ ನಾಯಕತ್ವಕ್ಕೆ ಇನ್ನೂ ಯಾವುದೇ ಪ್ರಸ್ತಾವನೆ ಬಂದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟ ಪಡಿಸಿದ್ದಾರೆ.



ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, ಜೂನ್ 3 ರಂದು ಪ್ರಮಾಣವಚನ ಸ್ವೀಕಾರ ಸಮಾರಂಭದ ನಂತರ ಸಚಿವರು ಮತ್ತು ಪ್ರಮುಖ ನೇಮಕಾತಿಗಳ ಕುರಿತು ಸಮಾಲೋಚನೆಗಳ ನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ, ಸರ್ಕಾರ ರಚನೆ ಕುರಿತು ಚರ್ಚೆಗಳು ನಡೆಯುತ್ತಿವೆ, ಆದರೆ ಯಾವುದೇ ಔಪಚಾರಿಕ ಪ್ರಸ್ತಾವನೆ ಪಕ್ಷದ ಹೈಕಮಾಂಡ್‌ಗೆ ತಲುಪಿಲ್ಲ ಎಂದು ಹೇಳಿದರು. ಸಚಿವರ ನೇಮಕದ ಕುರಿತು ಯಾವುದೇ ಪ್ರಸ್ತಾವನೆ ಇನ್ನೂ ಬಂದಿಲ್ಲ. ಪ್ರಸ್ತಾವನೆ ಬಂದ ನಂತರ, ಎಷ್ಟು ಸಚಿವರು ಮತ್ತು ಉಪಮುಖ್ಯಮಂತ್ರಿಗಳನ್ನು ನೇಮಿಸಬೇಕು, ಅದರೊಂದಿಗೆ ಪ್ರಮುಖ ಅಧ್ಯಕ್ಷ ಸ್ಥಾನಗಳನ್ನು ಸಹ ತುಂಬಬೇಕೇ ಎಂಬುದರ ಕುರಿತು ಚರ್ಚೆ ನಡೆಯಲಿದೆ" ಎಂದು ಅವರು ಹೇಳಿದರು.ಪ್ರಮಾಣ ವಚನ ಸಮಾರಂಭದ ನಂತರವೇ ಸಂಪುಟ ರಚನೆಯ ಕುರಿತು ಹೆಚ್ಚಿನ ಸ್ಪಷ್ಟತೆ ಹೊರಬರಲಿದೆ ಎಂದು ಖರ್ಗೆ ಹೇಳಿದರು. ಈ ಎಲ್ಲಾ ವಿಷಯಗಳು ಚರ್ಚೆಯಲ್ಲಿವೆ. ಜೂನ್ 3 ರ ನಂತರ ನಮಗೆ ತಿಳಿಯುತ್ತದೆ. ನಾವು ಕಾಯಬೇಕಾಗಿದೆ" ಎಂದು ಅವರು ಹೇಳಿದರು. ಹಂತ ಹಂತವಾಗಿ ಸಚಿವ ಸಂಪುಟ ವಿಸ್ತರಣೆಯ ಸಾಧ್ಯತೆಯ ಕುರಿತು ಮಾತನಾಡಿದ ಖರ್ಗೆ, ನಿಯೋಜಿತ ಮುಖ್ಯಮಂತ್ರಿಯಿಂದ ಪಕ್ಷಕ್ಕೆ ಇನ್ನೂ ವಿವರಗಳು ಬಂದಿಲ್ಲ ಎಂದು ಹೇಳಿದರು. "ಅವರು (ನಿಯೋಜಿತ ಮುಖ್ಯಮಂತ್ರಿ) ಎಂಟು ಅಥವಾ ಹತ್ತು ಸಚಿವರನ್ನು ನೇಮಿಸುತ್ತಾರೋ ಇಲ್ಲವೋ, ಅವರ ಪ್ರಸ್ತಾವನೆ ನಮಗೆ ತಲುಪಿಲ್ಲ. ಅದು ಬಂದ ನಂತರ, ಮೊದಲು ಒಂದು ಹಂತವನ್ನು ಪೂರ್ಣಗೊಳಿಸಬಹುದು.ನಂತರ 15 ದಿನಗಳು ಅಥವಾ ಒಂದು ತಿಂಗಳ ನಂತರ, ಉಳಿದ (ಸ್ಥಾನಗಳಿಗೆ) ಮತ್ತೊಂದು ಹಂತದಲ್ಲಿ ವಿಸ್ತರಣೆಯಾಗಲಿದೆ ಎಂದು ಅವರು ಹೇಳಿದರು. ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ಅವಕಾಶ ಕಲ್ಪಿಸುವ ಬಗ್ಗೆ ಕೇಳಿದಾಗ, ನಾಯಕತ್ವದೊಂದಿಗೆ ಯಾವುದೇ ನಿರ್ದಿಷ್ಟ ಯೋಜನೆಯನ್ನು ಹಂಚಿಕೊಳ್ಳಲಾಗಿಲ್ಲವಾದರೂ, ಚರ್ಚೆಗಳು ನಡೆಯುತ್ತಿವೆ ಎಂದು ಖರ್ಗೆ ಹೇಳಿದರು. ಮತ್ತೊಂದು ಹಂತದಲ್ಲಿ, ಉಳಿದ ಸದಸ್ಯರಿಗೂ ಅವಕಾಶ ಕಲ್ಪಿಸಬೇಕು ಎಂಬ ಕಲ್ಪನೆ ಇದೆ. ಅಂತಹ ಚರ್ಚೆ ಅಸ್ತಿತ್ವದಲ್ಲಿದೆ, ಆದರೆ ನಿಯೋಜಿತ ಮುಖ್ಯಮಂತ್ರಿ ನಿಖರವಾಗಿ ಏನು ಪರಿಗಣಿಸುತ್ತಿದ್ದಾರೆಂದು ನಮಗೆ ಇನ್ನೂ ತಿಳಿದಿಲ್ಲ. ನಮಗೆ ಇನ್ನೂ ಯಾವ ಪ್ರಸ್ತಾವನೆ ಬಂದಿಲ್ಲ" ಎಂದು ಅವರು ಹೇಳಿದರು.

# ಬುಧವಾರ ಡಿಕೆಶಿ ಜೊತೆಗೆ 20 ಮಂದಿ ಪ್ರಮಾಣ ಬಹುತೇಕ ಖಚಿತ

**ಬೆಂಗಳೂರು, ಮೇ 31:** ಡಿಕೆ ಶಿವಕುಮಾರ್ ಬುಧವಾರ ರಾಜ್ಯದ 18ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದು, ಹೊಸ ಸಂಪುಟದಲ್ಲಿ ಸಚಿವ ಸ್ಥಾನ ಪಡೆಯಲು ಲಾಬಿ ತೀವ್ರಗೊಂಡಿದೆ. ಶಿವಕುಮಾರ್ 20 ಸಚಿವರೊಂದಿಗೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.



ನಿರ್ಗಮಿತ ಸಿಎಂ ಸಿದ್ದರಾಮಯ್ಯ ಪುತ್ರ ಎಂಎಲ್‌ಸಿ ಯತೀಂದ್ರ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆ ಮತ್ತು ಕೆ.ಎಚ್. ಮುನಿಯಪ್ಪ ಪುತ್ರಿ ರೂಪಕಲಾ ಶಶಿಧರ್ ಅವರಿಗೆ ಸಚಿವ ಸ್ಥಾನ ಬಹುತೇಕ ಖಾತರಿಯಾಗಿದೆ ಎಂದು ಹೇಳಲಾಗುತ್ತಿದೆ.

ಇವರನ್ನು ಹೊರತು ಪಡಿಸಿ, ಬೇರೆ ಯಾರು ಸಂಪುಟಕ್ಕೆ ಸೇರಬಹುದು ಎಂಬುದರ ಕುರಿತು ಇನ್ನೂ ಸ್ಪಷ್ಟತೆ ಇಲ್ಲ. ಸೋಮವಾರದ ವೇಳೆಗೆ ಸಚಿವ ಸ್ಥಾನಗಳು ಮತ್ತು ಉಪಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿ ಬಗ್ಗೆ ಸ್ಪಷ್ಟತೆ ಸಿಗಲಿದೆ ಎಂದು ತಿಳಿಸಿವೆ. ಜೂನ್ 18 ರಂದು ನಾಲ್ಕು ರಾಜ್ಯಸಭಾ ಸ್ಥಾನಗಳು ಮತ್ತು ಶಾಸಕರ ಕೋಟಾದಿಂದ ಏಳು ಪರಿಷತ್ ಸ್ಥಾನಗಳಿಗೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ, ಕಾಂಗ್ರೆಸ್ ಹೈಕಮಾಂಡ್ ಕೆಲವು ಸಂಪುಟ ಸ್ಥಾನಗಳನ್ನು ಖಾಲಿ ಇಡುವ ಸಾಧ್ಯತೆಯಿದೆ. ಸಿಎಂ ಸ್ಥಾನದಿಂದ ಕೆಳಗಿಳಿದಿರುವ ಸಿದ್ದರಾಮಯ್ಯ ಅವರ ಮಾತಿಗೆ ಒಪ್ಪುವ ಮೂಲಕ ಹೈಕಮಾಂಡ್ ಸಮತೋಲನ ಸಾಧಿಸುವ ಸಾಧ್ಯತೆಯಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಹಲವು ಶಾಸಕರಿಗೆ ವಿಧಾನಸಭಾ ಸ್ಪೀಕರ್ ಹುದ್ದೆಯನ್ನು ನೀಡಿದ್ದರೂ, ಹೆಚ್ಚಿನವರು ಅದನ್ನು ತಿರಸ್ಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶಿವಕುಮಾರ್ ಸಂಪುಟವು ಅನುಭವಿಗಳು ಮತ್ತು ಯುವ ಜನರ ಮಿಶ್ರಣವಾಗುವ ಸಾಧ್ಯತೆಯಿದೆ.

> ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಬೆಳಗ್ಗೆ ದೆಹಲಿಗೆ ತೆರಳಲಿದ್ದು, ಸಂಭಾವ್ಯ ಸಚಿವರು ಹಾಗೂ ಡಿಸಿಎಂಗಳ ಪಟ್ಟಿಯನ್ನು ಸಲ್ಲಿಸಿ ಅಂಗೀಕಾರ ಪಡೆಯಲಿದ್ದಾರೆ ಎಂದು ತಿಳಿದುಬಂದಿದೆ.

### ಸಂಭವನೀಯ ಸಚಿವ ಪಟ್ಟಿ


ಜೆ.ಜಾರ್ಜ್, ರಾಮಲಿಂಗಾರೆಡ್ಡಿ, ಡಾ.ಜಿ.ಪರಮೇಶ್ವರ, ಎಂ.ಬಿ.ಪಾಟೀಲ್, ಯು.ಟಿ.ಖಾದರ್, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ಬಿ.ಝಡ್.ಜಮೀರ್ ಅಹಮದ್ ಖಾನ್, ಎ.ಆರ್.ಕೃಷ್ಣಮೂರ್ತಿ, ಎಸ್. ಎನ್.ನಾರಾಯಣಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಪುಟ್ಟರಂಗಶೆಟ್ಟಿ, ಟಿ.ಬಿ.ಜಯಚಂದ್ರ, ಸತೀಶ್ ಜಾರಕಿಹೊಳಿ, ಅಶೋಕ್ ಪಟ್ಟಣ, ಅಪ್ಪಾಜಿ ನಾಡಗೌಡ, ಎಚ್.ಕೆ.ಪಾಟೀಲ್, ಬಿ. ಆರ್.ಪಾಟೀಲ್, ಬಸವರಾಜ ರಾಯರೆಡ್ಡಿ, ಕೆ.ಎಂ.ಶಿವಲಿಂಗೇಗೌಡ, ಎನ್.ಎ.ಹ್ಯಾರಿಸ್, ರಿಜ್ವಾನ್ ಅರ್ಷದ್, ಆನೇಕಲ್ ಶಿವಣ್ಣ, ಎಚ್.ಸಿ.ಬಾಲಕೃಷ್ಣ, ಎನ್.ಚಲುವರಾಯಸ್ವಾಮಿ, ತನ್ವೀರ್ ಸೇಠ್, ಬಿ.ನಾಗೇಂದ್ರ, ಶರತ್ ಬಚ್ಚೇಗೌಡ, ಲಕ್ಷ್ಮೀ ಹೆಬ್ಬಾಳ್ಕರ್, ಲಕ್ಷ್ಮಣ ಸವದಿ, ರಘುಮೂರ್ತಿ, ಮಧು ಬಂಗಾರಪ್ಪ, ಸಂಗಮೇಶ್ ಯಶವಂತರಾಯಗೌಡ ಪಾಟೀಲ್ ಇವರ ಹೆಸರುಗಳು ಕೇಳಿಬರುತ್ತಿವೆ. ಕೆಪಿಸಿಸಿ ಅಧ್ಯಕ್ಷರಾಗುವ ನಿರೀಕ್ಷೆಯಲ್ಲಿರುವ ಸತೀಶ್ ಜಾರಕಿಹೊಳಿ ಕೂಡ ಸಂಪುಟದಲ್ಲಿ ಸ್ಥಾನ ಪಡೆಯಲು ಬಯಸಿದ್ದಾರೆ.

### ನೂತನ ಸಿಎಂ ಕೆಕೆ ಗೆಸ್ಟ್‌ಹೌಸ್‌ನಲ್ಲಿ ವಾಸಕ್ಕೆ ಚಿಂತನೆ


**ಬೆಂಗಳೂರು, ಮೇ 31:** ಮುಂದಿನ ಸಿಎಂ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ನಂತರ ಕುಮಾರಕೃಪ ಅತಿಥಿಗೃಹವನ್ನು ತಮ್ಮ ತಾತ್ಕಾಲಿಕ ಸರ್ಕಾರಿ ನಿವಾಸವನ್ನಾಗಿ ಬಳಸಿಕೊಳ್ಳಲು ನಿರ್ಧರಿಸಿದ್ದಾರೆ. ಕುಮಾರಕೃಪಾ ರಸ್ತೆಯಲ್ಲಿರುವ ಕೆಕೆ ಗೆಸ್‌ಹೌಸ್‌ನಲ್ಲಿರುವ ಬೃಹತ್ ಕಲ್ಲಿನ ಕಟ್ಟಡದಲ್ಲಿ ಅವರು ವಾಸಿಸಲಿದ್ದಾರೆ. ಇದೇ ವೇಳೆ, ಕಾವೇರಿ ನಿವಾಸದಲ್ಲಿ ವಾಸಿಸುತ್ತಿರುವ ಸಿದ್ದರಾಮಯ್ಯ ಅವರಿಗೆ ಅದನ್ನು ಬಿಟ್ಟುಕೊಡುವಂತೆ ತಕ್ಷಣ ಕೇಳದಿರಲು ಡಿ.ಕೆ. ಶಿವಕುಮಾರ್ ತೀರ್ಮಾನಿಸಿದ್ದಾರೆ ಎಂದು ತಿಳಿದುಬಂದಿದೆ.

ಸಿದ್ದರಾಮಯ್ಯ ಅವರ ಭಾವನೆಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಲು ಈ ನಿರ್ಧಾರ ಕೈಗೊಳ್ಳಲಾಗಿದೆ. ಕುಮಾರಕೃಪ ಗೆಸ್ಟ್ಹೌಸ್ಗೆ ಈಗಾಗಲೇ ಪೊಲೀಸರಿಂದ ಭದ್ರತೆ ಒದಗಿಸಲಾಗಿದ್ದು, ಹಿರಿಯ ಪೊಲೀಸ್ ಮತ್ತು ಪಿಡಬ್ಲ್ಯೂಡಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಸಭೆಗಳು ಮತ್ತು ಸಾರ್ವಜನಿಕರ ಕುಂದು ಕೊರತೆಗಳನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಆಲಿಸಲು ಚಿಂತನೆ ನಡೆಸಿದ್ದಾರೆ.

# ಒಂದೇ ದಿನದಲ್ಲಿ ಅತಿಹೆಚ್ಚು ಛಾವಣಿ ಸೌರಫಲಕ ಅಳವಡಿಕೆಯ ದಾಖಲೆ: ಜೋಶಿ ಶ್ಲಾಘನೆ



**ಬೆಂಗಳೂರು, ಮೇ.31:** ಪ್ರಧಾನ ಮಂತ್ರಿ ಸೂರ್ಯಘರ್ ಯೋಜನೆ ಯಡಿ ಒಂದೇ ದಿನದಲ್ಲಿ ಅತಿ ಹೆಚ್ಚು ಛಾವಣಿ ಸೌರಫಲಕ ಅಳವಡಿಕೆಯಲ್ಲಿ ಭಾರತ ಗರಿಷ್ಠ ದಾಖಲೆ ಬರೆದಿದೆ ಎಂದು ಹೊಸ ಮತ್ತು ನವೀಕರಿಸ ಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ. ಈ ಕುರಿತು ತಮ್ಮ ಸಾಮಾಜಿಕ ವ'ಾಧ್ಯ'ವ' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಮೇ 29ರಂದು ದೇಶಾದ್ಯಂತ ಒಟ್ಟು 15 ಸಾವಿರ ಛಾವಣಿ ಸೌರಫಲಕ ಅಳವಡಿಕೆ ಮೂಲಕ ಗರಿಷ್ಠ ಏಕದಿನ ದಾಖಲೆ ಬರೆಯಲಾಗಿದೆ.



ಮಹಾರಾಷ್ಟ್ರದಲ್ಲಿ ಅಂದು 4 ಸಾವಿರದ 700 ಸೌರಫಲಕ ಅಳವಡಿಕೆ ಮೂಲಕ ಒಂದೇ ದಿನದಲ್ಲಿ ಗರಿಷ್ಠ ದಾಖಲೆ ಬರೆದ ರಾಜ್ಯ ಎನಿಸಿದೆ ಎಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ಸ್ವಚ್ಛ ಇಂಧನ ಉತ್ಪಾದನೆ ಮತ್ತು ಬಳಕೆಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಭವಿಷ್ಯದಲ್ಲಿ ಸುಸ್ಥಿರ ಮತ್ತು ಹಸಿರು ಇಂಧನ ಅಳವಡಿಕೆಯತ್ತ ಭಾರತ ಕ್ಷಿಪ್ರವಾಗಿ ಮುನ್ನಡೆಯುತ್ತಿದೆ ಎಂದು ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

# ಪ್ರಾದೇಶಿಕ ಉದ್ವಿಗ್ನತೆ ನಡುವೆ ಇರಾನ್–ಅಮೆರಿಕ ಮಾತುಕತೆ ಮುಗಿಯದಿರುವುದು ರಾಜತಾಂತ್ರಿಕ ಬಿಕ್ಕಟ್ಟು ಪರಿಹಾರ ವಿಳಂಬ

**ಟೆಹ್ರಾನ್/ವಾಷಿಂಗ್ಟನ್, ಮೇ 31:** ಮಧ್ಯಪ್ರಾಚ್ಯದಾದ್ಯಂತ ಕ್ಷಿಪಣಿ ದಾಳಿಗಳು, ಸಮುದ್ರ ಉದ್ವಿಗ್ನತೆಗಳು ಮತ್ತು ದೇಶೀಯ ಅಶಾಂತಿ ತೀವ್ರಗೊಂಡಿದ್ದರೂ ಸಹ, ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಗಳು ಮಧ್ಯವರ್ತಿಗಳ ಮೂಲಕ ಮುಂದುವರೆದಿವೆ. ಪ್ರಸ್ತಾವಿತ ತಿಳುವಳಿಕೆ ಒಪ್ಪಂದದ ಮೇಲೆ ಕೇಂದ್ರೀಕೃತವಾಗಿರುವ ಮಾತುಕತೆಗಳು ಇತ್ಯರ್ಥವಾಗದೆ ಉಳಿದಿವೆ, ಪರಿಷ್ಕೃತ ಕರಡುಗಳು ಹಲವು ಬಾರಿ ವಿನಿಮಯಗೊಂಡಿವೆ ಎಂದು ವರದಿಯಾಗಿದೆ, ಆದರೆ ಎರಡೂ ಕಡೆಯವರು ರಾಜಿ ಮಾಡಿಕೊಳ್ಳುವ ಸ್ಪಷ್ಟ ಲಕ್ಷಣ ತೋರಿಸುತ್ತಿಲ್ಲ, ಇದು ರಾಜತಾಂತ್ರಿಕತೆ ಮತ್ತು ಹೆಚ್ಚುತ್ತಿರುವ ಪ್ರಾದೇಶಿಕ ಸಂಘರ್ಷದ ನಡುವಿನ ಅಂತರವನ್ನು ಹೆಚ್ಚಿಸುತ್ತಿದೆ ಎಂದು ಒತ್ತಿಹೇಳುತ್ತದೆ. ವರದಿಯ ಪ್ರಕಾರ, ಮಧ್ಯವರ್ತಿಗಳು ಪ್ರಸ್ತುತ ಟೆಹ್ರಾನ್ ಮತ್ತು ವಾಷಿಂಗ್ಟನ್ ನಡುವಿನ ಪ್ರಸ್ತಾವಿತ ತಿಳುವಳಿಕೆ




ಒಪ್ಪಂದದ ಕುರಿತು ಚರ್ಚೆಗಳನ್ನು ಸುಗಮಗೊಳಿಸುತ್ತಿದ್ದಾರೆ, ಕರಡನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಲವು ಬಾರಿ ಪರಿಷ್ಕರಿಸಿದ್ದಾರೆ ಮತ್ತು ಪರಿಗಣನೆಗೆ ಇರಾನ್‌ಗೆ ಹಿಂತಿರುಗಿಸಲಾಗಿದೆ.

ಪಾಕಿಸ್ತಾನ ನೇತೃತ್ವದ ಮಧ್ಯವರ್ತಿಗಳ ಮೂಲಕ ಈ ಪ್ರಸ್ತಾವನೆಯು ಎರಡೂ ಕಡೆಯ ನಡುವೆ ಹಿಂದಕ್ಕೆ ಮತ್ತು ಮುಂದಕ್ಕೆ ಚಲಿಸಿದೆ ಎಂದು ವರದಿಯಾಗಿದೆ.

ಇತ್ತೀಚಿನ ಅಮೆರಿಕ ಪರಿಷ್ಕರಣೆಗಳನ್ನು "ಸ್ವಲ್ಪಮಟ್ಟಿಗೆ ಮಹತ್ವದ್ದಾಗಿದೆ" ಎಂದು ವಿವರಿಸಲಾಗಿದ್ದರೂ, ವಿವರಗಳನ್ನು ಬಹಿರಂಗಪಡಿಸಲಾಗಿಲ್ಲ ಮತ್ತು ಇರಾನಿನ ಅಧಿಕಾರಿಗಳು ಇನ್ನೂ ಔಪಚಾರಿಕ ಪ್ರತಿಕ್ರಿಯೆಯನ್ನು ನೀಡಿಲ್ಲ. ಮಾತುಕತೆಗಳ ದುರ್ಬಲತೆ ಮತ್ತು ಮುಕ್ತ ಸ್ವರೂಪವನ್ನು ಒತ್ತಿಹೇಳುವ ಯಾವುದೇ ಗಡುವನ್ನು ನಿಗದಿಪಡಿಸ ಲಾಗಿಲ್ಲ. ಅದೇ ಸಮಯದಲ್ಲಿ, ವಿಶಾಲವಾದ ಪ್ರಾದೇಶಿಕ ಭದ್ರತಾ ವಾತಾವರಣವು ಹೆಚ್ಚು ಹೆಚ್ಚು ಅಸ್ಥಿರವಾಗಿದೆ. ಉತ್ತರ ಇರಾಕ್‌ನಲ್ಲಿ, ಭಾನುವಾರ ಮುಂಜಾನೆ ಎರ್ಬಿಲ್ ಬಳಿಯ ಕುರ್ದಿಸ್ತಾನ್ ಫ್ರೀಡಂ ಪಾರ್ಟಿಗೆ ಸಂಬಂಧಿಸಿದ ನೆಲೆಯ ಮೇಲೆ ಇರಾನಿನ ಕ್ಷಿಪಣಿಯೊಂದು ದಾಳಿ ನಡೆಸಿತು. ದಾರಾಶಕ್ರನ್ ಬಳಿ ಈ ದಾಳಿ ನಡೆದಿದೆ ಮತ್ತು ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ಗುಂಪು ಹೇಳಿದೆ, ಆದರೆ ಅದರ ಸ್ಥಾನಗಳ ಮೇಲೆ ಪದೇ ಪದೇ ದಾಳಿ ನಡೆಸುವ ಮಾದರಿಯ ಭಾಗವಾಗಿದೆ ಎಂದು ವಿವರಿಸಿದೆ.

ಈ ಘಟನೆಯು ನಡೆಯುತ್ತಿರುವ ಪ್ರಾದೇಶಿಕ ಹಗೆತನಕ್ಕೆ ಸಂಬಂಧಿಸಿದ ಗಡಿಯಾಚೆಗಿನ ಕ್ರಮಗಳ ಹೆಚ್ಚುತ್ತಿರುವ ಪಟ್ಟಿಗೆ ಸೇರಿಸುತ್ತದೆ ಎಂದು ಇರಾನ್ ಇಂಟರ್‌ನ್ಯಾಷನಲ್ ವರದಿ ಮಾಡಿದೆ. ಏತನ್ಮಧ್ಯೆ, ಇರಾನ್ ಆರ್ಥಿಕ ಒತ್ತಡವನ್ನು ಎದುರಿಸುತ್ತಿದೆ. ತೈಲ ಟ್ಯಾಂಕರ್‌ಗಳು ಮತ್ತು ಸರಕು ಹಡಗುಗಳು ಸೇರಿದಂತೆ 28 ವಾಣಿಜ್ಯ ಹಡಗುಗಳು ಅನುಮತಿ ಪಡೆದ ನಂತರ 24 ಗಂಟೆಗಳ ಅವಧಿಯಲ್ಲಿ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋದವು ಎಂದು ಇರಾನ್ನ ಕ್ರಾಂತಿಕಾರಿ ಗಾರ್ಡ್ ನೌಕಾಪಡೆ ಹೇಳಿದೆ, ಇದು ಪರ್ಷಿಯನ್ ಕೊಲ್ಲಿಯಲ್ಲಿ ಹೆಚ್ಚಿದ ಉದ್ವಿಗ್ನತೆಯ ನಡುವೆ ನಿಯಂತ್ರಿತ ಸಮುದ್ರ ಮಾರ್ಗವನ್ನು ಕಾಪಾಡಿಕೊಳ್ಳಲು ನಿರಂತರ ಪ್ರಯತ್ನಗಳನ್ನು ಎತ್ತಿ ತೋರಿಸುತ್ತದೆ. ರಾಜಕೀಯ ಮಟ್ಟದಲ್ಲಿ, ಆಡಳಿತ ಮತ್ತು ರಾಜತಾಂತ್ರಿಕತೆಯ ಮೇಲಿನ ಉದ್ವಿಗ್ನತೆ ಮುಂದುವರಿದಿದೆ. ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಘಾಲಿಬಾಫ್, ಇರಾನ್ನ "ಹಕ್ಕುಗಳನ್ನು" ಸಂಪೂರ್ಣವಾಗಿ ಭದ್ರಪಡಿಸಿಕೊಳ್ಳದ ಹೊರತು ಅಮೆರಿಕದೊಂದಿಗೆ ಯಾವುದೇ ಒಪ್ಪಂದವನ್ನು ಅನುಮೋದಿಸ ಲಾಗುವುದಿಲ್ಲ ಎಂದು ಪುನರುಚ್ಚರಿಸಿದರು, ಇದು ಮಾತುಕತೆಗಳ ಕಡೆಗೆ ನಿರಂತರ ಸಂದೇಹವನ್ನು ಸೂಚಿಸುತ್ತದೆ. ಏತನ್ಮಧ್ಯೆ, ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರು ರಾಜ್ಯದ ಪ್ರಸಾರಕರಾದ ಐಆರ್‌ಐಬಿಯನ್ನು ದೇಶದ ಪರಿಸ್ಥಿತಿಯ ಬಗ್ಗೆ ಅವಾಸ್ತವಿಕ ನಿರೂಪಣೆಗಳು ಎಂದು ವಿವರಿಸಿದ್ದಕ್ಕಾಗಿ ಟೀಕಿಸಿದರು, ಪುರಾವೆ ಮತ್ತು ವಾಸ್ತವಿಕ ವಿಶ್ಲೇಷಣೆಯ ಆಧಾರದ ಮೇಲೆ ವರದಿ ಮಾಡಲು ಕರೆ ನೀಡಿದರು. ಅನಿಶ್ಚಿತತೆಗೆ ಹೆಚ್ಚುವರಿ ಯಾಗಿ, ಇರಾನ್ ಅಧಿಕಾರಿಗಳು ಕೇಶ್ಮ್ ದ್ವೀಪ ಮತ್ತು ಬಂದರ್ ಅಬ್ಬಾಸ್ ಬಳಿ ಸ್ಫೋಟಗಳ ವರದಿಗಳನ್ನು ಉಲ್ಲೇಖಿಸಿ, ಉಳಿದ ಯುದ್ಧಸಾಮಗ್ರಿಗಳ ವಿಲೇವಾರಿ ಯಿಂದ ಶಬ್ದಗಳು ಉಂಟಾಗಿವೆ ಎಂದು ಹೇಳಿದರು.



ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಭಾನುವಾರ ನವದೆಹಲಿಯಲ್ಲಿ ಸಿಬಿಎಸ್‌ಇ ಮಂಡಳಿ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಅವರೊಂದಿಗೆ ಚರ್ಚಿಸಿದರು.

# ಈ ಸಲನೂ ಕಪ್ ನಮ್ದು..! ಸತತ 2ನೇ ಬಾರಿಗೆ ಆರ್‌ಸಿಬಿ ಮುಡಿಗೇರಿದ ಐಪಿಎಲ್ ಕಿರೀಟ

**ಗುಜರಾತ್, ಮೇ 31:** ಆರ್‌ಸಿಬಿ ಮಿಲಿಯನ್ ಡಾಲರ್ ಟೂರ್ನಿ ಐಪಿಎಲ್‌ನಲ್ಲಿ ಅತಿ ಹೆಚ್ಚು ಅಭಿಮಾನಿ ಬಳಗವನ್ನು ಹೊಂದಿರುವ ತಂಡ. ಈ ತಂಡದ ಪರವಾಗಿ ಹಲವು ದಿಗ್ಗಜ ಕ್ರಿಕೆಟಿಗರು ಸಾಕಷ್ಟು ವರ್ಷ ಕ್ರಿಕೆಟ್ ಆಡಿದ್ದಾರೆ. ಆದರೆ ಅಂತಹವರ ಉಪಸ್ಥಿತಿಯ ಹೊರತಾಗಿಯೂ ಸತತ 17 ವರ್ಷಗಳವರೆಗೆ ಆರ್‌ಸಿಬಿಗೆ ಒಮ್ಮೆಯೂ ಚಾಂಪಿಯನ್ ಪಟ್ಟಕ್ಕೇರಲು ಸಾಧ್ಯವಾಗಲಿಲ್ಲ. ಆದರೆ ಕಳೆದ ಆವೃತ್ತಿಯಲ್ಲಿ ಆ ಟ್ರೋಫಿ ಬರವನ್ನು ನೀಗಿಸಿಕೊಂಡು ತನ್ನ ಅಭಿಮಾನಿಗಳು ನೀರಾಳರಾಗುವಂತೆ ಮಾಡಿದ್ದ ಆರ್‌ಸಿಬಿ ಇದೀಗ 2026ರ ಐಪಿಎಲ್‌ನಲ್ಲೂ ಟ್ರೋಫಿ ಎತ್ತಿಹಿಡಿಯುವ ಮೂಲಕ ತನ್ನ ಅಭಿಮಾನಿ ಬಳಗಕ್ಕೆ ಡಬಲ್ ಸಂತೋಷ ನೀಡಿದೆ. ಗುಜರಾತ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಗುಜರಾತ್ ತಂಡವನ್ನು ಮಣಿಸಿದ ಆರ್‌ಸಿಬಿ ತನ್ನ ಹಾಲಿ ಚಾಂಪಿಯನ್ ಪಟ್ಟವನ್ನು ತನ್ನಲ್ಲಿಯೇ ಉಳಿಸಿಕೊಂಡಿದೆ.



**5 ವಿಕೆಟ್‌ಗಳಿಂದ ಗೆದ್ದ ಆರ್‌ಸಿಬಿ**

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಈ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ತಂಡ ವಾಷಿಂಗ್ಟನ್ ಸುಂದರ್ ಅವರ ಅರ್ಧಶತಕದ ನೆರವಿನಿಂದ 156 ರನ್‌ಗಳ ಗುರಿ ನೀಡಿತು. ಈ ಗುರಿ ಬೆನ್ನಟ್ಟಿದ ಆರ್‌ಸಿಬಿ ವಿರಾಟ್ ಕೊಹ್ಲಿ ಅವರ ಅಜೇಯ ಅರ್ಧಶತಕದ ನೆರವಿನಿಂದ 18 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಜಯದ ನಗೆ ಬೀರಿತು. ವಾಸ್ತವವಾಗಿ ಕಳೆದ ಆವೃತ್ತಿಯಲ್ಲಿ ಇದೇ ಮೈದಾನದಲ್ಲಿ ನಡೆದಿದ್ದ ಫೈನಲ್ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಮೊದಲು ಬ್ಯಾಟಿಂಗ್ ಮಾಡಿ ಗೆದ್ದಿದ್ದ ಆರ್‌ಸಿಬಿ, ಈ ಬಾರಿ ಗುರಿ ಬೆನ್ನಟ್ಟಿ ಗೆಲುವು ಸಾಧಿಸಿತು.

**ಗುಜರಾತ್‌ಗೆ ಬ್ಯಾಟಿಂಗ್ ವೈಫಲ್ಯ**

ಈ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಸಿಬಿ ನಾಯಕ ರಜತ್ ಪಾಟಿದರ್ ಬೌಲಿಂಗ್ ಆಯ್ದುಕೊಂಡರು. ನಾಯಕನ ಈ ಆಯ್ಕೆಯನ್ನು ಸಮರ್ಥಿಸಿಕೊಂಡ ಬೌಲರ್‌ಗಳು ಆರಂಭದಿಂದಲೂ ಗುಜರಾತ್ ಬ್ಯಾಟಿಂಗ್ ವಿಭಾಗದ ಕತ್ತು ಹಿಸುಕಿದರು. ಇಡೀ ಆವೃತ್ತಿಯಲ್ಲಿ ಗುಜರಾತ್ ಪರ ರನ್ ಮಳೆ ಹರಿಸಿದ್ದ ಗುಜರಾತ್ ಆರಂಭಿಕ ಜೋಡಿಯಾದ ಶುಭ್‌ಮನ್ ಗಿಲ್ ಹಾಗೂ ಸಾಯಿ ಸುದರ್ಶನ್ ಈ ಪಂದ್ಯದಲ್ಲಿ ಆರ್‌ಸಿಬಿ ಬೌಲರ್‌ಗಳ ಮುಂದೆ ಮಂಡಿಯೂರಿದರು. ನಾಯಕ ಗಿಲ್ ಕೇವಲ 10 ರನ್‌ಗಳಿಗೆ ಹೇಜಲ್‌ವುಡ್‌ಗೆ ಬಲಿಯಾದರೆ, ಸಾಯಿ ಸುದರ್ಶನ್ ಕೂಡ 12 ರನ್ ಗಳಿಸಿ ಔಟ್ ಆದರು. ಇವರಿಬ್ಬರ ವಿಕೆಟ್ ಬೇಗನೇ ಪತನಗೊಂಡಿದ್ದರಿಂದ ಅನುಭವಿ ಜೋಸ್ ಬಟ್ಲರ್ ಮೇಲೆ ಇನ್ನಿಂಗ್ಸ್ ನಿಭಾಯಿಸುವ ಜವಾಬ್ದಾರಿ ಬಿದ್ದಿತು. ಆದರೆ ಆಲ್‌ರೌಂಡರ್ ಕೃನಾಲ್ ಪಾಂಡ್ಯ ಎಸೆದ ವೈಡ್ ಯಾರ್ಕರ್, ಬಟ್ಲರ್ ಅವರ ಇನ್ನಿಂಗ್ಸ್‌ಗೆ ಅಂತ್ಯ ಹಾಡಿತು.

**ಸುಂದರ್ ಅರ್ಧಶತಕದ ಇನ್ನಿಂಗ್ಸ್**

ಅನುಭವಿ ಆಟಗಾರರ ವಿಕೆಟ್ ಪತನದ ನಡುವೆಯೂ ತಂಡದ ಪರ ಹೋರಾಟದ ಇನ್ನಿಂಗ್ಸ್ ಆಡಿದ ವಾಷಿಂಗ್ಟನ್ ಸುಂದರ್ 37 ಎಸೆತಗಳಲ್ಲಿ ಅಜೇಯ 50 ರನ್‌ಗಳ ಇನ್ನಿಂಗ್ಸ್ ಆಡಿದರು. ಸುಂದರ್ ಅವರ ಇನ್ನಿಂಗ್ಸ್‌ನಲ್ಲಿ ಆರ್‌ಸಿಬಿ ಆಟಗಾರ ಜೇಡನ್ ಕಾಕ್ಸ್ ಅವರ ಕೊಡುಗೆಯೂ ಇತ್ತು. ಸುಂದರ್ 4 ರನ್ ಬಾರಿಸಿದ್ದಾಗ ಸುಲಭ ಕ್ಯಾಚ್ ನೀಡಿದ್ದರು. ಆದರೆ ಕಾಕ್ಸ್ ಆ ಕ್ಯಾಚ್ ಕೈಚೆಲ್ಲಿದರು. ಇಲ್ಲದಿದ್ದರೆ, ಗುಜರಾತ್ ತಂಡವನ್ನು ಎರಡಂಕಿಗೆ ಕಟ್ಟಿಹಾಕಬಹುದಿತ್ತು. ಆರ್‌ಸಿಬಿ ಪರ ಮಾರಕ ದಾಳಿ ನಡೆಸಿದ ರಸಿಕ್ ಸಲಾಂ 4 ಓವರ್‌ಗಳಲ್ಲಿ 27 ರನ್ ನೀಡಿ 3 ವಿಕೆಟ್ ಪಡೆದರು. ಉಳಿದಂತೆ ಭುವನೇಶ್ವರ್ ಕುಮಾರ್ ಮತ್ತು ಜೋಶ್ ಹ್ಯಾಜಲ್‌ವುಡ್ ತಲಾ 2 ವಿಕೆಟ್ ಪಡೆದರೆ, ಕೃನಾಲ್ ಪಾಂಡ್ಯ ಕೂಡ 1 ವಿಕೆಟ್ ಪಡೆದರು.

**ಆರ್‌ಸಿಬಿಗೆ ಸ್ಫೋಟಕ ಆರಂಭ**

156 ರನ್‌ಗಳ ಗುರಿ ಬೆನ್ನಟ್ಟಿದ ಆರ್‌ಸಿಬಿಗೆ ವೆಂಕಟೇಶ್ ಅಯ್ಯರ್ ಮತ್ತು ವಿರಾಟ್ ಕೊಹ್ಲಿ ಸ್ಫೋಟಕ ಆರಂಭ ನೀಡಿದರು. ವೆಂಕಟೇಶ್ ಅಯ್ಯರ್ ಗಾಯದ ನಡುವೆಯೂ 16 ಎಸೆತಗಳಲ್ಲಿ 4 ಬೌಂಡರಿ ಮತ್ತು 2 ಸಿಕ್ಸರ್‌ಗಳ ಸಹಿತ 32 ರನ್ ಗಳಿಸಿ ಔಟಾದರು. ಆದಾಗ್ಯೂ ಅವರು ತಂಡದ ಗೆಲುವನ್ನು ಭಾಗಶಃ ಖಚಿತಪಡಿಸಿದ್ದರು. ಆದರೆ ಆ ನಂತರ ಬಂದ ಕನ್ನಡಿಗ ದೇವದತ್ ಪಡಿಕ್ಕಲ್ ಕೇವಲ 1 ರನ್‌ಗೆ ಔಟಾದರು. ಆ ನಂತರ ರಶೀದ್ ಖಾನ್ ಒಂದೇ ಓವರ್‌ನಲ್ಲಿ ರಜತ್ ಪಾಟಿದಾರ್ ಮತ್ತು ಕೃನಾಲ್ ಪಾಂಡ್ಯ ಅವರನ್ನು ಔಟ್ ಮಾಡುವ ಮೂಲಕ ಗುಜರಾತ್‌ಗೆ ಗೆಲುವಿನ ಆಸೆ ಹುಟ್ಟುವಂತೆ ಮಾಡಿದರು. ಆದರೆ ಈ ಫೈನಲ್ ಪಂದ್ಯದಲ್ಲಿ ತನ್ನ ಅನುಭವವನ್ನೆಲ್ಲ ಧಾರೆ ಎರೆದ ವಿರಾಟ್ ಕೊಹ್ಲಿ, ಗುರಿ ಬೆನ್ನಟ್ಟುವಾಗ ಏಕೆ ನಾನು ಅಪಾಯಕಾರಿ ಬ್ಯಾಟ್ಸ್‌ಮನ್ ಎಂಬುದನ್ನು ಮತ್ತೊಮ್ಮೆ ಸಾಭಿತುಪಡಿಸಿದರು.

**ಅತಿ ವೇಗದ ಅರ್ಧಶತಕ ಬಾರಿಸಿದ ಕೊಹ್ಲಿ**

ಈ ಹಂತದಲ್ಲಿ ಕೊಹ್ಲಿಗೆ ಸಾಥ್ ನೀಡಿದ ಟಿಮ್ ಡೇವಿಡ್ 17 ಎಸೆತಗಳಲ್ಲಿ 24 ರನ್ ಗಳಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಈ ಮಧ್ಯೆ ವಿರಾಟ್ ಕೊಹ್ಲಿ ಕೇವಲ 25 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು. ಇದು ಕಿಂಗ್ ಕೊಹ್ಲಿಯ ಐಪಿಎಲ್ ವೃತ್ತಿಜೀವನದ ಅತಿ ವೇಗದ ಅರ್ಧಶತಕವೂ



ಆಗಿತ್ತು. ಅಂತಿಮವಾಗಿ ಕೊಹ್ಲಿ 42 ಎಸೆತಗಳಲ್ಲಿ 9 ಬೌಂಡರಿ ಮತ್ತು 3 ಸಿಕ್ಸರ್‌ಗಳ ಸಹಿತ ಅಜೇಯ 75 ರನ್ ಬಾರಿಸುವ ಮೂಲಕ ತಂಡವನ್ನು ಮತ್ತೊಮ್ಮೆ ಚಾಂಪಿಯನ್ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದರು.

**ವಿಜಯಿ ಆರ್‌ಸಿಬಿಗೆ 20 ಕೋಟಿ ರೂ. ಬಹುಮಾನ**

**2ನೇ ಸ್ಥಾನ ಜಿಟಿಗೆ 12.5 ಕೋಟಿ ರೂ. ಬಹುಮಾನ**

**ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿಗೆ ಆರೆಂಜ್ ಕ್ಯಾಪ್ ಗೌರವ**

**ವೇಗದ ಬೌಲರ್ ಕಗಿಸೋ ರಬಾಡಾಗೆ ಪರ್ಪಲ್ ಕ್ಯಾಪ್ ಹೆಗ್ಗಳಿಕೆ**

# ಮುಂದಿನ 2 ವರ್ಷದ ವಿಧಾನಸಭಾ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಕೆಪಿಸಿಸಿ ಅಧ್ಯಕ್ಷರ ಆಯ್ಕೆ: ಖರ್ಗೆ

**ಬೆಂಗಳೂರು, ಮೇ 31:** ಮುಂದಿನ ಎರಡು ವರ್ಷಗಳಲ್ಲಿ ವಿಧಾನಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಪಿಸಿಸಿ ಅಧ್ಯಕ್ಷರನ್ನು ಆಯ್ಕೆಮಾಡುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಬಳಿಕ ಕೆಪಿಸಿಸಿ ಸ್ಥಾನವನ್ನು ಬಿಟ್ಟುಕೊಡುವುದು ಸಹಜ. ಬೇರೆಯವರನ್ನು ಅಧ್ಯಕ್ಷರನ್ನಾಗಿ ಮಾಡಲೇ ಬೇಕಿದೆ ಎಂದರು.

ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಹುಡುಕಾಟ ನಡೆಯುತ್ತಿದೆ. ನೂತನ ಅಧ್ಯಕ್ಷರು ಒಳ್ಳೆಯವರಾಗಿರಬೇಕು. ಪಕ್ಷದ ಅಧ್ಯಕ್ಷರು ಮತ್ತು ಮುಖ್ಯಮಂತ್ರಿ ನಡುವೆ ಹೊಂದಾಣಿಕೆ ಇರಬೇಕು. ಪಕ್ಷದ ಹಿತದೃಷ್ಟಿ ಹಾಗೂ ಪಕ್ಷ ಸಂಘಟನೆ ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡುತ್ತೇವೆ. ಇನ್ನೂ 24 ತಿಂಗಳಲ್ಲಿ ವಿಧಾನಸಭಾ ಚುನಾವಣೆ ಎದುರಾಗಲಿದೆ. ಮುಂದಿನ ದಿನಗಳಲ್ಲಿ ವೇಗವಾಗಿ ಕೆಲಸ ಮಾಡುವ, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಗ್ರವಾಗಿ ಪಕ್ಷ ಕಟ್ಟುವ ನಾಯಕರನ್ನು ಹುಡುಕಬೇಕಾಗಿದೆ. ಮುಖ್ಯಮಂತ್ರಿಯವರ ಜೊತೆ ಸಹಕರಿಸಬೇಕು. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಅಧ್ಯಕ್ಷರನ್ನು ನೇಮಿಸಲಾಗುತ್ತಿದೆ ಎಂದಿದ್ದಾರೆ.

**ಸಿದ್ದರಾಮಯ್ಯ ಬಣದ ಪ್ರಯತ್ನ:**

ಈವರೆಗೂ ಪಕ್ಷದ ಆಧಿಪತ್ಯ ಡಿ.ಕೆ.ಶಿವಕುಮಾರ್ ಅವರ ಬಳಿಯಿತ್ತು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರು. ಇಬ್ಬರೂ ಹಳೇ ಮೈಸೂರು ಭಾಗದವರಾಗಿದ್ದರು. ಉತ್ತರ ಕರ್ನಾಟಕ ಭಾಗಕ್ಕೆ ಅನ್ಯಾಯವಾಗಿದೆ ಎಂಬ ಅಸಮಾಧಾನ ಇತ್ತು.ಕೆಪಿಸಿಸಿ ಅಧ್ಯಕ್ಷರಾಗಿದ್ದವರು ಸಹಜವಾಗಿಯೇ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿರುತ್ತಾರೆ. ಕಳೆದ ವಿಧಾನಸಭಾ ಚುನಾವಣೆಯಿಂದ ಈವರೆಗೂ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದು ಕೊನೆಗೂ ಮುಖ್ಯಮಂತ್ರಿ ಸ್ಥಾನ ಧಕ್ಕಿಸಿಕೊಂಡಿದ್ದಾರೆ.

ಮುಂದೆ ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡುವವರು ಕೂಡ ಇದೇ ರೀತಿ ಮುಖ್ಯಮಂತ್ರಿ ಹುದ್ದೆಗೆ ಪೈಪೋಟಿ ನಡೆಸುವ ಸಾಧ್ಯತೆ ಇದೆ. ಪ್ರಸ್ತುತ ಎರಡು ವರ್ಷಗಳ ಕಾಲ ಸಚಿವರಾಗಿದ್ದಕ್ಕಿಂತಲೂ ಪಕ್ಷದ ಅಧ್ಯಕ್ಷ ಸ್ಥಾನ ಪ್ರಭಾವಿ ಎಂದು ಭಾವಿಸಲಾಗಿದೆ.



ಆದರೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಿರುವುದರಿಂದ ಮುಂದಿನ ಚುನಾವಣೆಯಲ್ಲಿ ಒಂದು ವೇಳೆ ಕಾಂಗ್ರೆಸ್ ಮರಳಿ ಅಧಿಕಾರ ಹಿಡಿದರೂ ಡಿ.ಕೆ.ಶಿವಕುಮಾರ್ ಮುಂದುವರಿಯುವ ಸಾಧ್ಯತೆ ಇದೆ. ಹೀಗಾಗಿ ಕೆಲವರು ಪಕ್ಷದ ಅಧ್ಯಕ್ಷರಾಗಲು ಹಿಂಜರಿಯುತ್ತಿದ್ದಾರೆ ಎನ್ನಲಾಗಿದೆ. ಸದ್ಯದ ಮಟ್ಟಿಗೆ ಸತೀಶ್ ಜಾರಕಿಹೊಳಿ ಸಚಿವ ಸ್ಥಾನ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನ ಎರಡರ ಮೇಲೂ ಕಣ್ಣಿಟ್ಟಿದ್ದಾರೆ. ತಾವು ಹೈಕಮಾಂಡ್ ಬಳಿ ಪಕ್ಷದ ಅಧ್ಯಕ್ಷ ಸ್ಥಾನ ಕೇಳಿರುವುದು ನಿಜ ಎಂದು ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ. ಆದರೆ ಪಕ್ಷ ಯಾವುದೇ ನಿರ್ಧಾರ ಕೈಗೊಂಡರೂ ಅದಕ್ಕೆ ಬದ್ಧ ಎಂದು ಪುನರುಚ್ಚರಿಸಿದ್ದಾರೆ.

ಈ ಮೊದಲು 2010ರ ಅಕ್ಟೋಬರ್ 27 ರಿಂದ 2018ರ ಜುಲೈ 4ರ ವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದ ಡಾ.ಜಿ.ಪರಮೇಶ್ವರ್ ಮುಖ್ಯಮಂತ್ರಿ ಹುದ್ದೆಗೆ ಆಸೆ ಪಟ್ಟಿದ್ದರು. ಆದರೆ ಅದು ಸಾಧ್ಯವಾಗಿಲ್ಲ. 2019ರಲ್ಲಿ ಕಾಂಗ್ರೆಸ್-ಜೆಡಿಎಸ್ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು. 2023ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಲು ಸಾಕಷ್ಟು ಪ್ರಯತ್ನ ಮಾಡಿದ್ದರೂ ಅದು ಈಡೇರಲಿಲ್ಲ.

ಸಿದ್ದರಾಮಯ್ಯ ಅವರ ಸಂಪುಟದಲ್ಲಿ ತಾವೊಬ್ಬರೇ ಉಪಮುಖ್ಯಮಂತ್ರಿಯಾಗಿರಬೇಕೆಂದು ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದಿದ್ದರಿಂದಾಗಿ ಇತರ ಆಕಾಂಕ್ಷಿಗಳಿಗೆ ಅವಕಾಶ ಸಿಗಲಿಲ್ಲ.

ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಪರಮೇಶ್ವರ್ ಉಪಮುಖ್ಯಮಂತ್ರಿಯಾಗಲು ಬಯಸಿದ್ದರೂ ನಾಲ್ವರನ್ನು ಡಿಸಿಎಂ ಮಾಡುವ ಸಾಧ್ಯತೆ ಇರುವುದರಿಂದಾಗಿ ಆ ಹುದ್ದೆಗೆ ಪ್ರಾಮುಖ್ಯ ಇಲ್ಲ ಎಂದು ಹೇಳಲಾಗುತ್ತಿದೆ. ಈ ಕಾರಣಕ್ಕಾಗಿ ಪರಮೇಶ್ವರ್ ಮೀನ-ಮೇಷ ಎಣಿಸುತ್ತಿದ್ದಾರೆ. ತಮಗೆ ಮತ್ತೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಟ್ಟರೆ, ಮುಂದಿನ ಬಾರಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿ ಅಧಿಕಾರಕ್ಕೆ ತರುವುದಾಗಿ ಪರಮೇಶ್ವರ್ ಭರವಸೆ ನೀಡಿದ್ದಾರೆ ಎನ್ನಲಾಗಿದೆ. ಆದರೆ ಹೈಕಮಾಂಡ್ ಇದಕ್ಕೆ ಒಪ್ಪುವ ಸಾಧ್ಯತೆ ಕಡಿಮೆ ಇದೆ. ರಾಜ್ಯದ ಪ್ರಮುಖವಾದ ಎರಡು ಹುದ್ದೆಗಳು ಮತ್ತೆ ಹಳೇ ಮೈಸೂರು ಭಾಗಕ್ಕೆ ಸೀಮಿತಗೊಳ್ಳುತ್ತವೆ ಎಂಬ ಕಾರಣಕ್ಕಾಗಿ ಈ ಭಾರಿ ಉತ್ತರ ಕರ್ನಾಟಕ ಭಾಗಕ್ಕೆ ಅಧ್ಯಕ್ಷ ಸ್ಥಾನ ನೀಡುವ ಚರ್ಚೆಗಳಾಗಿವೆ. ಬೀದರ್ ಜಿಲ್ಲೆಯ ಈಶ್ವರ್ ಖಂಡ್ರೆ ವೀರಶೈವ-ಲಿಂಗಾಯತ ಸಮುದಾಯದವರಾಗಿರುವುದರಿಂದ ಅವರಿಗೆ ಮಣೆ ಹಾಕಬಹುದು ಎಂಬ ಚರ್ಚೆಗಳು ನಡೆಯುತ್ತಿವೆ. ಉಳಿದಂತೆ ಎಂ.ಬಿ.ಪಾಟೀಲ್, ದಿನೇಶ್ ಗುಂಡೂರಾವ್, ಕೆ.ಎಚ್. ಮುನಿಯಪ್ಪ, ಎಚ್.ಕೆ.ಪಾಟೀಲ್ ಸೇರಿದಂತೆ ಕೆಲ ಹಿರಿಯ ನಾಯಕರುಗಳ ಹೆಸರುಗಳು ಕೆಪಿಸಿಸಿ ಅಧ್ಯಕ್ಷ ಸ್ಥಾನದ ವಿಚಾರವಾಗಿ ಚರ್ಚೆಯಾಗುತ್ತಿವೆ.

# ಮಂತ್ರಿಗಿರಿಗೆ ತೀವ್ರಗೊಂಡ ಲಾಬಿ: ಡಿಕೆಶಿ ಮನೆಗೆ ಮಾಜಿ ಸಚಿವರು ಶಾಸಕರ ದಾಂಗುಡಿ

**ಬೆಂಗಳೂರು, ಮೇ 31:** ಮುಖ್ಯಮಂತ್ರಿ ಆಯ್ಕೆಯ ಪ್ರಕ್ರಿಯೆ ಮುಗಿದ ಬೆನ್ನಲ್ಲೇ ಸಚಿವ ಸಂಪುಟ ರಚನೆಯ ಪ್ರಕ್ರಿಯೆ ಶುರುವಾಗಿದ್ದು, ಅವಕಾಶಕ್ಕಾಗಿ ಶಾಸಕರ ದಂಡು ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮನೆಗೆ ಎಡತಾಕಲಾರಂಭಿಸಿದೆ. ಮಾಜಿ ಸಚಿವರು, ಹಿರಿಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಡಿ.ಕೆ.ಶಿವಕುಮಾರ್ ಅವರ ಮನೆಗೆ ಬಂದು ಹೂಗುಚ್ಛ ನೀಡಿ ಶುಭ ಹಾರೈಸುತ್ತಿದ್ದು, ಜೊತೆಯಲ್ಲೇ ಸಂಪುಟದಲ್ಲಿ ತಮಗೆ ಅವಕಾಶ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ಈ ಮೊದಲು ಸಂಪುಟದಲ್ಲಿ ಸಚಿವರಾಗಿದ್ದವರ ಪೈಕಿ ಬಹುತೇಕರಿಗೆ ಕೊಕ್ ಸಿಗಲಿದೆ ಎಂದು ಹೇಳಲಾಗುತ್ತಿದೆ. ಡಾ.ಜಿ.ಪರಮೇಶ್ವರ್, ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಜಮೀರ್ ಅಹಮದ್‌ಖಾನ್, ಎಚ್.ಕೆ.ಪಾಟೀಲ್, ಎನ್. ಚಲುವರಾಯಸ್ವಾಮಿ, ಸತೀಶ್ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳ್ಕರ್, ಮಂಕಾಳ ವೈದ್ಯ, ಸಂತೋಷ್ ಲಾಡ್, ಬೈರತಿ ಸುರೇಶ್, ಡಾ.ಎಂ.ಸಿ.ಸುಧಾಕರ್, ಈಶ್ವರ್ ಖಂಡ್ರೆ ಅವರು ಮರಳಿ ಸಂಪುಟ ಸೇರುವವರ





ಪಟ್ಟಿಯಲ್ಲಿದ್ದಾರೆ. ಸಂಪುಟ ಸೇರುವುದು ಅನುಮಾನಾಸ್ಪದವಾಗಿರುವ ಆರ್.ಬಿ.ತಿಮ್ಮಾಪುರ, ದಿನೇಶ್ ಗುಂಡೂರಾವ್, ಎಂ.ಬಿ.ಪಾಟೀಲ್, ಶಿವರಾಜ್ ತಂಗಡಗಿ, ಮಧುಬಂಗಾರಪ್ಪ, ಕೆ.ಎಚ್.ಮುನಿಯಪ್ಪ ಮತ್ತಿತರರು ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದಾರೆ.

ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಮತ್ತು ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಸಚಿವರಾದರೆ ಅಚ್ಚರಿಯೇನಿಲ್ಲ ಎಂದು ಮೂಲಗಳು ತಿಳಿಸಿವೆ.

ಈವರೆಗೂ ಸಚಿವ ಸ್ಥಾನ ಸಿಗದೇ ಇರುವ ಎಸ್.ಎನ್.ನಾರಾಯಣಸ್ವಾಮಿ. ಪಿ.ಎಂ.ಅಶೋಕ್, ರಾಘವೇಂದ್ರ ಹಿಟ್ನಾಳ್, ವಿಜಯಾನಂದ ಕಾಶಪ್ಪನವರ್, ಪುಟ್ಟರಂಗ ಶೆಟ್ಟಿ, ಬಿ.ಆರ್. ಪಾಟೀಲ್, ತನ್ವೀರ್ ಸೇಠ್, ರೂಪಕಲಾ, ಕೆ.ಎಂ.ಶಿವಲಿಂಗೇ ಗೌಡ ಅವರು ಭಾನುವಾರ ಡಿ.ಕೆ.ಶಿವಕುಮಾರ್ ಮನೆಗೆ ತೆರಳಿ, ತಾವು ಹಿರಿಯರು ಹಾಗೂ ಅನುಭವಿಗಳಾಗಿದ್ದು ಅವಕಾಶ ನೀಡಬೇಕು ಎಂದು ಕೇಳಿಕೊಂಡಿದ್ದಾರೆ. ಯುವ ಶಾಸಕ ಧ್ರುವನಾರಾಯಣ್ ಕೂಡ ಸಚಿವ ಸ್ಥಾನಕ್ಕೆ ಒತ್ತಾಯಿಸಿದ್ದಾರೆ. ಮಾಜಿ ಸಚಿವ ಟಿ.ಬಿ.ಜಯಚಂದ್ರ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದು, ಬಳಿಕ ಸುದ್ದಿಗಾರರೊಂದಿಗೆ ತಮ ಮತ್ತು ಡಿ.ಕೆ.ಶಿವಕುಮಾರ್ ಅವರ ಸ್ನೇಹ 40 ವರ್ಷಗಳಷ್ಟು ಹಳೆಯದ್ದು, ಎಲ್ಲಾ ರೀತಿಯಲ್ಲೂ ಅವರ ಜೊತೆ ಸಹಕಾರ ನೀಡಿದ್ದೇನೆ.

ನಾನು ಯಾವ ರೀತಿಯ ರಾಜಕಾರಣಿ ಎಂದು ಅವರಿಗೆ ಗೊತ್ತಿದೆ. ಮುಖ್ಯಮಂತ್ರಿ ಆದ ಸಂದರ್ಭದಲ್ಲಿ ಅವರನ್ನು ಅಭಿನಂದಿಸಲು ಬಂದಿದ್ದಾಗಿ ಹೇಳಿದ್ದಾರೆ.ಮಾಜಿ ಸಚಿವ ಆರ್.ಬಿ.ತಿಮ್ಮಾಪುರ, ಸಚಿವ ಸಂಪುಟ ಸೇರಲು ಎಲ್ಲರಿಗೂ ಆಸೆ ಇರುತ್ತದೆ. ನನಗೂ ಇದೆ. ಹೈಕಮಾಂಡ್ ಯಾವುದೇ ನಿರ್ಧಾರ ತೆಗೆದುಕೊಂಡರೂ ಅದಕ್ಕೆ ನಾವು ಬದ್ಧರಾಗಿರುತ್ತೇವೆ. ಅಂತಿಮ ಪಟ್ಟಿ ಪ್ರಕಟವಾದಾಗಲೇ ಯಾರು ಸಂಪುಟ ಸೇರುತ್ತಾರೆ ಎಂದು ಗೊತ್ತಾಗುತ್ತದೆ ಎಂದಿದ್ದಾರೆ. ಇದರಿಂದ ಯುವಕರಿಗೆ ಆದ್ಯತೆ ನೀಡಿದ್ದಂತಾಗುತ್ತದೆ ಎಂದು ಹೇಳಿದ್ದಾರೆ. ಬಂಗಾರಪೇಟೆಯ ಎಸ್.ಎನ್.ನಾರಾಯಣಸ್ವಾಮಿ, ಕೋಲಾರ ಜಿಲ್ಲೆಯಲ್ಲಿ ಒಕ್ಕಲಿಗ ಮತ್ತು ಬಲಗೈ ಸಮುದಾಯ ಪ್ರಬಲವಾಗಿದೆ. ಈ ಎರಡೂ ಸಮುದಾಯಗಳಿಗೆ ಸಚಿವ ಸ್ಥಾನ ಕೊಟ್ಟರೆ ಕೋಲಾರ ಜಿಲ್ಲೆಗೆ ಅನುಕೂಲವಾಗುತ್ತದೆ. ಇಲ್ಲವಾದರೆ ಮುಂದೆ ಕಾಂಗ್ರೆಸ್ ಪಕ್ಷಕ್ಕೆ ಕಷ್ಟವಾಗಬಹುದು ಎಂದಿದ್ದಾರೆ. ಮಾಲೂರು ಶಾಸಕ ಕೆ.ವೈ.ನಂಜೇಗೌಡ ಇದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ.



ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಭಾನುವಾರ ಮ್ಯಾನ್ಮಾರ್ ಅಧ್ಯಕ್ಷ ಯು ಮಿನ್ ಆಂಗ್ ಹ್ಲೈಂಗ್ ಅವರನ್ನು ಭೇಟಿ ಮಾಡಿದ್ದರು.

# ಈಶ್ವರ ಖಂಡ್ರೆಗೆ ಡಿಸಿಎಂ ಪಟ್ಟ ನೀಡಲು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರ ಆಗ್ರಹ, ಮೆರವಣಿಗೆ

**ಬೀದರ್, ಮೇ 31:** ಜಿಲ್ಲೆಯ ಭಾಲ್ಕಿ ವಿಧಾನಸಭಾ ಕ್ಷೇತ್ರದ ಶಾಸಕ ಈಶ್ವರ ಖಂಡ್ರೆ ಅವರಿಗೆ ನೂತನ ಸರ್ಕಾರದ ಸಚಿವ ಸಂಪುಟದಲ್ಲಿ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಆಗ್ರಹಿಸಿ, ಕಾಂಗ್ರೆಸ್ ಕಾರ್ಯಕರ್ತರು, ಖಂಡ್ರೆ ಬೆಂಬಲಿಗರು ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ಹೋರಾಟ ನಡೆಸಿದರು. ಈಶ್ವರ ಖಂಡ್ರೆ ಅವರು ಪೌರಾಡಳಿತ, ಅರಣ್ಯ ಸಚಿವರಾಗಿ ಉತ್ತಮ ಕೆಲಸ ಮಾಡಿದ್ದಾರೆ. ರಾಜ್ಯದಲ್ಲಿ ಚುರುಕಾಗಿ ಕೆಲಸ ಮಾಡುತ್ತಿರುವ ಜನಪರ ನಾಯಕರಾಗಿದ್ದಾರೆ. ಎಲ್ಲಾ ಸಮಾಜದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಗುಣ ಖಂಡ್ರೆ ಅವರಲ್ಲಿದೆ. ಅವರು ಯಾವುದೇ ಒಂದು ಸಮುದಾಯಕ್ಕೆ ಸೀಮಿತರಾಗಿಲ್ಲ. ಎಲ್ಲಾ ವರ್ಗದ ಜನರನ್ನು ಒಗ್ಗೂಡಿಸಿಕೊಂಡು ಕೆಲಸ ಮಾಡುವ ವಿಶಿಷ್ಟ ಗುಣ ಇದೆ. ಆದಕಾರಣ ಅವರಿಗೆ ಡಿಸಿಎಂ ಮಾಡಬೇಕೆಂದು ಹಕ್ಕೊತ್ತಾಯ ಮಾಡಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ಈಶ್ವರ ಖಂಡ್ರೆ ಅವರಿಗೆ ಡಿಸಿಎಂ ಸ್ಥಾನ ನೀಡಬೇಕೆಂದು ಆಗ್ರಹಿಸಿದರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿನೋದ್ ಕುಮಾರ್ ಅಪ್ಪೆ, ಮಾರುತಿ ಭಂಗಾರೆ, ಸಂಜುಕುಮಾರ್, ಚಂದ್ರಕಾಂತ್ ನಿರಾಟೆ, ರಾಕೇಶ್ ಕೆ., ರಾಹುಲ್ ಭಂಗೂರೆ, ಮಾಣಿಕೇಶ್ ಪಾಟೀಲ್, ಶಿವಕುಮಾರ್, ಉಮಾಕಾಂತ್, ಶಂಕರ್, ತೇಜಮ್ಮ, ಸ್ಯಾಮ್ಯುಯಲ್, ಶಿವಾಜಿ ಮತ್ತಿತರರು ಪಾಲ್ಗೊಂಡಿದ್ದರು.



ಬೀದರ ನಗರದ ಡಾ.ಅಂಬೇಡ್ಕರ್ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಈಶ್ವರ ಖಂಡ್ರೆ ಅಭಿಮಾನಿಗಳು, ಈಶ್ವರ ಖಂಡ್ರೆ ಅವರಿಗೆ ಉಪಮುಖ್ಯಮಮತ್ರಿ ಸಥಾನ ನೀಡುವಂತೆ ಆಗ್ರಹಿಸಿ ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿದರು.

# ಜೂ.3ರಂದೇ ಕಾಂಗ್ರೆಸ್ ಕಚೇರಿ ಭೂಮಿಪೂಜೆ ಕಾರ್ಯಕ್ರಮಕ್ಕೆ ಚಿಂತನೆ: ಸಿಎಲ್‌ಪಿ ನಾಯಕ ಡಿ.ಕೆ.ಶಿವಕುಮಾರ್ ಸ್ಪಷ್ಟನೆ

**ಬೆಂಗಳೂರು, ಮೇ.31:** "ಜೂನ್ 3ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಮುಗಿದ ಬಳಿಕ ರೇಸ್ ಕೋರ್ಸ್ ರಸ್ತೆ ಬಳಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮ ನಡೆಸಲು ಆಲೋಚಿಸಲಾಗಿದ್ದು, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಇನ್ನಷ್ಟೇ ಸಮಯ ನಿಗದಿ ಮಾಡಬೇಕಿದೆ" ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ರೇಸ್ ಕೋರ್ಸ್ ರಸ್ತೆ ಬಳಿ ಉದ್ದೇಶಿತ ಕಾಂಗ್ರೆಸ್ ಭವನ ನಿರ್ಮಾಣ ಜಾಗಕ್ಕೆ ಭಾನುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. "ಪಕ್ಷದ ಎಲ್ಲಾ ಬ್ಲಾಕ್ ಹಾಗೂ ಜಿಲ್ಲಾ ಅಧ್ಯಕ್ಷರು, ಶಾಸಕರು ಹಾಗೂ ಮಾಜಿ ಶಾಸಕರು, ಪಕ್ಷದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು, ಸಂಸದರು, ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಿಗೆ ಆಹ್ವಾನ ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ. ಕಾರ್ಯಕರ್ತರು ಕ್ಷಮಿಸಬೇಕು. ಅಲ್ಲಿ ಜಾಗದ



ಕೊರತೆ ಇರುವುದರಿಂದ ಆಹ್ವಾನಿತರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು" ಎಂದು ಹೇಳಿದರು.

"ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ರಾಹುಲ್ ಗಾಂಧಿ ಅವರಿಗೆ ಇನ್ನಷ್ಟೇ ನೀಡಲಾಗುವುದು. ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಕಚೇರಿ ಶಂಕುಸ್ಥಾಪನೆ ನೆರವೇರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ" ಎಂದು ಮಾಹಿತಿ ನೀಡಿದರು. "ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮಕ್ಕೆ ನಮ್ಮ ಪಕ್ಷದ ಎಲ್ಲಾ ನಾಯಕರು ಹಾಗೂ ಪದಾಧಿಕಾರಿಗಳಿಗೆ ಆಹ್ವಾನ ನೀಡಲು ಆಗದ ಕಾರಣ, ಇಲ್ಲೇ ಎಲ್ ಇ ಡಿ ಪರದೆಗಳಲ್ಲಿ ಆ ಕಾರ್ಯಕ್ರಮ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ.

ನಮಗಾಗಿ ಹೋರಾಟ ಮಾಡಿ, ಶ್ರಮಿಸಿದ ನಾಯಕರಿಗೆ ನಾವು ಇಷ್ಟಾದರೂ ಅವಕಾಶ ಮಾಡಿಕೊಡಬೇಕು" ಎಂದು ತಿಳಿಸಿದರು.

ನೂರು ಕಚೇರಿಗಳ ಶಂಕುಸ್ಥಾಪನೆ ಬಗ್ಗೆ ಕೇಳಿದಾಗ, "ಅದನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು" ಎಂದು ತಿಳಿಸಿದರು. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದ ಬಗ್ಗೆ ಕೇಳಿದಾಗ, "ಬೆಂಗಳೂರಿನ ನಾಗರಿಕರಿಗೆ ತೊಂದರೆಯಾಗಬಾರದು, ಈ ಕಾರ್ಯಕ್ರಮಕ್ಕೆ ಹೊರಗಡೆಯಿಂದ ಹೆಚ್ಚಿನ ವಾಹನ ಆಗಮಿಸಿ ಸಂಚಾರ ದಟ್ಟಣೆ ಆಗಬಾರದು ಎಂಬ ಕಾರಣಕ್ಕೆ ವಿಧಾನಸೌಧದ ಮೆಟ್ಟಿಲುಗಳ ಬದಲು ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ಮಾಡಲಾಗುವುದು. ಈ ಕಾರ್ಯಕ್ರಮ ಸರಳವಾಗಿ ನಡೆಯುತ್ತಿರುವುದರಿಂದ ಹೆಚ್ಚಿನ ಜನ ಸೇರಲು ಆಗುವುದಿಲ್ಲ. ಹೀಗಾಗಿ ನಮ್ಮ ಕಾರ್ಯಕರ್ತರು ಕ್ಷಮಿಸಬೇಕು" ಎಂದರು. ನಿಮ್ಮ ಜೊತೆ ಸಚಿವರು ಪ್ರಮಾಣ ವಚನ ಸ್ವೀಕಾರ ಮಾಡುವರೇ ಎಂದು ಕೇಳಿದಾಗ, "ನನಗೆ ಆ ಬಗ್ಗೆ ಗೊತ್ತಿಲ್ಲ. ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಲಿದೆ. ಈ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ" ಎಂದರು.

# ವಿಜಯ ಕಾಲೇಜು ಮೂಲ್ಕಿ ಗ್ಲೋಬಲ್ ಅಲ್ಯೂಮಿನಿ ಅಸೋಸಿಯೇಶನ್ ಅಧ್ಯಕ್ಷರಾಗಿ ಅಡ್ವೊಕೇಟ್ ಶೇಖರ್ ಎಸ್.ಭಂಡಾರಿ ಆಯ್ಕೆ

**ಮುಂಬಯಿ, ಮೇ 31:** ವಿಜಯ ಕಾಲೇಜು ಮೂಲ್ಕಿ ಗ್ಲೋಬಲ್ ಅಲ್ಯೂಮಿನಿ ಅಸೋಸಿಯೇಶನ್ (ವಿಸಿಎಂಜಿಎಎಎಂ) ಇದರ ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ಶನಿವಾರ ನಡೆಯಿತು. ನೂತನ ಪದಾಧಿಕಾರಿಗಳ ಆಯ್ಕೆಯಲ್ಲಿ 2026-2026ನೇ ಸಾಲಿನ ಅಧ್ಯಕ್ಷರಾಗಿ ಅಡ್ವೊಕೇಟ್ ಶೇಖರ್ ಎಸ್.ಭಂಡಾರಿ ಅವರನ್ನು ಸಭೆಯು ಸರ್ವಾನುಮತದಿಂದ ಆಯ್ಕೆ ಗೊಳಿಸಿತು.







ಗೌರವಾಧ್ಯಕ್ಷರಾಗಿ ವಾಸುದೇವ ಎಂ.ಸಾಲ್ಯಾನ್, ಉಪಾಧ್ಯಕ್ಷರಾಗಿ ಭಾಸ್ಕರ್ ಭೋಜಶೆಟ್ಟಿ, ಕಾರ್ಯದರ್ಶಿ ಆಗಿ ಸಿಎ. ರೋಹಿತಾಕ್ಷ ದೇವಾಡಿಗ ಮತ್ತು ಖಜಾಂಗಿ ಆಗಿ ಸರಿತಾ ಸುನಿಲ್ ರಾವ್ ಅವರು ಆಯ್ಕೆಯಾದರು.

ಕಾರ್ಯಕಾರಿ ಸಮಿತಿಯ ಸದಸ್ಯರುಗಳಾಗಿ ಸಿಎ. ಶಂಕರ್ ಬಿ ಶೆಟ್ಟಿ, ಸಿಎ. ಸೋಮನಾಥ್ ಕುಂದರ್, ಕರ್ನಿರೆ ವಿಶ್ವನಾಥ್ ಶೆಟ್ಟಿ, ಆನಂದ ಶೆಟ್ಟಿ, ಸಿಎ. ಕಿಶೋರ್ ಕುಮಾರ್ ಸುವರ್ಣ, ಪ್ರವೀಣ್ ಬಿ.ಶೆಟ್ಟಿ, ಅಶೋಕ್ ದೇವಾಡಿಗ, ಲಕ್ಷಿ ಶ ರಾವ್, ಪ್ರಸಾದ್ ಭಂಡಾರಿ, ರ ಂ ಜ ನ್ ಶೆಟ್ಟಿ, ಲಾರೆನ್ಸ್ ಡಿಸೋಜಾ ಮತ್ತು ಸ್ವರ್ಣ ಜ್ಯೋತಿ ಶೆಟ್ಟಿ ಆ ಂ ು ್ಕ ಯಾದರು. ವಿಜಯ ಕಾಲೇಜು ಮೂಲ್ಕಿ ಹಳೆ ವಿದ್ಯಾರ್ಥಿ ಸಂಘ ಮುಂಬಯಿ ಘಟಕದ ಸ್ಥಾಪಕ ಅಧ್ಯಕ್ಷ ಸಿಎ। ಶಂಕರ್ ಬಿ.ಶೆಟ್ಟಿ ಅವರು ನೂತನ ಅಧ್ಯಕ್ಷ ಅಡ್ವೊಕೇಟ್ ಶೇಖರ್ ಭಂಡಾರಿ ಮತ್ತಿತರ ಪದಾಧಿಕಾರಿಗಳಿಗೆ ಪುಷ್ಪಗುಚ್ಛ ನೀಡಿ ಗೌರವಿಸಿ ಅಭಿನಂದಿಸಿ ಶುಭಾರೈಸಿದರು.




ದೆಹಲಿಯ ಸಿರಿ ಫೋರ್ಟ್ ರಸ್ತೆಯಲ್ಲಿರುವ ಎನ್‌ಸಿಯುಐ ಸಭಾಂಗಣದಲ್ಲಿ ಭಾನುವಾರ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ಬಿಜೆಪಿ ಸಂಸದೆ ಬಾನ್ಸುರಿ ಸ್ವರಾಜ್ ಅವರು ಪ್ರಧಾನಿ ನರೇಂದ್ರ ಮೋದಿಯವರ ಮನ್ ಕಿ ಬಾತ್‌ನ 134ನೇ ಕಂತನ್ನು ಆಲಿಸ ಆಗಮಿಸಿದ್ದರು.

# ಕರ್ನಾಟಕ ಕರಾವಳಿ ಭಾಗಕ್ಕೆ ಬೆಂಗಳೂರಿನಿಂದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಸಂಚಾರದ ಕನಸು ನನಸು

ಬೆಂಗಳೂರು: ಕರ್ನಾಟಕ ಕರಾವಳಿ ಭಾಗಕ್ಕೆ ಬೆಂಗಳೂರಿನಿಂದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಸಂಚಾರದ ಕನಸು ನನಸಾಗುತ್ತಿದೆ. ವರ್ಷದಿಂದಲೂ ಘೋಷಣೆ ಹಂತದಲ್ಲಿದ್ದ ಪ್ರಸ್ತುತ ರೈಲಿಗೆ ಇತ್ತೀಚೆಗೆ ಅನುಮೋದನೆ ನೀಡಿದ ಬೆನ್ನಲ್ಲೆ ತಾತ್ಕಾಲಿಕ ವೇಳಾಪಟ್ಟಿ ಪ್ರಕಟಿಸಿರುವ ರೈಲ್ವೆ ಇಲಾಖೆಯು ಇದೇ ಜೂನ್ 3ರಂದು ಪ್ರಾಯೋಗಿಕ ಸಂಚಾರ ಆರಂಭಿಸಲಿದೆ.ಪ್ರಮುಖ ರೈಲ್ವೆ ತಪಾಸಣೆಗಳು, ಪರೀಕ್ಷೆಗಳು ಈ ವೇಳೆ ನಡೆಯಲಿವೆ.ದಕ್ಷಿಣ ಕರ್ನಾಟಕದ ಭಾಗದಿಂದ ಕರಾವಳಿ ಕರ್ನಾಟಕದ ಭಾಗಕ್ಕೆ ವೇಗದ ರೈಲು ಸಾರಿಗೆ ಸಿಕ್ಕಂತಾಗಲಿದೆ. ಇದು ಪ್ರಯಾಣಿಕರಿಗೆ, ವ್ಯಾಪಾರ, ವಾಣಿಜ್ಯಕ್ಕೆ ಪೂರಕವಾಗುವ ಜೊತೆಗೆ ಕರಾವಳಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಿದೆ. ಒಟ್ಟು 8 ಬೋಗಿಗಳ ರೈಲು ಬುಧವಾರ (ಜೂನ್ 3) ಬೆಳಗ್ಗೆ 6 ಗಂಟೆಗೆ ಬೆಂಗಳೂರಿನ ಯಶವಂತಪುರ ನಿಲ್ದಾಣದಿಂದ ಹೊರಡಲಿದೆ. ಒಟ್ಟು 8 ಗಂಟೆ 40ನಿಮಿಷಗಳು ಕ್ರಮಿಸಿ ಮಂಗಳೂರು ಸೆಂಟ್ರಲ್ ನಿಲ್ದಾಣ ತಲುಪಲಿದೆ ಎಂದು ರೈಲ್ವೆ ಅಧಿಕಾರಿಗಳು ತಾತ್ಕಾಲಿಕ ವೇಳಾಪಟ್ಟಿಯಲ್ಲಿ ತಿಳಿಸಿದ್ದಾರೆ.ಪ್ರಾಯೋಗಿಕ ಸಂಚಾರ ವೇಳೆ ರೈಲ್ವೆ ತಜ್ಞರು, ಹಿರಿಯ ಅಧಿಕಾರಿಗಳು, ತಾಂತ್ರಿಕ ನಿಪುಣರು ಇರಲಿದ್ದಾರೆ. ಇತ್ತೀಚೆಗೆ ರೈಲ್ವೆ ಡಬಲಿಂಗ್ ಕಾರ್ಯ ಹಾಗೂ ಸುಬ್ರಹ್ಮಣ್ಯ ರಸ್ತೆಯ ದುರ್ಗಮ ಪ್ರದೇಶದಲ್ಲಿ ವಿದ್ಯುದೀಕರಣವು ಯಶಸ್ವಿಯಾಗಿದೆ.



ಇದರ ಬೆನ್ನಲ್ಲೆ ಈ ಮಾರ್ಗದಲ್ಲಿ ವಂದೇ ಭಾರತ್ ರೈಲು ಘೋಷಣೆ ಆಗಿದೆ. ಬುಧವಾರ ರೈಲಿನ ವೇಗ, ವೇಗ ನಿಯಂತ್ರಣ, ರೈಇನ ಸಾಮರ್ಥ್ಯ, ಸುರಂಗ ಮತ್ತು ಘಾಟಿ ಮಾರ್ಗದಲ್ಲಿ ರೈಲಿನ ಕಾರ್ಯಕ್ಷಮತೆ, ಸಿಗ್ನಲಿಂಗ್ ಸೇರಿದಂತೆ ಅನೇಕ ತಪಾಸಣೆಗಳು ನಡೆಯಲಿವೆ. ವಂದೇ ಭಾರತ್ ರೈಲು ವೇಗದ ರೈಲಾಗಿದ್ದು, ಸುಮಾರು 100 ಕಿ.ಮೀ. ವೇಗದಲ್ಲಿ ಸಾಗಲಿದೆ. ಘಾಟಿ ಪ್ರದೇಶದಲ್ಲಿ ರೈಲಿನ ವೇಗ ತಗ್ಗಲಿದೆ. ವಾಣಿಜ್ಯ ಕಾರ್ಯಾಚರಣೆ ಆರಂಭಿಸಲು ಇರುವ ಎಲ್ಲ ಮಾನದಂಡಗಳನ್ನು ಪ್ರಾಯೋಗಿಕ ಸಂಚಾರದ ವೇಳೆ ಪರಿಗಣಿಸಲಾಗುತ್ತದೆ. ಶೀಘ್ರವೇ ರೈಲಿನ ವಾಣಿಜ್ಯ ಸೇವೆ ಪ್ರಯಾಣಿಕರಿಗೆ ಲಭ್ಯವಾಗಲಿದೆ ಎಂದು ರೈಲ್ವೆ ಮೂಲಗಳು ತಿಳಿಸಿವೆ.

ಬೆಂಗಳೂರಿನಿಂದ ಹೊರಟು ನೇರ ಹಾಸನವನ್ನು ಬೆಳಗ್ಗೆ 9 ಗಂಟೆಗೆ ತಲುಪುತ್ತದೆ. 10 ನಿಮಿಷ ಬಳಿಕ ಅಲ್ಲಿಂದ ಹೊರಟು 9.55 ಗಂಟೆಗೆ ಸಕಲೇಶಪುರ ಮುಟ್ಟಲಿದೆ. ಮಧ್ಯಾಹ್ನ 12.30ಕ್ಕೆ ಸುಬ್ರಹ್ಮಣ್ಯ ರಸ್ತೆ, 2ಗಂಟೆಗೆ ಪಡೀಲ್ ನಂತರ 2.40ಕ್ಕೆ ಮಂಗಳೂರು ಸೆಂಟ್ರಲ್ ನಿಲ್ದಾಣ ತಲುಪುತ್ತದೆ. ನಾಲ್ಕು ನಿಲ್ದಾಣಗಳಲ್ಲಿ ನಿಲುಗಡೆ ನೀಡಲಿದೆ. ಮರಳಿ ಅದೇ ದಿಕ್ಕಿನಲ್ಲಿ ರೈಲು ಮಂಗಳೂರಿನಿಂದ 2.45ಕ್ಕೆ ಹೊರಡುತ್ತದೆ. ಪಡೀಲ್ (3.10ಗಂಟೆ), ಸುಬ್ರಹ್ಮಣ್ಯ ರಸ್ತೆ (3.50ಗಂಟೆ), ಸಕಲೇಶಪುರ (4.30ಕ್ಕೆ), ಹಾಸನ (7.30ಕ್ಕೆ) ಮೂಲಕ ಬೆಂಗಳೂರಿಗೆ ರಾತ್ರಿ 11 ಗಂಟೆಗೆ ಬಂದು ಸೇರುತ್ತದೆ.

ಪ್ರಾಯೋಗಿಕ ಹಂತದಲ್ಲಿರುವ ಬೆಂಗಳೂರು-ಮಂಗಳೂರು ವಂದೇಭಾರತ್ ರೈಲು ಕಾರ್ಯಾಚರಣೆ ಸಂಬಂಧ ತಾತ್ಕಲಿಕ ವೇಳಾಪಟ್ಟಿ ಪ್ರಕಟಿಸಿದ್ದು, ಶೀಘ್ರವೇ ಅಂತಿಮ ವೇಳಾಪಟ್ಟಿ ಬಿಡುಗಡೆ ಆಗಲಿದೆ. ಕರ್ನಾಟಕದಲ್ಲಿ ಒಟ್ಟು 12 ವಂದೇಭಾರತ್ ರೈಲುಗಳು ಸೇವೆಯಲ್ಲಿವೆ. ದೇಶದ ನಾನಾ ಕಡೆಗಳಲ್ಲಿ ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ. ಕರಾವಳಿಗೆ ವಂದೇ ಭಾರತ್ ರೈಲು ಬಿಡುವಂತೆ ಸಾಕಷ್ಟು ಬೇಡಿಕೆ ಕೇಳಿ ಬಂದಿತ್ತು. ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್, ವಿ.ಸೋಮಣ್ಣ ಅವರು ಆಗಾಗ ಘೋಷಣೆಗ ಮಾಡಿದ್ದರು ಸಹಿತ ಯಾವುದೇ ಅಧಿಕೃತಗೊಂಡಿರಲಿಲ್ಲ. ಸದ್ಯ ಕರಾವಳಿ ಜನರ ಕನಸು ನನಸಾಗುವ ಕಾಲ ಕೂಡಿ ಬಂದಿದ್ದು, ಬೆಂಗಳೂರು-ಮಂಗಳೂರು ರೈಲು ಸಾರಿಗೆ ಮತ್ತಷ್ಟು ಸುಧಾರಣೆ ಆಗಲಿದೆ. ತ್ವರಿತವಾಗಿ ಎರಡು ನಗರಗಳ ಮಧ್ಯ ಸಂಪರ್ಕಿಸಬಹುದು.

# ಹೈಕಮಾಂಡ್ ಮಟ್ಟದಲ್ಲಿ ಘನತೆಯನ್ನು ಹೆಚ್ಚಿಸಿಕೊಂಡ ಸಿದ್ದರಾಮಯ್ಯ

**ಬೆಂಗಳೂರು, ಮೇ.31–** ರಾಜ್ಯ ರಾಜಕಾರಣದ ನಡೆದಿರುವ ನಾಯಕತ್ವ ಬದಲಾವಣೆ ಪ್ರಕ್ರಿಯೆಯ ಬೆನ್ನಲ್ಲೇ, ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಜೂನ್ 3 ರಂದು ಪ್ರಮಾಣವಚನ ಸ್ವೀಕರಿಸುವುದು ಅಧಿಕೃತವಾಗಿದೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೀಡಿದ ಒಂದೇ ಒಂದು ಆಪ್ತ ಸೂಚನೆಗೆ ಗೌರವ ಕೊಟ್ಟು, ಯಾವುದೇ ತಂಟೆ–ತಗಾದೆ ಅಥವಾ ಅಸಮಾಧಾನ ತೋರದೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಸಿದ್ದರಾಮಯ್ಯ ಅವರು ಹೈಕಮಾಂಡ್ ಮಟ್ಟದಲ್ಲಿ ತಮ್ಮ ಘನತೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದಾರೆ.

ಸಿದ್ದರಾಮಯ್ಯ ಅವರ ಈ ನಿಷ್ಠಾವಂತ ಮತ್ತು ಹಿರಿಯ ನಾಯಕನಿಗೆ ತಕ್ಕ ನಡೆಗೆ ಕಾಂಗ್ರೆಸ್ ಹೈಕಮಾಂಡ್ ಶ್ಲಾಘನೆ ವ್ಯಕ್ತಪಡಿಸಿದೆ.

ಖುದ್ದು ರಾಹುಲ್ ಗಾಂಧಿ ಅವರೇ ಸಿದ್ದರಾಮಯ್ಯ ಅವರನ್ನು ಗೌರವಪೂರ್ವಕವಾಗಿ ನವದೆಹಲಿಗೆ ಕರೆಯಿಸಿಕೊಂಡು ಧನ್ಯವಾದ ಅರ್ಪಿಸಿದ್ದಾರೆ. ಅಷ್ಟೇ ಅಲ್ಲದೆ, ಪಕ್ಷಕ್ಕಾಗಿ ಅವರು ಮಾಡಿರುವ ಈ ದೊಡ್ಡ ತ್ಯಾಗವನ್ನು ಸ್ಮರಿಸಿರುವ ರಾಹುಲ್ ಗಾಂಧಿ, ಅವರ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ಹೊಸ ಸರ್ಕಾರದಲ್ಲಿ ಅತ್ಯಂತ ಗೌರವಾನ್ವಿತ ಸ್ಥಾನ ನೀಡುವುದಾಗಿ ಭರವಸೆ ನೀಡಿದ್ದಾರೆ.

ಹೈಕಮಾಂಡ್‌ನ ಈ ಭರವಸೆಯ ಬೆನ್ನಲ್ಲೇ ರಾಜಕೀಯ ವಲಯದಲ್ಲಿ ಯತೀಂದ್ರ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿ ಆಗಲಿದ್ದಾರೆ ಎಂಬ ಭಾರಿ ಚರ್ಚೆಗಳು ಮುನ್ನೆಲೆಗೆ ಬಂದಿವೆ. ಆದರೆ, ಅವರು ಡಿಸಿಎಂ ಆಗುತ್ತಾರೋ ಇಲ್ಲವೋ ಎಂಬುದು ಇನ್ನೂ ಅಂತಿಮವಾಗದಿದ್ದರೂ, ಜೂನ್ 3 ರಂದು ಅಸ್ತಿತ್ವಕ್ಕೆ ಬರಲಿರುವ ಡಿ.ಕೆ. ಶಿವಕುಮಾರ್ ಅವರ ನೂತನ ಸಚಿವ ಸಂಪುಟದಲ್ಲಿ ಯತೀಂದ್ರಗೆ ಪ್ರಬಲ ಸಚಿವ ಸ್ಥಾನ ಸಿಗುವುದು ಮಾತ್ರ ನೂರಕ್ಕೆ ನೂರು ಖಚಿತವಾಗಿದೆ.

ಈ ಮಹತ್ವದ ರಾಜಕೀಯ ಬೆಳವಣಿಗೆಯನ್ನು ಖುದ್ದು ಡಾ. ಯತೀಂದ್ರ ಸಿದ್ದರಾಮಯ್ಯ ಅವರೇ ಮಾಧ್ಯಮಗಳ ಮುಂದೆ ಅಧಿಕೃತವಾಗಿ ಬಹಿರಂಗಪಡಿಸಿದ್ದಾರೆ. ದೆಹಲಿಯಲ್ಲಿ ಹೈಕಮಾಂಡ್ ನಾಯಕರು ತಮ್ಮ ತಂದೆಗೆ ನೀಡಿರುವ ಗಟ್ಟಿ ಭರವಸೆಯನ್ನು ದೃಢಪಡಿಸಿರುವ ಅವರು, ಹೊಸ ಸಂಪುಟದಲ್ಲಿ ತಮಗೆ ಅವಕಾಶ ಸಿಗುತ್ತಿರುವುದನ್ನು ಒಪ್ಪಿಕೊಂಡಿದ್ದಾರೆ. ಇದರೊಂದಿಗೆ ಮುಂಬರುವ ಡಿಕೆಶಿ ಸರ್ಕಾರದಲ್ಲಿ



ಸಿದ್ದರಾಮಯ್ಯ ಬಣದ ಹಿತರಕ್ಷಣೆಯ ಜೊತೆಗೆ ಯತೀಂದ್ರ ಅವರ ರಾಜಕೀಯ ಭವಿಷ್ಯಕ್ಕೂ ಹೈಕಮಾಂಡ್ ಭದ್ರ ಬುನಾದಿ ಹಾಕಿರುವುದು ಸ್ಪಷ್ಟವಾಗಿದೆ.



ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಸೌಮ್ಯ ರೆಡ್ಡಿ ಅವರು ಮೇ–31 ರಂದು ಬೆಂಗಳೂರಿನ ಕುಮಾರ ಕೃಪಾ ಅತಿಥಿ ಗೃಹದಲ್ಲಿ ಕೆಪಿಸಿಸಿ ಅಧ್ಯಕ್ಷರು ಮತ್ತು ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದರು.

# ಡಿ.ಕೆ. ಶಿವಕುಮಾರ್ ಪುತ್ರಿ ಐಶ್ವರ್ಯಾ ವಿಡಿಯೋ ಜಾಲತಾಣದಲ್ಲಿ ವೈರಲ್

**ಬೆಂಗಳೂರು, ಮೇ.31–** ಡಿ.ಕೆ. ಶಿವಕುಮಾರ್ ಒಂದು ದಿನ ಕರ್ನಾಟಕದ ಮುಖ್ಯಮಂತ್ರಿ ಆಗಬೇಕು, ಆಗುತ್ತಾರೆ ಎಂದು ಅವರ ಪುತ್ರಿ ಐಶ್ವರ್ಯಾ ಅವರು ಈ ಹಿಂದೆ ಮಾತನಾಡಿದ್ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಇದರಲ್ಲಿ ನಮ್ಮ ಅಪ್ಪ ಯಾಕೆ ಸಿಎಂ ಆಗಬೇಕು ಎಂದು ಪುತ್ರ ವಿವರಿಸಿದ್ದಾರೆ. ಜತೆಗೆ ಭಾನುವಾರ ಒಂದು ಭಾವನಾತ್ಮಕ ಪೋಸ್ಟ್ ಹಂಚಿಕೊಂಡಿದ್ದಾರೆ.ಈ ಹಿಂದೆ ಖಾಸಗಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಐಶ್ವರ್ಯಾ ಮಾತನಾಡಿದ್ದಾರೆ. " ನನ್ನ ತಂದೆ ಸುಮ್ಮನೆ ಎಲ್ಲೋ ಒಂದು ಸಿಎಂ ಆಗಬೇಕು ಎಂದು ನಾನು ಹೇಳುತ್ತಿಲ್ಲ. ಪಕ್ಷಕ್ಕಾಗಿ, ಜನರಿಗಾಗಿ ಅವರು ಪಟ್ಟಿರುವ ಕಷ್ಟಕ್ಕೆ, ಅವರ ಫ್ಯಾಮಿಲಿ ಮಾಡಿರುವ ತ್ಯಾಗಕ್ಕೆ ಆ ಸ್ಥಾನ ಸಿಗಬೇಕು " ಎಂದಿದ್ದಾರೆ.

"ನಮ್ಮ ಅಪ್ಪ ಜೈಲಿನಿಂದ ಹೊರ ಬಂದಾಗ ನಾನು 2 ದಿನ ಅವರ ಜತೆ ಮಾತನಾಡಿರಲಿಲ್ಲ. ಅದಕ್ಕೆ ಕಾರಣ, ಹೊರಬಂದಾಗ ಮೊದಲು



ನಮ್ಮ ಕುಟುಂಬವನ್ನು ನೋಡಲು ಬರಲಿಲ್ಲ. ಜನರನ್ನು ನೋಡಬೇಕು ಎಂದು ಹೋದರು. ಇದಕ್ಕೋಸ್ಕರ ವಾದರೂ ಒಂದು ದಿನ ನನ್ನ ತಂದೆ ರಾಜ್ಯದ ಮುಖ್ಯಮಂತ್ರಿ ಆಗಬೇಕು, ಆಗುತ್ತಾರೆ ಎಂಬ ಭಾವನೆ ಇಟ್ಟುಕೊಂಡು ಜೀವನ ಮಾಡುತ್ತಿದ್ದೇವೆ. ಹಲವು ವರ್ಷಗಳಿಂದ ನಮ್ಮಪ್ಪ ಯಾವತ್ತೂ ಒಂದು ಮೋಜಿನ ಪ್ರವಾಸ ಹೋಗಿಲ್ಲ. ಕುಟುಂಬವನ್ನೂ ಕರೆದುಕೊಂಡು ಹೋಗಿಲ್ಲ" ಎಂದು ವಿವರಿಸಿದ್ದಾರೆ.

ನನಗೋಸ್ಕರ ಎಷ್ಟೋ ಜನ ಚಪ್ಪಲಿಯನ್ನೂ ಹಾಕಿಕೊಳ್ಳದೇ ರೈಲು ಹತ್ತಿಕೊಂಡು ದೆಹಲಿಯ ಜೈಲಿನ ಬಳಿ ಬಂದಿದ್ದಾರೆ. ಎಷ್ಟೋ ದಿನ ಊಟ ಇಲ್ಲದೇ ಜೈಲಿನಿಂದ ಆಚೆ ನಿಂತು ಕಾದಿದ್ದಾರೆ. ಅವರಿಗೋಸ್ಕರ ನಾನು ಹೋಗದೇ, ನನ್ನ ಕುಟುಂಬ ನೋಡಬೇಕು ಎಂದು ಹೇಗೆ ಓಡಿಬರಲಿ ಹೇಳು? ಎಂದು ನನಗೆ ಕೇಳಿದರು. ಆಗ ನನಗೆ ಅವರಿಗೆ ಜನರ ಮೇಲಿನ ಪ್ರೀತಿ ಅರ್ಥ ಆಯಿತು ಎಂದು ಐಶ್ವರ್ಯಾ ನುಡಿದಿದ್ದಾರೆ.

ಇವತ್ತು ಜನ ಬಂಡೆ ಎಂದು ಕರೆಯಬಹುದು. ಆದರೆ, ಆ ಬಂಡೆ ರೂಪುಗೊಳ್ಳುವುದಕ್ಕೆ ಎಷ್ಟು ಸಮಯ ತೆಗೆದುಕೊಂಡಿದೆ ಅಂತಾ ನಾವು ಚಿಕ್ಕವಯಸ್ಸಿನಿಂದ ನೋಡಿದ್ದೇವೆ. ಮುಂದಿನ ದಿನಗಳಲ್ಲಿ ನಮ್ಮ ಅಪ್ಪ ಏನು ಮಾಡುತ್ತಾರೋ? ಏನೆಲ್ಲಾ ಬದಲಾವಣೆ ತರುತ್ತಾರೋ ಎಂದು ನಾವೆಲ್ಲಾ ಕುತೂಹಲದಿಂದ ಕಾಯುತ್ತಿದ್ದೇವೆ. ನಮ್ಮ ಅಪ್ಪ ಯಾವಾಗಲೂ ಒಂದು ಮಾತು ಹೇಳುತ್ತಿರುತ್ತಾರೆ, ಮಗಳೇ ದೇವರು ವರನೂ ಕೊಡಲ್ಲ, ಶಾಪನೂ ಕೊಡಲ್ಲ. ಅವಕಾಶಗಳನ್ನು ಮಾತ್ರ ಕೊಡ್ತಾನೆ. ನಮ್ಮ ಅಪ್ಪ ದೊಡ್ಡ ಮಹತ್ವಾಕಾಂಕ್ಷೆಯ, ಧ್ಯೇಯ ಹೊಂದಿರುವ ವ್ಯಕ್ತಿ. ಜನಗಳಿಗಾಗಿ ಏನು ಮಾಡಬೇಕು ಎಂಬುದು ಅವರಿಗೆ ಗೊತ್ತು. ಅವರ ಮುಂದಿನ ಹಾದಿ ಸುಗಮವಾಗಿರಲಿ. ಲವ್ ಯು ಅಪ್ಪ.

# ರಾಜ್ಯದಾದ್ಯಂತ ಮುಂಗಾರು ಮಳೆ ಚುರುಕು, ವರುಣನ ಆರ್ಭಟ

**ಬೆಂಗಳೂರು, ಮೇ.31–** ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಚುರುಕಾಗಿದ್ದು, ರಾಜ್ಯದಾದ್ಯಂತ ಮುಂದಿನ ಕೆಲವು ದಿನಗಳ ಕಾಲ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ವರುಣನ ಆರ್ಭಟ ಹೆಚ್ಚಿರಲಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಾಮರಾಜನಗರ, ಹಾಸನ, ಕೊಡಗು, ಮೈಸೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಯೆಲ್ಲೋ ಅಲರ್ಟ್ ನೀಡಲಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ತುಮಕೂರು, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ.

ಬಳ್ಳಾರಿ, ವಿಜಯನಗರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ಗಾಳಿ ಸಹಿತ ಸಾಧಾರಣ ಮಳೆಯಾಗಬಹುದು. ಕರಾವಳಿ ತೀರದ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯ ಕೆಲವು ಕಡೆಗಳಲ್ಲಿ ಗಂಟೆಗೆ 30–40 ಕಿ.ಮೀ ವೇಗದ ಗಾಳಿಯೊಂದಿಗೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಇನ್ನು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಹಗುರವಾದ ಮಳೆಯಾಗಲಿದೆ.

ಭಾರತೀಯ ಹವಾಮಾನ ಇಲಾಖೆ ದಕ್ಷಿಣ–ಪಶ್ಚಿಮ ಮುಂಗಾರು ಮಳೆಯ ಮುನ್ಸೂಚನೆಯನ್ನು ಪರಿಷ್ಕರಿಸಿದ್ದು, ಇದರ ಪರಿಣಾಮವಾಗಿ ಜೂನ್ ತಿಂಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯ ಜೊತೆಗೆ ಹೆಚ್ಚುವರಿ ಉಷ್ಣ ಅಲೆ (ಹೀಟ್ವೇವ್) ದಿನಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಇಲಾಖೆ ಎಚ್ಚರಿಸಿದೆ. 2026ರ ಜೂನ್ನಿಂದ ಸೆಪ್ಟೆಂಬರ್‌ವರೆಗೆ ಇರುವ ದಕ್ಷಿಣ–ಪಶ್ಚಿಮ ಮುಂಗಾರು ಮಳೆಯ ಎರಡನೇ ಹಂತದ ದೀರ್ಘಾವಧಿ ಮುನ್ಸೂಚನೆಯಲ್ಲಿ, ದೇಶದ ಪ್ರಮುಖ ಮುಂಗಾರು ವಲಯಕ್ಕೆ ಸೇರಿರುವ ಬಹುತೇಕ ಭೂಭಾಗಗಳಲ್ಲಿ ದೀರ್ಘಾವಧಿಯ ಸರಾಸರಿ ಶೇ. 90ರಷ್ಟು ಮಳೆಯಾಗಲಿದೆ ಎಂದು ತಿಳಿಸಿದೆ.

## ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ಜತೆ ಚರ್ಚೆ

# ಹೊಸ ಸರ್ಕಾರದ ಅಧಿಕಾರದ ಹಿನ್ನೆಲೆಯಲ್ಲಿ ಡಿಜಿಪಿ ಅಲೋಕ್‌ಕುಮಾರ್, ಎಡಿಜಿಪಿ ರೂಪಾ ಮೌದ್ಗಿಲ್ ಭೇಟಿ

**ಬೆಂಗಳೂರು, ಮೇ.31–** ಹೊಸ ಸರ್ಕಾರ ಅಧಿಕಾರಕ್ಕೆ ಬರಲಿರುವ ಹಿನ್ನೆಲೆಯಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ವಲಯದಲ್ಲಿ ಚಟುವಟಿಕೆಗಳು ಗರಿಗೆದರಿವೆ.

ಇದರ ಭಾಗವಾಗಿ, ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬೆಂಗಳೂರಿನ ಸದಾಶಿವನಗರದಲ್ಲಿರುವ ನಿವಾಸಕ್ಕೆ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಮಾತುಕತೆ ನಡೆಸಿದ್ದಾರೆ. ಹೊಸ ಸರ್ಕಾರದ ಜವಾಬ್ದಾರಿ ವಹಿಸಿಕೊಳ್ಳಲಿರುವ ನಾಯಕರನ್ನು ಭೇಟಿಯಾಗುವುದು ಆಡಳಿತಾತ್ಮಕ ಶಿಷ್ಟಾಚಾರದ ಭಾಗವಾಗಿದೆ.

ಡಿಜಿಪಿ ಅಲೋಕ್ ಕುಮಾರ್ ಮತ್ತು ಎಡಿಜಿಪಿ ಡಿ.ರೂಪಾ ಮೌದ್ಗಿಲ್ ಅವರು ಸದಾಶಿವನಗರದ ನಿವಾಸಕ್ಕೆ ಆಗಮಿಸಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿದ್ದಾರೆ. ಈ ಸಂದರ್ಭದಲ್ಲಿ



ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮತ್ತು ರಾಜ್ಯ ಗುಪ್ತಚರ ಇಲಾಖೆಯ ಐಜಿಪಿ ಲಾಬೂರಾಮ್ ಕೂಡ ಉಪಸ್ಥಿತರಿದ್ದರು.

ಸಾಮಾನ್ಯವಾಗಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವ ಮುನ್ನ ರಾಜ್ಯದ ಕಾನೂನು ಸುವ್ಯವಸ್ಥೆ ಮತ್ತು ಪ್ರಸ್ತುತ ಭದ್ರತಾ ಪರಿಸ್ಥಿತಿಯ ಬಗ್ಗೆ ನಿಯೋಜಿತ ಮುಖ್ಯಸ್ಥರಿಗೆ ಮಾಹಿತಿ ನೀಡುವುದು ಇಲಾಖೆಯ ನಿಯಮವಾಗಿದೆ. ಅದರಂತೆ, ರಾಜ್ಯದ ಸದ್ಯದ ಭದ್ರತಾ



ವಿದ್ಯಮಾನಗಳು ಮತ್ತು ಆಡಳಿತಾತ್ಮಕ ವಿಷಯಗಳ ಕುರಿತು ಹಿರಿಯ ಅಧಿಕಾರಿಗಳು ಡಿ.ಕೆ.ಶಿವಕುಮಾರ್ ಅವರೊಂದಿಗೆ ಪ್ರಾಥಮಿಕ ಹಂತದ ಸಮಾಲೋಚನೆ ನಡೆಸಿದ್ದಾರೆ. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಈ ಅಧಿಕೃತ ಭೇಟಿಯ ವೇಳೆ ಚರ್ಚಿಸಲಾಗಿದೆ ಎಂದು ತಿಳಿದುಬಂದಿದೆ.

# ಕಾಂಗ್ರೆಸ್ ಯುವನಾಯಕ ಮೊಹಮ್ಮದ್ ನಲಪಾಡ್ ವಿಚಾರಣೆಗೆ ಒಳಪಡಿಸಲು ಇ.ಡಿ.ಯಿಂದ ಮತ್ತೆ ಸಮನ್ಸ್

**ಬೆಂಗಳೂರು,ಮೇ.31:** ಬಿಟ್ಕಾಯಿನ್ ಪ್ರಕರಣದ ತನಿಖೆಯನ್ನು ನಡೆಸುತ್ತಿರುವ ಜಾರಿ ನಿರ್ದೇಶನಾಲಯ( ಇಡಿ), ಪ್ರಕರಣದ ತನಿಖೆಯ ಭಾಗವಾಗಿ ವಿಚಾರಣೆಗೆ ಹಾಜರಾಗುವಂತೆ ಶಾಸಕ ಎನ್.ಎ.ಹ್ಯಾರೀಸ್‌ಅವರ ಪುತ್ರ ಮೊಹಮ್ಮದ್ ನಲಪಾಡ್ರಿಗೆ ಸಮನ್?ಸ ಜಾರಿ ಮಾಡಿದೆ. ಇಡಿ ಜಾರಿ ಮಾಡಿರುವ ಸಮನ್ಸ್ ನಿರ್ದೇಶನದಂತೆ, ನಲಪಾಡ್ ಸೋಮವಾರದಂದು ಇಡಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಬೇಕಿದೆ. ಈ ಪ್ರಕರಣವು ರಾಜ್ಯದಲ್ಲಿ ಭಾರೀ ಸದ್ದು ಮಾಡಿದ್ದು, ಹಣ ವರ್ಗಾವಣೆ ಮತ್ತು ಬಿಟ್ಕಾಯಿನ್ ದುರ್ಬಳಕೆ ಆರೋಪದ ಮೇಲೆ ತನಿಖಾ ಸಂಸ್ಥೆಗಳು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿವೆ.

**ಮೂವರನ್ನ ಬಂಧಿಸಿರುವ ಅಧಿಕಾರಿಗಳು**

ಶ್ರೀಕಿ, ನಲಪಾಡ್ ಮನೆ ಮೇಲೆ ದಾಳಿ ನಡೆಸಿದ್ದ ಇಡಿ ಪರಿಶೀಲನೆ ನಡೆಸಿತ್ತು. ಈ ಪ್ರಕರಣ ಸಂಬಂಧ ಈಗಾಗಲೇ ಇಡಿ ಅಧಿಕಾರಿಗಳು ಶ್ರೀಕಿ, ಸುನೇಶ್ ಹೆಗ್ಡೆ, ರಾಬಿನ್ ಖಂಡೇವಾಲ ಅವರನ್ನು ಬಂಧಿಸಿದ್ದಾರೆ. ಎರಡನೇ ಬಾರಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು.

ಬಿಟ್ ಕಾಯಿನ್ ಕೇಸ್ ಸಂಬಂಧಕ್ಕೆ ನಾಯಕ ಮೊಹಮದ್ ನಲಪಾಡ್ ಅವರಿಗೆ ಇಡಿ ಎರಡನೇ ಬಾರಿ ನೋಟಿಸ್ ನೀಡಿದೆ. ರಾಜಕೀಯ ಕಾರ್ಯಕ್ರಮ ಹಿನ್ನೆಲೆ ಮೊದಲ ನೋಟಿಸ್ಗೆ ನಲಪಾಡ್ ಹಾಜರಾಗಿರಲಿಲ್ಲ. ಕಾರಣ ತಿಳಿಸಿ ಇಡಿಗೆ ಮನವಿ ಮಾಡಿದ್ದರು. ಬಿಟ್ ಕಾಯಿನ್ ಬಹುಕೋಟಿ ಹಗರಣದಲ್ಲಿ ಮೂವರನ್ನು ಬಂಧಿಸಿರುವ ಇಡಿ ತನಿಖೆ ತೀವ್ರಗೊಳಿಸಿದೆ.

ಇತ್ತೀಚೆಗಷ್ಟೇ ಬಿಟ್ ಕಾಯಿನ್ ಹಗರಣ ಪ್ರಕರಣದಲ್ಲಿ ಬೆಂಗಳೂರಿನ ಅಶೋಕನಗರ 'ದಲ್ಲಿರುವ ನಲಪಾಡ್ ಮನೆ ಮೇಲೆ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯ ಸತತ 21 ಗಂಟೆಗಳ ಶೋಧ ಕಾರ್ಯ ನಡೆಸಿತ್ತು. ಈ ವೇಳೆ ಹಾರ್ಡ್ಡಿಸ್ಕ್, ವಿದೇಶಿ ವ್ಯವಹಾರದ ಬ್ಯಾಂಕ್ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿತ್ತು.

ಕೆಲ ವರ್ಷಗಳ ಹಿಂದೆ ಬಿಟ್ ಕಾಯಿನ್ ಹಗರಣ ರಾಜ್ಯದಲ್ಲಿ ಕೋಲಾಹಲ ಎಬ್ಬಿಸಿತ್ತು. ಇದರಲ್ಲಿ ಕೆಲವು ಪ್ರಭಾವಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಕೈ ಜೋಡಿಸಿದ್ದಾರೆ



ಎಂಬ ವದಂತಿ ದಟ್ಟವಾಗಿತ್ತು. ಈ ಹಗರಣದ ಸೂತ್ರಧಾರ ಎನ್ನಲಾಗಿದ್ದ ಅಂತಾರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದರು. ನಂತರ ಬಿಡುಗಡೆ ಮಾಡಿದ್ದರು.

**ಪ್ರಕರಣದ ಹಿನ್ನೆಲೆ :**

ಬಿಟ್ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿ ಜಾರಿ ನಿರ್ದೇಶನಾಲಯವು ತನಿಖೆಯನ್ನು ತೀವ್ರಗೊಳಿಸಿದೆ. ಈ ಪ್ರಕರಣದ ತನಿಖೆಯ ಭಾಗವಾಗಿ ಇತ್ತೀಚಿನ ದಿನಗಳಲ್ಲಿ ರಾಜ್ಯದ ವಿವಿಧೆಡೆ ದಾಳಿಗಳು ನಡೆದಿದ್ದವು. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಪ್ರಕರಣದ ಪ್ರಮುಖ ಆರೋಪಿಗಳು ಮತ್ತು ಅವರೊಂದಿಗೆ ಸಂಪರ್ಕ ಹೊಂದಿರುವವರ ಮನೆಗಳು ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿ, ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು.

ಶಾಸಕರೊಬ್ಬರ ಪುತ್ರರ ಹೆಸರು ಈ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಚರ್ಚೆಗೆ ಬಂದಿದೆ. ಇಡಿ ಅಧಿಕಾರಿಗಳು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಶಯಾಸ್ಪದ ವ್ಯವಹಾರಗಳು ಮತ್ತು ಹಣಕಾಸಿನ ವಹಿವಾಟುಗಳ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ಹಗರಣದಲ್ಲಿ ಬಿಟ್ಕಾಯಿನ್ ಮೂಲಕ ಅಕ್ರಮ ಹಣವನ್ನು ವರ್ಗಾವಣೆ ಮಾಡಲಾಗಿದೆ ಎಂಬ ಆರೋಪವಿದೆ. ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಎಂಬಾತನ ಮೂಲಕ ನಡೆದಿದೆ ಎನ್ನಲಾದ ಈ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರ ಸಂಪರ್ಕ ಜಾಲವನ್ನು ಪತ್ತೆಹಚ್ಚುವುದು ಇಡಿಯ ಮುಖ್ಯ ಉದ್ದೇಶವಾಗಿದೆ.

# ಧರಂಸಿಂಗ್ ಪುತ್ರ ಡಾ. ಅಜಯ್ ಸಿಂಗ್‌ಗೆ ಈ ಬಾರಿಯಾದರೂ ಒಲಿಯಲಿದೆಯೇ ಮಂತ್ರಿಗಿರಿ

**ಬೆಂಗಳೂರು, ಮೇ.31;** ರಾಜಕಾರಣದಲ್ಲಿ ಅಜಾತಶತ್ರು, ಸ್ನಹಜೀವಿ ಎಂದೇ ಗುರುತಿಸಿಕೊಂಡಿದ್ದ ಮಾಜಿ ಮುಖ್ಯಮಂತ್ರಿ ದಿವಂಗತ ಧರಂಸಿಂಗ್ ಅವರ ಉತ್ತರಾಧಿಕಾರಿ, ಜೇವರ್ಗಿ ಶಾಸಕ ಡಾ. ಅಜಯ್ ಸಿಂಗ್ ಅವರಿಗೆ ಈ ಬಾರಿಯಾದರೂ ಮಂತ್ರಿಗಿರಿ ಒಲಿಯುವುದೇ ಎನ್ನುವ ಜಿಜ್ಞಾಸೆ ರಾಜಕೀಯ ವಲಯದಲ್ಲಿದೆ.

ಮಾಜಿ ಮುಖ್ಯಮಂತ್ರಿಗಳ ಮಕ್ಕಳ ಪೈಕಿ ಅವಕಾಶವಂಚಿತ ಶಾಸಕ ಅಂದರೆ ಅದು ಡಾ. ಅಜಯ್ ಸಿಂಗ್. ಸಿದ್ಧರಾಮಯ್ಯ ಸರ್ಕಾರದಲ್ಲಿ ಏಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಪ್ರಭಾವಿ ಸಚಿವರಾಗಿದ್ದರು. ಆರ್. ಗುಂಡೂರಾವ್ ಮಗ ದಿನೇಶ್ ಗುಂಡೂರಾವ್, ಎಸ್. ಬಂಗಾರಪ್ಪ ಸುಪುತ್ರ ಮಧು ಬಂಗಾರಪ್ಪ ಸಚಿವ ಸ್ಥಾನ ಪಡೆದಿದ್ದರು. ಈ ಪೈಕಿ ಪ್ರಿಯಾಂಕ್ ಖರ್ಗೆ ಮತ್ತೊಮ್ಮೆ ಸಚಿವರಾಗಲಿದ್ದಾರೆ. ಉಪಮುಖ್ಯ ಮಂತ್ರಿಯಾದರೂ ಅಚ್ಚರಿಯಿಲ್ಲ. ದಿನೇಶ್ ಮತ್ತು ಮಧು ಬಂಗಾರಪ್ಪ ಸಚಿವ ಸ್ಥಾನ ಒಲಿಯಬಹುದು.

ಕಾಂಗ್ರೆಸ್ ನಲ್ಲಿ ಖರ್ಗೆ ಮತ್ತು ಧರಂ ಸಿಂಗ್ ಜನಪ್ರಿಯ ಜೋಡಿ. ಇವರೊಂದಿಗೆ ಎಚ್.ಕೆ. ಪಾಟೀಲ್ ಕೂಡ ಪಕ್ಷದ ನೊಗ ಹೊತ್ತ ಪ್ರಮುಖರು. ಈ ಮೂವರು ನಾಯಕರನ್ನು ಕಾಂಗ್ರೆಸ್ ನ ಸೆಟ್ ದೋಸೆ ಎಂದೇ ಕರೆಯಲಾಗುತ್ತಿತ್ತು. ಆದರೆ ಖರ್ಗೆ ಅವರಿಗೆ ಮುಖ್ಯಮಂತ್ರಿ ಸ್ಥಾನ ಎಂದೋ ಒಲಿಯಬೇಕಿತ್ತು. 2004 ರಲ್ಲಿ ಅಂತಹ ಅವಕಾಶದ ಬಾಗಿಲು ತೆರೆಯುವ ಸಮಯದಲ್ಲಿ ಆ ಅದೃಷ್ಟ ಧರಂ ಸಿಂಗ್ ಪಾಲಾಯಿತು. ಎಲ್ಲರನ್ನು ಸಂಭಾಳಿಸುವ ಧರಂ ಸಿಂಗ್ ಆಗ ದೇವೇಗೌಡರ ಆಯ್ಕೆಯಾಗಿತ್ತು.

ಧರಂ ಸಿಂಗ್ ನಂತರ ಜೇವರ್ಗಿ ಶಾಸಕರಾಗಿ ಕ್ಷೇತ್ರ ಮತ್ತು ಪಕ್ಷದ ಸಂಘಟನೆಯಲ್ಲಿ ತೊಡಗಿರುವ ಡಾ. ಅಜಯ್ ಸಿಂಗ್ ಅವರಿಗೆ ಈವರೆಗೆ ಸಚಿವ ಸ್ಥಾನದ ಭಾಗ್ಯ ದೊರೆತಿಲ್ಲ. ಅವರು ಇದೀಗ ಕಲ್ಯಾಣ ಕರ್ನಾಟಕ ಕ್ಷೇತ್ರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಜಯ್ ಅವರಿಗೆ ಸಚಿವ ಸ್ಥಾನ ದೊರಕಿಸಿ ಕೊಡುವುದು ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೊಡ್ಡ ವಿಷಯವಲ್ಲ. ಆದರೆ ಅವರು ಮನಸ್ಸು ಮಾಡಿದಂತೆ ಕಾಣುತ್ತಿಲ್ಲ. ಖರ್ಗೆ ಅವರನ್ನು ಎದುರು ಹಾಕಿಕೊಂಡು ಸಚಿವ ಸ್ಥಾನ ಕೊಡಲು ಸಿದ್ಧರಾಮಯ್ಯ ಮುಂದಾಗಲಿಲ್ಲ. ಆದರೆ ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಅವಕಾಶ ದೊರೆಯಬಹುದೇ ಎನ್ನುವ ನಿರೀಕ್ಷೆಯಿದೆ.

ಕಳೆದ ಕೆಲವು ವರ್ಷಗಳಿಂದ ಸಚಿವ ಸ್ಥಾನದ ನಿರೀಕ್ಷೆಯಲ್ಲಿರುವ ಡಾ. ಅಜಯ್ ಸಿಂಗ್ ಅವರಿಗೆ ಈ ಬಾರಿ ಅವಕಾಶ ಸಿಗುವ ಸಾಧ್ಯತೆಗಳ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕೆಂಬ ಬೇಡಿಕೆ, ಧರಂ ಸಿಂಗ್ ಕುಟುಂಬದ ರಾಜಕೀಯ ಹಿನ್ನೆಲೆ ಹಾಗೂ ಅಜಯ್ ಸಿಂಗ್ ಅವರ ಅನುಭವವು ಅವರ ಪರವಾಗಿರುವ ಪ್ರಮುಖ ಅಂಶಗಳಾಗಿವೆ.

ಇನ್ನೊಂದೆಡೆ, ಸಚಿವ ಸಂಪುಟದಲ್ಲಿ ಸ್ಥಾನ ಪಡೆಯಲು ಹಲವಾರು ಹಿರಿಯ ಮತ್ತು ಯುವ ಶಾಸಕರು



ಪೈಪೋಟಿ ನಡೆಸುತ್ತಿರುವುದರಿಂದ ಸ್ಪರ್ಧೆ ತೀವ್ರವಾಗಿದೆ. ಜಾತಿ ಸಮೀಕರಣ, ಪ್ರಾದೇಶಿಕ ಸಮತೋಲನ, ಪಕ್ಷದ ಒಳರಾಜಕೀಯ ಹಾಗೂ ಹೈಕಮಾಂಡ್‌ನ ಅಂತಿಮ ನಿರ್ಧಾರವೇ ಸಚಿವರ ಆಯ್ಕೆಯಲ್ಲಿ ನಿರ್ಣಾಯಕವಾಗಲಿದೆ.

ಕಾಂಗ್ರೆಸ್ ಪಕ್ಷ ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚಿನ ಆದ್ಯತೆ ನೀಡಿದರೆ ಡಾ. ಅಜಯ್ ಸಿಂಗ್ ಅವರಿಗೆ ಸಚಿವ ಸ್ಥಾನ ದೊರೆಯುವ ಸಾಧ್ಯತೆ ಹೆಚ್ಚಿದೆ. ಆದರೆ ಅಂತಿಮ ನಿರ್ಧಾರ ಮುಖ್ಯಮಂತ್ರಿ ಮತ್ತು ಪಕ್ಷದ ಹೈಕಮಾಂಡ್ ಮಟ್ಟದಲ್ಲೇ ಕೈ ಗೊಳ್ಳುತ್ತಿರುವುದರಿಂದ ಅಧಿಕೃತ ಘೋಷಣೆ ಹೊರಬೀಳುವವರೆಗೆ ಯಾವುದೇ ಊಹಾಪೋಹಗಳಿಗೆ ಸ್ಪಷ್ಟ ಉತ್ತರ ಸಿಗುವುದಿಲ್ಲ.

ಧರಂ ಸಿಂಗ್ ಅವರ ಪುತ್ರ ಎಂಬ ರಾಜಕೀಯ ಹಿನ್ನೆಲೆ, ಕ್ಷೇತ್ರದಲ್ಲಿನ ಹಿಡಿತ ಮತ್ತು ಪಕ್ಷದಲ್ಲಿನ ಅನುಭವದ ಆಧಾರದ ಮೇಲೆ ಡಾ. ಅಜಯ್ ಸಿಂಗ್ ಈ ಬಾರಿಯ ಸಚಿವ ಸಂಪುಟದಲ್ಲಿ ಸ್ಥಾನ ಪಡೆಯುವ ಪ್ರಬಲ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದಾರೆ. ಅವರ ಬೆಂಬಲಿಗರು ಮಾತ್ರ ಈ ಬಾರಿ ಮಂತ್ರಿಗಿರಿ ಖಚಿತವಾಗಬಹುದು ಎಂಬ ಆಶಾಭಾವನೆಯಲ್ಲಿದ್ದಾರೆ.

# ಮುಂಗಾರು ಪೂರ್ವ ಮಳೆ ಹಿನ್ನಡೆಯಿಂದಾಗಿ ಒಳಹರಿವು ಕಡಿಮೆ ಜಲಾಶಯಗಳಲ್ಲಿ ಗಣನೀಯವಾಗಿ ನೀರಿನ ಮಟ್ಟ ಕುಸಿತ

**ಬೆಂಗಳೂರು, ಮೇ 31–** ಪೂರ್ವ ಮುಂಗಾರು ಮಳೆ ಸಾಕಷ್ಟು ಪ್ರಮಾಣದಲ್ಲಿ ಬೀಳದ ಹಿನ್ನೆಲೆಯಲ್ಲಿ ಕಾವೇರಿ ಕೊಳ್ಳದ ಜಲಾಶಯಗಳಿಗೆ ಒಳಹರಿವು ಆರಂಭವಾಗಿಲ್ಲ. ಹೀಗಾಗಿ ಗಣನೀಯ ಪ್ರಮಾಣದಲ್ಲಿ ಜಲಾಶಯದ ನೀರು ಕಡಿಮೆಯಾಗುತ್ತಿದೆ.

ಮುಂಗಾರು ಸಕಾಲದಲ್ಲಿ ಆರಂಭಗೊಂಡು ಜಲಾನಯನ ಪ್ರದೇಶದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾದರೆ ಜಲಾಶಗಳಿಗೆ ಸಾಕಷ್ಟು ನೀರು ಹರಿದು ಬರಲಿದೆ. ಇಲ್ಲದಿದ್ದರೆ, ಜಲಾಶಯಗಳೂ ನೀರಿನ ಕೊರತೆ ಎದುರಿಸಬೇಕಾಗಬಹುದು.

ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ಮೇ 30ರ ವೇಳೆಗೆ ಕಾವೇರಿ ಕೊಳ್ಳದ ನಾಲ್ಕು ಜಲಾಶಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ, ಶೇ.50 ರಷ್ಟು ಕಡಿಮೆ ನೀರಿನ ಸಂಗ್ರಹವಿದೆ. ಕಳೆದ ವರ್ಷ ಇದೇ ಅವsಯಲ್ಲಿ 67.06 ಟಿಎಂಸಿ ಅಡಿ ನೀರು ನಾಲ್ಕು ಜಲಾಶಯಗಳಲ್ಲಿತ್ತು. ಆದರೆ, ಈ ವರ್ಷ ಕೇವಲ 33.83 ಟಿಎಂಸಿ ಅಡಿಯಷ್ಟಿದೆ. ಅಂದರೆ ಶೇ. 30ರಷ್ಟು ಮಾತ್ರ ನೀರಿದೆ.

ಹಾರಂಗಿ ಜಲಾಶಯದಲ್ಲಿ 2.98 ಟಿಎಂಸಿ ನೀರಿದ್ದು, ಕಳೆದ ವರ್ಷ 5.11 ಟಿಎಂಸಿ ನೀರಿತ್ತು. ಹೇಮಾವತಿ ಜಲಾಶಯದಲ್ಲಿ 14.77



ಟಿಎಂಸಿ ನೀರಿದ್ದು, ಕಳೆದ ರ್ಷ 23.31 ಟಿಎಂಸಿ ನೀರು ಸಂಗ್ರಹವಾಗಿತ್ತು. ಕೆಆರ್‌ಎಸ್ ಜಲಾಶಯಲ್ಲಿ 11.36 ಟಿಎಂಸಿ ನೀರಿದ್ದು, 22.89 ಟಿಎಂಸಿ ನೀರು ಕಳೆದ ವರ್ಷ ಸಂಗ್ರಹವಾಗಿತ್ತು. ಕಬಿನಿ ಜಲಾಶಯದಲ್ಲಿ 4.73 ಟಿಎಂಸಿ ನೀರಿದ್ದು, ಕಳೆದ ವರ್ಷ 15.75 ಟಿಎಂಸಿ ನೀರು ಸಂಗ್ರಹವಾಗಿತ್ತು.

ನಾಲ್ಕು ಜಲಾಶಗಳ ಗರಿಷ್ಠ ಸಾಮರ್ಥ್ಯ 114.57 ಟಿಎಂಸಿ ಆಗಿದ್ದು, ಈಗ ಕೇವಲ 33.83 ಟಿಎಂಸಿಯಷ್ಟು ಮಾತ್ರ ಇದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಸಾಮರ್ಥ್ಯ 124.80 ಅಡಿಗಳಾಗಿದ್ದು, ಪ್ರಸ್ತುತ 81.28 ಅಡಿಗಳಷ್ಟಿದೆ. ಕಳೆದ ವರ್ಷ 100.10 ಅಡಿಗಳಷ್ಟು ನೀರು ಸಂಗ್ರಹವಾಗಿತ್ತು.

ಕಳೆದ ವರ್ಷ ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆ ಕಾವೇರಿ ಕೊಳ್ಳದ ಜಲಾನಯನ ಭಾಗದಲ್ಲಿ ಉತ್ತಮವಾಗಿತ್ತು. ಹೀಗಾಗಿ ಈ ನಾಲ್ಕು ಜಲಾಶಯಗಳು ಪೂರ್ಣ ಪ್ರಮಾಣದಲ್ಲಿ ತುಂಬಿದ್ದವು. ಹಿಂಗಾರು ಮಳೆ ಕೈಕೊಟ್ಟಿತ್ತು. ಜತೆಗೆ ಬೇಸಿಗೆ ಮಳೆಯೂ ವಾಡಿಕೆ ಪ್ರಮಾಣದಲ್ಲಿ ಬೀಳಲಿಲ್ಲ. ಮಾರ್ಚ್ ಮತ್ತು ಮೇ ನಡುವಿನ ಪೂರ್ವ ಮುಂಗಾರು ಮಳೆಯೂ ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲ. ಕೆಲವೆಡೆ ಮಳೆಯಾದರೂ ಜಲಾಶಯಗಳಿಗೆ ಒಳ ಹರಿವು ಬರುವಷ್ಟು ಮಳೆಯಾಗಿಲ್ಲ.

ಬೇಸಿಗೆಯ ಬಿಸಿಲು ಹೆಚ್ಚಾದ್ದರಿಂದ ಕೃಷಿ ಹಾಗೂ ಕುಡಿಯುವ ನೀರಿಗೆ ಸಾಕಷ್ಟು ಪ್ರಮಾಣದಲ್ಲಿ ನೀರಿನ ಬಳಕೆಯಾಗಿದೆ. ಅಲ್ಲದೆ, ನೀರು ಆವಿಯೂ ಆಗುತ್ತದೆ. ಒಳಹರಿವು ಇಲ್ಲದೆ, ಸಂಗ್ರಹಗೊಂಡಿದ್ದ ನೀರು ಬಳಸಿದಂತೆಲ್ಲಾ ಕಡಿಮೆಯಾಗುತ್ತಾ ಬಂದಿದೆ.ಮುಂಗಾರು ಮಳೆ ಆರಂಭವಾಗಿ ವಾಡಿಕೆ ಹಾಗೂ ವಾಡಿಕೆಗಿಂತ ಹೆಚ್ಚಾದರೆ, ಜಲಾಶಯಗಳು ಭರ್ತಿಯಾಗಲಿವೆ. ಆದರೆ, ವಾಡಿಕೆಗಿಂತ ಮಳೆ ಕಡಿಮೆಯಾಗಲಿದೆ ಎಂಬ ಮುನ್ಸೂಚನೆ ಇರುವುದರಿಂದ ಆತಂಕ ಪಡುವಂತಾಗಿದೆ.

# ಸಿಲಿಕಾನ್ ಸಿಟಿ ಬೆಂಗಳೂರಿನ ನಿವಾಸಿಗಳಿಗೆ ಪರಿಸರ ತಜ್ಞರಿಂದ ಗಂಭೀರ ಎಚ್ಚರಿಕೆ

**ಬೆಂಗಳೂರು, ಮೇ.31;** ಸಿಲಿಕಾನ್ ಸಿಟಿ ಬೆಂಗಳೂರಿನ ನಿವಾಸಿಗಳಿಗೆ ವಿಜ್ಞಾನಿಗಳು ಮತ್ತು ಪರಿಸರ ತಜ್ಞರು ಗಂಭೀರವಾದ ಎಚ್ಚರಿಕೆಯೊಂದನ್ನು ನೀಡಿದ್ದಾರೆ.


ನಗರದ ಪ್ರಮುಖ ಕೆರೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಸಾವಿರಾರು ಮೀನುಗಳು ನಿಗೂಢವಾಗಿ ಸತ್ತು ತೇಲುತ್ತಿದ್ದ ಘಟನೆಗಳು ವರದಿಯಾಗಿದ್ದವು. ಈ ಹಿನ್ನೆಲೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರು ಕೆರೆಗಳ ನೀರಿನ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಿದ್ದರು.ಈ ಪರೀಕ್ಷೆಯ ವರದಿ ಈಗ ಹೊರಬಿದ್ದಿದ್ದು, ಬೆಂಗಳೂರಿನ ಬಹುತೇಕ ಕೆರೆಗಳ ನೀರು ತೀವ್ರವಾಗಿ ಕಲುಷಿತಗೊಂಡಿದೆ. ಮಾತ್ರವಲ್ಲದೆ, ಅದರಲ್ಲಿ ಅಪಾಯಕಾರಿ ಹೆವಿ ಮೆಟಲ್ ಆದ 'ಯುರೇನಿಯಂ' ಅಂಶ ಇರುವುದು ದೃಢಪಟ್ಟಿದೆ. ಈ ನೀರನ್ನು ಕುಡಿಯುವುದರಿಂದ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ.

ಐಐಎಸ್‌ಸಿ ತಜ್ಞರು ನಗರದ ಜಕ್ಕೂರು, ಯಲಹಂಕ, ಲಕ್ಷ್ಮೀಪುರ, ರಾಮಸಂದ್ರ, ಹೆಸರಘಟ್ಟ, ಹಲಸೂರು, ಮಡಿವಾಳ, ವರ್ತೂರು ಮತ್ತು ಘಟ್ಟಹಳ್ಳಿ ಸೇರಿದಂತೆ ಹಲವು ಪ್ರಮುಖ ಕೆರೆಗಳ ನೀರನ್ನು ತಪಾಸಣೆ ನಡೆಸಿದ್ದರು. ಈ ಎಲ್ಲಾ ಕೆರೆಗಳ ನೀರು ಕಲುಷಿತಗೊಂಡಿದ್ದು, ಅತ್ಯಂತ ಅಪಾಯಕಾರಿ ಸ್ಥಿತಿ ತಲುಪಿದೆ. ಈ ಪೈಕಿ ವರ್ತೂರು ಕೆರೆಯ ನೀರು ಅತಿ ಹೆಚ್ಚು ಕಲುಷಿತಗೊಂಡಿದೆ ಎಂದು ವರದಿ ತಿಳಿಸಿದೆ.ನಗರದ ಕೈಗಾರಿಕಾ ತ್ಯಾಜ್ಯ ಹಾಗೂ ಗೃಹಬಳಕೆಯ ಕೊಳಚೆ ನೀರನ್ನು ಯಾವುದೇ ರೀತಿಯ ವೈಜ್ಞಾನಿಕ ಸಂಸ್ಕರಣೆಗೆ ಒಳಪಡಿಸದೆ ನೇರವಾಗಿ ಕೆರೆಗಳಿಗೆ ಹರಿಸುತ್ತಿರುವುದೇ ಈ ದುಸ್ಥಿತಿಗೆ ಮುಖ್ಯ ಕಾರಣ ಎಂದು ತಜ್ಞರು ಗುರುತಿಸಿದ್ದಾರೆ. ಸಂಸ್ಕರಿಸದ ನೀರಿನಲ್ಲಿರುವ ರಾಸಾಯನಿಕಗಳು ಕೆರೆಯ ಒಡಲು ಸೇರಿ ಇಡೀ ಪರಿಸರವನ್ನು ವಿಷವಾಗಿಸುತ್ತಿವೆ. ಜಲಚರಗಳು ಸಾವನ್ನಪ್ಪುತ್ತಿವೆ.ಈ ಆತಂಕ ಕೇವಲ ಕೆರೆಯ ನೀರಿಗೆ ಮಾತ್ರ ಸೀಮಿತವಾಗಿಲ್ಲ. ಕೆರೆಗಳಲ್ಲಿ ವಿಷಕಾರಿ ಯುರೇನಿಯಂ ಪತ್ತೆಯಾಗಿರುವುದರಿಂದ, ಆ ನೀರು ಭೂಮಿಯೊಳಗೆ ಇಂಗಿ ಕೆರೆಗಳ ಸುತ್ತಮುತ್ತಲಿರುವ ಬೋರ್‌ವೆಲ್‌ಗಳ ಅಂತರ್ಜಲವನ್ನೂ ಕಲುಷಿತಗೊಳಿಸುತ್ತಿದೆ.


ಇದರರ್ಥ, ಬೆಂಗಳೂರಿಗರು ದಿನನಿತ್ಯ ಬಳಸುತ್ತಿರುವ ಮತ್ತು ಕುಡಿಯುತ್ತಿರುವ ನೀರು ದಿನದಿಂದ ದಿನಕ್ಕೆ ವಿಷಪೂರಿತವಾಗುತ್ತಿದೆ. ಇಂತಹ ಕಲುಷಿತ ನೀರನ್ನು ನಿರಂತರವಾಗಿ ಬಳಸುವುದರಿಂದ ಅಥವಾ ಕುಡಿಯುವುದರಿಂದ



ನಾಗರಿಕರಲ್ಲಿ ತೀವ್ರ ಸ್ವರೂಪದ ದೀರ್ಘಕಾಲದ ಆರೋಗ್ಯ ಸಮಸ್ಯೆಗಳು ಎದುರಾಗಲಿವೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.




ಭಾರತೀಯ ಜನತಾ ಪಕ್ಷದ ಬೆಂಗಳೂರು ಕೇಂದ್ರ ಜಿಲ್ಲೆಯ ಅಧ್ಯಕ್ಷರು ಹಾಗೂ 2018ರ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿದ್ದ ಸಪ್ತಗಿರಿಗೌಡ ಅವರಿಗೆ ವಿಜಯನಗರ ಕ್ಷೇತ್ರದ ಬಿಜೆಪಿ ನಾಯಕ ಎಚ್. ರವೀಂದ್ರ ಜನ್ಮದಿನದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ರಾಮಾಂಜಿನಿ. ಮಂಡಲ ಪ್ರಧಾನ ಕಾರ್ಯದರ್ಶಿ ಆನಂದ್‌ಗೌಡ, ಯುವಮೋರ್ಚಾ ಅಧ್ಯಕ್ಷ ರವಿರಾಜ್ ಹಾಜರಿದ್ದರು.



ಗಾಂಧಿನಗರ ಕ್ಷೇತ್ರದ ಬಿಜೆಪಿ ಮುಖಂಡ ಸಪ್ತಗಿರಿಗೌಡ ಅವರಿಗೆ ವಿಜಯನಗರ ಬಿಜೆಪಿ ಮಂಡಲ ಅಧ್ಯಕ್ಷ ವಿ. ರಾಮಾಂಜಿನಿ. ಮಂಡಲ ಪ್ರಧಾನ ಕಾರ್ಯದರ್ಶಿ ಆನಂದ್‌ಗೌಡ ಎ.ಜಿ. ಜನ್ಮದಿನದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಓಬಿಸಿ ಮೋರ್ಚಾ ಅಧ್ಯಕ್ಷ ಎಲ್. ಸಿದ್ದರಾಜು, ಎಸ್ಸಿ ಮೋರ್ಚಾ ಅಧ್ಯಕ್ಷ ನಾರಾಯಣ, ಬಿಜೆಪಿ ಮುಖಂಡ ಮಂಜುನಾಥ್ ಇದ್ದರು.

## ಹೆಗ್ಗಡೆ ಅವರು ಜಿಲ್ಲೆಗೆ ಅನುದಾನ ನೀಡಿರುವುದು ಪ್ರಗತಿಗೆ ಉತ್ತೇಜನ; ವಿರೂಪಾಕ್ಷ ಗಾದಗಿ



ಬೀದರನ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಚೇರಿ ಸಭಾ ಭವನದಲ್ಲಿ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಜನಜಾಗೃತಿ ವೇದಿಕೆ ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳ ಸಮಗ್ರ ಚರ್ಚೆಯ ಸಭೆಯಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ವಿರೂಪಾಕ್ಷ ಪಾಲ್ಗೊಂಡರು.

**ಬೀದರ್, ಮೇ. 31:** ಜನಜಾಗೃತಿ ವೇದಿಕೆಯಲ್ಲಿ ನಾವೆಲ್ಲ ಒಂದೇ ಕುಟುಂಬದಂತೆ ಮಾಜಮುಖಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದು ಹೆಮ್ಮೆಯ ಸಂಗತಿ. ಸಮಾಜ ಚಿಂತಕ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು, ರಾಜ್ಯಸಭಾ ಯೋಜನೆಯ ವಿಶೇಷ ಬಜೆಟ್ ಅನ್ನು ಬೀದರ್ ಜಿಲ್ಲೆಗೆ ನೀಡಿರುವುದು ಜಿಲ್ಲೆಯ ಅಭಿವೃದ್ಧಿಗೆ ಹೊಸಶಕ್ತಿ ತುಂಬಿದ್ದು, ಗ್ರಾಮೀಣ ಭಾಗಗಳ ಪ್ರಗತಿಗೆ ಮತ್ತಷ್ಟು ಉತ್ತೇಜನ ನೀಡಲಿದೆ ಎಂದು ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ವಿರೂಪಾಕ್ಷ ಗಾದಗಿ ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಚೇರಿ ಸಭಾ ಭವನದಲ್ಲಿ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಜನಜಾಗೃತಿ ವೇದಿಕೆ ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳ ಸಮಗ್ರ ಚರ್ಚೆಯ ಸಭೆಯಲ್ಲಿ ಅವರು ಮಾತನಾಡಿದರು.

ಜನಜಾಗೃತಿ ವೇದಿಕೆಯ ಕಾರ್ಯದರ್ಶಿ ಮುರಳೀಧರ್ ಅವರು ಹಿಂದಿನ ಸಭೆಯ ವರದಿ ವಾಚಿಸಿ, 2025–26ನೇ ಸಾಲಿನಲ್ಲಿ ನಡೆಯುವ ನಡೆದ ವಿವಿಧ ಕಾರ್ಯಕ್ರಮಗಳು, ಜನಜಾಗೃತಿ ಚಟುವಟಿಕೆಗಳು ಹಾಗೂ ಸಾಮಾಜಿಕ ಬದಲಾವಣೆಗೆ ಕೈಗೊಂಡ ಕಾರ್ಯ ಕ್ರಮಗಳ ಕುರಿತು ವಿವರವಾದ ಮಾಹಿತಿ ನೀಡಿದರು.

2025–26ನೇ ಸಾಲಿನ ಬೀದರ್ ಜಿಲ್ಲಾ ವ್ಯಾಪ್ತಿಯ ತಾಲ್ಲೂಕಿನ ಕ್ರಿಯಾ ಯೋಜನೆಗಳ ಕುರಿತು ಎಲ್ಲಾ ತಾಲ್ಲೂಕಿನ ಯೋಜನಾಧಿಕಾರಿಗಳು ತಾಲ್ಲೂಕು ಮಟ್ಟದ ಜನಜಾಗೃತಿ ಕಾರ್ಯಕ್ರಮಗಳ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ಬಗ್ಗೆ ವರದಿ ವಾಚಿಸಿದರು.

ಪ್ರಾದೇಶಿಕ ಕಚೇರಿಯ ಜನಜಾಗೃತಿ ಯೋಜನಾಧಿಕಾರಿ ರಾಜೇಶ ಕೆ. ಅವರು 2026–27ನೇ ಸಾಲಿನ ಕ್ರಿಯಾ ವರದಿಯನ್ನು ಪ್ರಸ್ತುತಪಡಿಸಿದರು.

ಈ ವರ್ಷ ಜನಜಾಗೃತಿ ಕಾರ್ಯಕ್ರಮಕ್ಕೆ ಬೀದರ್ ಜಿಲ್ಲೆಗೆ ?5 ಲಕ್ಷ ಅನುದಾನ ಧರ್ಮಸ್ಥಳದ ಧರ್ಮಾಧಿಕಾರಿಗಳು ನೀಡಿರುವುದು ಸಂತಸದ ವಿಷಯವಾಗಿದೆ ಎಂದು ಸಭೆಯ ಎಲ್ಲಾ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

## ರಸಗೊಬ್ಬರ ಕೊರತೆ ನಿವಾರಣೆಗೆ ರೈತಸಂಘದ ಆಗ್ರಹ



ರಾಜ್ಯ ರೈತಸಂಘ ಮತ್ತು ಹಸಿರುಸೇನೆ ಕಾರ್ಯಕರ್ತರು ರಸಗೊಬ್ಬರ ಕೊರತೆ ನಿವಾರಿಸಬೇಕು ಮತ್ತು ಕಾರಂಜಾ ಯೋಜನೆಯ ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡುವಂತೆ ಅಗ್ರಹಿಸಿ ಬೀದರ್ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

**ಬೀದರ್, ಮೇ. 31:** ಜಿಲ್ಲೆಯಾದ್ಯಂತ ಉಂಟಾಗಿರುವ ರಸಗೊಬ್ಬರ ಕೊರತೆ ನಿವಾರಣೆ, ಎಫ್‌ಐಡಿ ವ್ಯವಸ್ಥೆ ರದ್ದುಪಡಿಸುವುದು ಹಾಗೂ ಕಾರಂಜಾ ಜಲಾಶಯದಲ್ಲಿ ಜಮೀನು ಭೂಮಿ ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಆಗ್ರಹಿಸಿದೆ.

ಈ ಕುರಿತು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ ಸಂಘದ ಪದಾಧಿಕಾರಿಗಳು, ಪ್ರಸ್ತುತ ಸರ್ಕಾರ ಎಫ್‌ಐಡಿ ವ್ಯವಸ್ಥೆಯಡಿ ಕೇವಲ ಒಂದು ಚೀಲ ರಸಗೊಬ್ಬರ ಮಾತ್ರ ವಿತರಿಸಲು ಆದೇಶಿಸಿರುವುದು ರೈತರಿಗೆ ತೀವ್ರ ಅನಾನುಕೂಲ ಉಂಟುಮಾಡಿದೆ. ಬೆಳೆಗಳಿಗೆ ಅಗತ್ಯವಿರುವಂತೆ ಎರಡೂವರೆಯಿಂದ ಮೂರು ಕ್ವಿಂಟಲ್ ರಸಗೊಬ್ಬರ ವಿತರಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಜಿಲ್ಲೆಯಲ್ಲಿ ಈಗಾಗಲೇ ಮಳೆಯ ಆರಂಭದೊಂದಿಗೆ ರಸಗೊಬ್ಬರದ ಕೊರತೆ ಎದ್ದು ಕಾಣುತ್ತಿದೆ. ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತಕ್ಷಣವೇ ರಸಗೊಬ್ಬರ ಮಾರಾಟಗಾರರೊಂದಿಗೆ ಸಭೆ ನಡೆಸಿ, ರೈತರಿಗೆ ಬೇಕಾದಷ್ಟು ಗೊಬ್ಬರ ವಿತರಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.


ಕಾರಂಜಾ ಜಲಾಶಯ ನಿರ್ಮಾಣದಿಂದ ಜಮೀನು ಕಳೆದುಕೊಂಡ ರೈತರು ನಿರಂತರ ಹೋರಾಟ ನಡೆಸುತ್ತಿದ್ದರೂ ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ. ರೈತರ ಸಮಸ್ಯೆ ಶೀಘ್ರದಲ್ಲೇ ಪರಿಹರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ನೀರು, ನೆಲ, ಜನರ ವಿಚಾರದಲ್ಲಿ ರಾಜಕಾರಣ ಮಾಡುವುದಿಲ್ಲ

# ಹೊಸ ಮುಖ್ಯಮಂತ್ರಿ ಬರಪೀಡಿತ ಜಿಲ್ಲೆಗಳ ನೀರಿನ ದಾಹ ನೀಗಿಸಲಿ: ಸಂಸದ ಬೊಮ್ಮಾಯಿ ಆಶಯ

**ಚಿಕ್ಕಬಳ್ಳಾಪುರ, ಮೇ.31–** ಚಿಕ್ಕಬಳ್ಳಾಪುರ ಮತ್ತು ಕೋಲಾರ ಬರ ಪೀಡಿತ ಜಿಲ್ಲೆಗಳಿಗೆ ಹೊಸ ಮುಖ್ಯಮಂತ್ರಿಗಳು ನೀರು ತಂದು ನೀರಿನ ದಾಹ ನೀಗಿಸಬೇಕು. ನಾವು ಎಲ್ಲ ರೀತಿಯ ಸಹಕಾರ ನೀಡುತ್ತೇವೆ. ನೀರು, ನೆಲ, ಜನರ ವಿಚಾರದಲ್ಲಿ ನಾವು ರಾಜಕಾರಣ ಮಾಡುವುದಿಲ್ಲ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಮಣ್ಣು ಬಹಳ ಶ್ರೇಷ್ಠವಾಗಿರುವಂಥದ್ದು ಇಲ್ಲಿಯ ರೈತರ ಬೆವರಿನಹನಿ ಭೂಮಿಗೆ ಬಿದ್ದರೆ ಭೂಮಿ ತಾಯಿ ಒಳ್ಳೆಯ ಬೆಳೆ ಕೊಡುತ್ತಾಳೆ ಒಂದು ಕಾಲದಲ್ಲಿ ಇಡೀ ಬೆಂಗಳೂರಿಗೆ ತರಕಾರಿ, ಹಣ್ಣು, ರೇಷ್ಮೆ, ಕೊಡುವ ಕೆಲಸ ಈ ಜಿಲ್ಲೆಗಳು ಮಾಡುತ್ತಿದ್ದವು. ಇಲ್ಲಿ ಐದು ನದಿಗಳಿದ್ದರೂ ಬತ್ತಿ ಹೋಗಿವೆ. ಪಶ್ಚಿಮ ಘಟ್ಟದಿಂದ ಹರಿದು ಬರುವಜೀವಸೆಲೆ ನಿಂತು ಹೋಗಿದೆ. ಪಶ್ಚಿಮಘಟ್ಟದಲ್ಲಿ ನೀರಿನ ಸೆಲೆಯನ್ನು ಉಳಿಸುವ ಪಯತ್ನ ಮಾಡದ ಕಾರಣ ಇದೆಲ್ಲ ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

**ಎತ್ತಿನಹೊಳೆ ಯೋಜನೆ:** ನಾನು ನೀರಾವರಿ ಸಚಿವನಿದ್ದಾಗ ಕೋಲಾರದ ಪತಕರ್ತರು ಇಲ್ಲಿ ಫ್ಲೋರೈಡ್ ಯುಕ್ತ ನೀರಿದೆ ಅದನ್ನು ಬಂದು ನೋಡಿ ಎಂದು ಹೇಳಿದರು. ನಾನು ಬಂದು ನೋಡಿ ತಾಂತ್ರಿಕ ತಜ್ಞರೊಡನೆ ಮಾತನಾಡಿದೆ. ಅಂತಾರಾಜ್ಯ ವಿವಾದ ಇಲ್ಲದಂತೆ ಎತ್ತಿನ ಹೊಳೆ ಯೋಜನೆಯನ್ನು ಮಾಡಿದೆ. ಅದಕ್ಕೂ ಮೊದಲು ನೇತ್ರಾವತಿ ತಿರುವು ಯೋಜನೆ ಪ್ರಸ್ತಾಪ ಇತ್ತು. ಅದರಿಂದ ಸುಮಾರು 11 ಸಾವಿರ ಹೆಕ್ಟೇರ್ ಅರಣ್ಯ ನಾಶವಾಗುತ್ತಿತ್ತು. ಹೀಗಾಗಿ ಅದು ಸಾಧ್ಯವಿಲ್ಲವಾಯಿತು. ನನ್ನ ಉದ್ದೇಶ ಪೈಪ್ ಲೈನ್ ಮೂಲಕ ನೀರು ತಂದಿದ್ದರೆ ಹತ್ತು ಟಿಎಂಸಿ ನೀರು ಎರಡೂ ಜಿಲ್ಲೆಗೆ ಕೊಡಬಹುದಿತ್ತು. ಯಾರಿಗೆ ತಾಂತ್ರಿಕ ಜ್ಞಾನ ಇಲ್ಲವೋ ಅವರು ಅಲ್ಲಿ ನೀರೇ ಇಲ್ಲ ಎಂದು ಅಭಿಪ್ರಾಯ ಸೃಷ್ಟಿಸಿದರು. ಅದಕ್ಕಾಗಿ ಎರಡು ವರ್ಷ ಹಾಳಾ ಯಿತು. ಆ ನಂತರ ಕಾಲುವೆ ಮೂಲಕ. ನೀರು ತರುವ ಪ್ರಯತ್ನ ನಡೆದಿದೆ. ಈಗ ಹೊಸ ಮುಖ್ಯಮಂತ್ರಿ ಬಂದಿದ್ದಾರೆ. ಅವರು ನೀರಾವರಿ ಸಚಿವರಾಗಿ ಕೆಲಸ ಮಾಡಿದ್ದಾರೆ. ನಾವು ಎತ್ತಿನಹೊಳೆ ಲಿಫ್ಟ್ ಮೂಲಕ ನೀರು ತರುವ ಕಾರ್ಯ ಮಾಡಿದ್ದೇವು ಅವರು ಅದಕ್ಕೆ ಬಟನ್ ಹೊಡ ಯುವ ಮೂಲಕ ಆರಂಭಿಸಿದ್ದಾರೆ ಎಂದರು.



**ಜಲ ಕಾಯ್ದೆ ಬದಲಾಗಬೇಕು:** ಬರ ಪೀಡಿತ ಜಿಲ್ಲೆಗಳಿಗೆ ನೀರು ತಂದು ನೀರಿನ ದಾಹ ನೀಗಿಸಬೇಕು. ನಾವು ಎಲ್ಲ ರೀತಿಯ ಸಹಕಾರ ನೀಡುತ್ತೇವೆ. ನೀರಿನ ವಿಚಾರ, ಜನರ ವಿಚಾರದಲ್ಲಿ ನೆಲದ ವಿಚಾರದಲ್ಲಿ ನಾವು ರಾಜಕಾರಣ ಮಾಡುವುದಿಲ್ಲ. ಒಂದು ಸಮಯ ಕಳೆದರೆ ಅದರ ದೂರಗಾಮಿಯ ಪರಿಣಾಮವಾಗುತ್ತದೆ. ಒಂದು ಸಮಯ ಕಳೆದರು ಅದರ ವೆಚ್ಚ ಒಂದು ಸಾವಿರ ಕೋಟಿ ಇದ್ದದ್ದು ಹತ್ತು ಪಟ್ಟು ಹೆಚ್ಚಾಗುತ್ತದೆ. ಒಂದು ಅಂತಾರಾಜ್ಯ ಜಲ ವಿವಾದ ಐವತ್ತು ವರ್ಷವಾದರೂ ಮುಗಿದಿಲ್ಲ. ಅದಕ್ಕೆ ನಾನು ಸಂಸತ್ತಿನಲ್ಲಿ ಅಂತಾರಾಜ್ಯ ಜಲವಿವಾದ ಕಾಯಿದೆ ಸಂಪೂರ್ಣ ಬದಲಾವಣೆ ಮಾಡಬೇಕು. ನದಿ ಅಭಿವೃದ್ಧಿ ನಿಟ್ಟಿನಲ್ಲಿ ಬದಲಾವಣೆ ಮಾಡಬೇಕು ಎಂದು ಸಂಸತ್ತಿನಲ್ಲಿ ಹೇಳಿದ್ದೇನೆ. ಪ್ರಧಾನ ಮಂತಿಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ. ನ್ಯಾಯಮಂಡಳಿಗಳಲ್ಲಿ ವರ್ಷಾನುಗಟ್ಟಲೇ ಬಿದ್ದಿರುವ ಪ್ರಕರಣಗಳನು ಕಾನೂನು ಬದಲಾವಣೆ ಮಾಡಲು ಉತ್ಸುಕರಾಗಿದ್ದಾರೆ. ಅದು ಕಾನೂನು ಬದಲಾದರೆ ಬಹಳಷ್ಟು ಬದಲಾವಣೆಯಾಗುತ್ತದೆ ಎಂದರು.

**ಪತ್ರಕರ್ತರದ್ದು ಜವಾಬ್ದಾರಿ:** ಇದು ನಮ್ಮ ಬದುಕಿನ ಪಶ್ನೆ. ಪತ್ರಕರ್ತರು ಇದಕ್ಕೆ ಬಹಳಷ್ಟು ಬೆಂಬಲ ಕೊಟ್ಟಿದ್ದರು. ಮುಂದೆಯೂ ಕೊಡುತ್ತಾರೆ ಎನ್ನುವ ವಿಶ್ವಾಸ ಇದೆ. ಚಿಕ್ಕಬಳ್ಳಾಪುರ ಪತ್ರಕರ್ತರು ಇದರ ಬಗ್ಗೆ ಹೆಚ್ಚಿನ ಬೆಂಬಲ ಕೊಡಬೇಕು. ಇಲ್ಲಿ ದೋಸೆಗಿಂತ ಪ್ರತಿಯೊಬ್ಬರ ಮನೆಗೆ ಅನ್ನ ಕೊಡುವ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳಬೇಕು. ಪತಕರ್ತರೊಂದಿಗಿನ ನಮ್ಮ ಸಂಬಂಧ ಯಾವಾಗಲೂ ಉತ್ತಮವಾಗಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಸ್ಥಳೀಯ ಪತ್ರಿಕೆಗಳಿಗೆ 4 ಪುಟಗಳ ಜಾಹೀರಾತು ನೀಡಲು ಆದೇಶ ಮಾಡಿದೆ.

ಅದೇ ರೀತಿ ಹಿಂದುಳಿದ ವರ್ಗಗಳ ಪತ್ರಿಕೆಗಳಿಗೆ ಜಾಹೀರಾತು ನೀಡಲು ಆದೇಶ ಮಾಡಿದೆ. ಎಲ್ಲ ಸಮುದಾಯಗಳ ಧ್ವನಿಗಳು ಬೆಳಕಿಗೆ ಬರಬೇಕು. ಕೇವಲ ಶಹರದ ಸುದ್ದಿಯನ್ನು ಮಾಡದೇ ಎಲ್ಲ ವರ್ಗದ ಧ್ವನಿಯಾಗಿ ಕೆಲಸ ಮಾಡಬೇಕು. ಉತ್ತಮ ಕೆಲಸ ಮಾಡುತ್ತಿದ್ದೀರಿ. ಮಕ್ಕಳ ಪ್ರತಿಭೆಗಳನ್ನು ಗುರುತಿಸಿರುವುದು ಬಹಳ ಸಂತೋಷವಾಗಿದೆ. ಸಂಸದ ಡಾ. ಸುಧಾಕರ್ ಅವರು ಬಂದ ಮೇಲೆ ಚಿಕ್ಕಬಳ್ಳಾಪುರ ಜಿಲ್ಲೆಯ ಅಭಿವೃದ್ಧಿಯಾಗಿದೆ. ಮೆಡಿಕಲ್ ಕಾಲೇಜು, ಕನ್ನಡಭವನ ತರಲು ಅವರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದರು.

## ಗಡಿ ಮರಾಠಿಗರ ಹಿತರಕ್ಷಣೆಗೆ ನಾವು ಬದ್ಧ: ಸಚಿವ ಜಯಂತ್ ಸಾಮಂತ

**ಬೆಳಗಾವಿ, ಮೇ.31–** 'ಸುಪ್ರೀಂ ಕೋರ್ಟ್‌ನಲ್ಲಿ ಇರುವ ಕರ್ನಾಟಕ, ಮಹಾರಾಷ್ಟ್ರ ಗಡಿ ವಿವಾದ ಪ್ರಕರಣದಲ್ಲಿ ಗೆಲ್ಲಲು ಮಹಾರಾಷ್ಟ್ರ ಸರ್ಕಾರ ಹೆಚ್ಚಿನ ಕಾಳಜಿ ವಹಿಸಬೇಕು. ಜೂನ್ 29ರೊಳಗೆ ಅಲ್ಲಿನ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಉಪಮುಖ್ಯ ಮಂತ್ರಿ ಏಕನಾಥ ಶಿಂದೆ ನಮ್ಮೊಂದಿಗೆ ಸಭೆ ಮಾಡಬೇಕು' ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ(ಎಂಇಎಸ್) ಮುಖಂಡರು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಾಮಂತ, 'ಗಡಿ ವಿವಾದ ಪ್ರಕರಣ ಈಗ ಸುಪ್ರೀಂಕೋರ್ಟ್‌ನಲ್ಲಿ ಇದೆ. ಒಂದು ವ್ಯಾಜ್ಯ ನ್ಯಾಯಾಧೀಶರ ಮುಂದೆ ಇರುವಾಗ ಹೀಗೆ ಮಾತನಾಡುವುದು ಸರಿಯಲ್ಲ. ಮಹಾರಾಷ್ಟ್ರದಲ್ಲಿ ಜೂನ್ 25ರವರೆಗೆ ಪರಿಷತ್ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿದೆ. ಹಾಗಾಗಿ ಸದ್ಯಕ್ಕೆ ಸಿ.ಎಂ, ಡಿಸಿಎಂ ಯಾವುದೇ ಸಭೆ ಮಾಡಲಾಗದು. ಆದರೆ. ನಿಮ್ಮ ಬೇಡಿಕೆಯನ್ನು ನಾನು ಅವರ ಗಮನಕ್ಕೆ ತರುತ್ತೇನೆ' ಎಂದು ತಿಳಿಸಿದರು.

'ನಾನು ಕರ್ನಾಟಕ, ಮಹಾರಾಷ್ಟ್ರ ಗಡಿ ವಿವಾದ ಪ್ರಕರಣದ ಬಗ್ಗೆ ಮಾತನಾಡುವುದಿಲ್ಲ. ಆದರೆ, ಗಡಿ ಮರಾಠಿಗರ ಹಿತರಕ್ಷಣೆಗೆ ನಾವು ಬದ್ಧವಾಗಿದ್ದೇವೆ' ಎಂದರು.ತಮ್ಮ ಬೇಡಿಕೆಗೆ ಹೀಗೆ ಜಾರಿಕೊಳ್ಳುವ ರೀತಿಯಲ್ಲಿ ಸಚಿವರು ಉತ್ತರ ನೀಡಿದ್ದರಿಂದ ಎಂಇಎಸ್ ಮುಖಂಡ ರಿಗೆ ನಿರಾಸೆಯಾಯಿತು.

'ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಆಗ್ರಹಿಸಿ ಸಹಿ ಸಂಗ್ರಹ ಅಭಿಯಾನ ಮಾಡಲಾಗುತ್ತಿದೆ. ಗಡಿಯಲ್ಲಿ ಮರಾಠಿ ಭಾಷಿಕರ ಹಿತರಕ್ಷಣೆಗೆ ನಾವು ಬದ್ಧರಿದ್ದೇವೆ. ಈ ಅಭಿಯಾನದಲ್ಲಿ ಸಹಿ ಮಾಡುವಂತೆ ವಿನಂತಿಸಿದರೆ, ನಾನೂ ಸಹಿ ಮಾಡುವೆ' ಎಂದು ಜಯಂತ ಸಾಮಂತ ಸುದ್ದಿಗಾರ ರಿಗೆ ಪ್ರತಿಕ್ರಿಯಿಸಿದರು.

'ಈ ಅಭಿಯಾನದಲ್ಲಿ ಸಹಿ ಸಂಗ್ರಹಿಸಿದ ವರದಿಯನ್ನು ಸುಪ್ರೀಂ ಕೋರ್ಟ್‌ಗೆ ಕಳುಹಿಸಬೇಕೋ ಅಥವಾ ಬೇಡವೋ ಎಂಬುದನ್ನು ಈಗಲೇ ನಿರ್ಣಯಿಸಲಾಗದು. ನಾನು ಮರಾಠಿ ಭಾಷಿಕರ ಪರ ಸಹಿ ಮಾಡಬಹುದೇ ಹೊರತು, ಗಡಿ ವಿವಾದದ ಬಗ್ಗೆ ಹೆಚ್ಚು ಮಾತನಾಡಲಾರೆ. ಒಂದು ವಿಷಯ ನ್ಯಾಯಾಧೀಶರ ಮುಂದೆ ಇದ್ದಾಗ ಮಾತನಾಡುವುದು ಸೂಕ್ತವಲ್ಲ. ಈ ವಿಷಯವನ್ನೇ ಎಂಇಎಸ್ ಮುಖಂಡರಿಗೂ ಹೇಳಿದ್ದೇನೆ' ಎಂದು ತಿಳಿಸಿದರು.



ಅಂತೆಯೇ ಕರ್ನಾಟಕ ಸರ್ಕಾರವೂ ಮರಾಠಿ ಭಾಷಿಕರಿಗೆ ತೊಂದರೆ ಕೊಡಬಾರದು' ಎಂದು ಹೇಳಿದರು.

'ಕರ್ನಾಟಕದಲ್ಲಿ ಇರುವ ಶಿವಾಜಿ ಮಹಾರಾಜರ ತಂದೆ ಶಹಾಜಿ ಮಹಾರಾಜರ ಸಮಾಧಿ ಅಭಿವೃದ್ಧಿಗೆ ಪ್ರಮೋದ ಮಹಾಜನ ಅವರ ಸಹೋದರ ಪ್ರಕಾಶ ಮಹಾಜನ ಅಭಿಯಾನ ನಡೆಸುತ್ತಿದ್ದಾರೆ. ಇದಕ್ಕೆ ನನ್ನ ಬೆಂಬಲವೂ ಇದೆ. ಮುಂದಿನ ತಿಂಗಳು ಸಮಾಧಿ ಸ್ಥಳಕ್ಕೆ ಹೋಗುತ್ತೇನೆ. ಮಹಾರಾಷ್ಟ್ರದ ಮರಾಠಿ ಭಾಷಾ ಸಚಿವಾಲಯದಿಂದ ಇದನ್ನು ಅಭಿವೃದ್ಧಿ ಪಡಿಸುವ ವಿಚಾರವಿದೆ. ಮಹಾರಾಷ್ಟ್ರದ ಪ್ರತಿ ವ್ಯಕ್ತಿ ಶ್ರಮದಿಂದ ಈ ಸಮಾಧಿ ಸ್ಥಳ ಪುನರ್ ನಿರ್ಮಾಣವಾಗಬೇಕಿದೆ. ಈ ಸಂಬಂಧ ಕರ್ನಾಟಕದ ಮುಂದಿನ ಸಿ.ಎಂ ಗಮನಕ್ಕೂ ತರುತ್ತೇನೆ' ಎಂದರು.

## ನೇಣು ಬಿಗಿದು ಉಪತಹಶೀಲ್ದಾರ್ ಆತ್ಮಹತ್ಯೆ

**ಹಾಸನ, ಮೇ.31–** ನೇಣು ಬಿಗಿದುಕೊಂಡು ಉಪತಹಶೀಲ್ದಾರ್ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾಸನ ನಗರದ ರಸ್ತೆಯಲ್ಲಿರುವ ಲಾಡ್ಜ್‌ನಲ್ಲಿ ನಡೆದಿದೆ.ತಿಮ್ಮಯ್ಯ (52) ಆತ್ಮಹತ್ಯೆಗೆ ಶರಣಾದ ಉಪ ತಹಶೀಲ್ದಾರ್. ಮೈಸೂರು ಜಿಲ್ಲೆ, ಸಾಲಿಗ್ರಾಮದಲ್ಲಿ ಉಪತಹಶೀಲ್ದಾರ್ ಆಗಿದ್ದ ತಿಮ್ಮಯ್ಯ,ಮೂರು ವರ್ಷಗಳ ಹಿಂದೆ ಹಾಸನದಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಮೇ 30 ಲಾಡ್ಜ್‌ನಲ್ಲಿ 4 ಪುಟದ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮೂಲತಃ ಕೊಡಗು ಜಿಲ್ಲೆಯವರಾದ ತಿಮ್ಮಯ್ಯ ಹಾಸನ ನಗರದ ಚನ್ನಪಟ್ಟಣದ ದ್ಯಾವಮ್ಮ ಬಡಾವಣೆಯಲ್ಲಿ ಕುಟುಂಬಸ್ಥರೊಂದಿಗೆ ವಾಸವಿದ್ದರು.



ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಸತೀಶ್ ಜಾರಕಿಹೊಳಿ ವಿರುದ್ಧ ನಕಲಿ ಖಾತೆ ಸೃಷ್ಟಿಸಿ ಅವಹೇಳನಕಾರಿ ಸುದ್ದಿ ಪ್ರಕಟ: ದೂರು ದಾಖಲು

**ಬೆಳಗಾವಿ, ಮೇ.21–** ರಾಜ್ಯ ರಾಜಕಾರಣದ ನಾಯಕತ್ವ ಬದಲಾವಣೆಯ ಸೂಕ್ಷ್ಮ ಸನ್ನಿವೇಶದ ನಡುವೆಯೇ, ಸಚಿವ ಸತೀಶ್ ಜಾರಕಿಹೊಳಿ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಕಿಡಿಗೇಡಿಗಳು ನಕಲಿ ಖಾತೆಗಳನ್ನು ಸೃಷ್ಟಿಸಿ ಅವಹೇಳನಕಾರಿ ಪ್ರಕಟಿಸಿರುವ ಗಂಭೀರ ಘಟನೆ ಬೆಳಕಿಗೆ ಬಂದಿದೆ.

ಸಮಾಜದಲ್ಲಿ ಶಾಂತಿ ಕದಡುವ ಉದ್ದೇಶದಿಂದ ನಡೆದಿರುವ ಈ ಕೃತ್ಯದ ಕುರಿತು ವಾಲ್ಮೀಕಿ ಸಮಾಜದ ಮುಖಂಡ ರಾಜಶೇಖರ ತಳವಾರ ಅವರು ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಅಧಿಕೃತ ದೂರು ದಾಖಲಿಸಿದ್ದಾರೆ.

ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್‌ನಲ್ಲಿ ಕರುನಾಡ ಕುರುಬಗೌಡ್ರು ಹಾಗೂ ಬಂಡಾಯ ಧ್ವನಿ ಎಂಬ ಎರಡು ನಕಲಿ ಖಾತಗಳನ್ನು ತೆರೆದು ಸತೀಶ್ ಜಾರಕಿಹೊಳಿ ಅವರ ವಿರುದ್ಧ ಸುಳ್ಳು ಸುದ್ದಿಗಳನ್ನು ಬಿತ್ತರಿಸಲಾಗಿದೆ. ಇತ್ತೀಚಿಗಷ್ಟೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರ ವಿರುದ್ಧ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರು ಒಟ್ಟು 37 ಶಾಸಕರಿಂದ ರಹಸ್ಯವಾಗಿ ಸಹಿ ಸಂಗ್ರಹ ಮಾಡಿದ್ದಾರೆ ಎಂಬ ಗಂಭೀರ ಹಾಗೂ ಆಧಾರರಹಿತ ಆರೋಪವನ್ನು ಈ ಪೋಸ್ಟ್‌ಗಳಲ್ಲಿ ಮಾಡಲಾಗಿತ್ತು. ಆದರೆ, ಈ ಸುಳ್ಳು ಆರೋಪವನ್ನು ಸ್ವತಃ ಸತೀಶ್ ಜಾರಕಿಹೊಳಿ ಅವರೇ ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ರಾಜಕೀಯವಾಗಿ ಸತೀಶ್ ಜಾರಕಿಹೊಳಿ ಅವರ ವಿರುದ್ಧ ಇಲ್ಲಸಲ್ಲದ ಅಪವಾದಗಳನ್ನು ಹೊರಿಸಿ, ಸಾರ್ವಜನಿಕವಾಗಿ ಅವರ



ಹೆಸರನ್ನು ಹಾಳು ಮಾಡುವ ವ್ಯವಸ್ಥಿತ ಸಂಚಿನ ಭಾಗವಾಗಿ ಈ ನಕಲಿ ಫೇಸ್‌ಬುಕ್ ಖಾತೆಗಳಲ್ಲಿ ಪೋಸ್ಟ್‌ಗಳನ್ನು ಹಾಕಲಾಗಿದೆ ಎಂದು ದೂರಿನಲ್ಲಿ ಪ್ರಮುಖವಾಗಿ ವಿವರಿಸಲಾಗಿದೆ. ಇದರ ಹಿಂದೆ ಸಮಾಜದಲ್ಲಿ ಜಾತೀಯ ವಿಷಬೀಜ ಬಿತ್ತುವ ದೊಡ್ಡ ಹಸ್ತ ಕೆಲಸ ಮಾಡಿದೆ ಎಂದು ದೂರುದಾರರು ಆರೋಪಿಸಿದ್ದಾರೆ.

ಮುಖ್ಯವಾಗಿ ಕುರುಬ ಜನಾಂಗ ಮತ್ತು ವಾಲ್ಮೀಕಿ ಜನಾಂಗದ ನಡುವೆ ವೈಷಮ್ಯ ಹಾಗೂ ಭಿನ್ನಾಭಿಪ್ರಾಯವನ್ನು ಉಂಟುಮಾಡಿ, ಆ ಮೂಲಕ ಸಾರ್ವಜನಿಕರಲ್ಲಿ ಶಾಂತಿಭಂಗ ತರುವುದು ಮತ್ತು ದೊಡ್ಡ ಮಟ್ಟದ ದೊಂಬಿ ಎಬ್ಬಿಸುವ ದುರುದ್ದೇಶ ದಿಂದಲೇ ಈ ಸುಳ್ಳು ಸುದ್ದಿಗಳನ್ನು ಹರಡಿಸಲಾಗುತ್ತಿದೆ. ಆದ್ದರಿಂದ, ಸಮಾಜದ ಶಾಂತಿ ಕದಡಲು ಯತ್ನಿಸುತ್ತಿರುವ ಆ ಕಿಡಿಗೇಡಿಗಳನ್ನು ಹಾಗೂ ಈ ನಕಲಿ ಫೇಸ್‌ಬುಕ್ ಪುಟಗಳನ್ನು ನಿರ್ವಹಿಸುತ್ತಿರುವವರನ್ನು ಶೀಘ್ರವಾಗಿ ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ರಾಜಶೇಖರ ತಳವಾರ ಅವರು ಸೈಬರ್ ಕ್ರೈಂ ಪೊಲೀಸರನ್ನು ಒತ್ತಾಯಿಸಿದ್ದಾರೆ. ದೂರು ಸ್ವೀಕರಿಸಿರುವ ಸೈಬರ್ ಪೊಲೀಸರು ತನಿಖೆ ಆರಂಭಿಸಿದ್ದಾರೆ.

## ಕರ್ನಾಟಕದಲ್ಲಿ ಎಸ್‌ಐಆರ್ ನಡೆಸಲು ವಿರೋಧ, ಪ್ರತಿಭಟನೆ

**ಕಲಬುರಗಿ, ಮೇ. 31:** ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್ ಎಂಬುದು ಸಂವಿಧಾನ ವಿರೋಧಿ ಮತ್ತು ಪ್ರಜಾತಂತ್ರಕ್ಕೆ ಮಾರಕವಾದ, ಪ್ರತಿಯೊಬ್ಬ ಪ್ರಜೆಯನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸುವ, ದುರುದೇಶಪೂರಿತ ಪ್ರಕ್ರಿಯೆಯಾಗಿದೆ. ಇದು ಈ ದೇಶದಲ್ಲಿ ಮತದಾನದ ಹಕ್ಕಿಲ್ಲದ ಎರಡನೇ ದರ್ಜೆಯ ಪ್ರಜೆಗಳನ್ನು ಸೃಷ್ಟಿಸುವ ಪ್ರಕ್ರಿಯೆಯನ್ನು ಚುನಾವಣಾ ಆಯೋಗವೇ ಪ್ರಾರಂಭಿಸಿದೆ. ಕೇಂದ್ರದಲ್ಲಿ ಆಡಳಿತರೂಢ ಬಿಜೆಪಿಯ ರಾಜಕೀಯ ಷಡ್ಯಂತ್ರವೂ ಆಗಿದೆ ಎಂದು ಪ್ರಗತಿಪರ ಸಂಘಟನೆಗಳು ರಚಿಸಿರುವ ಎಸ್‌ಐಆರ್ ವಿರೋಧಿ ಸಂಘಟನೆ ಆರೋಪಿಸಿತು.

ನಗರದಲ್ಲಿಂದು ವಿವಿಧ ಪ್ರಗತಿಪರ ಸಂಘಟನೆಗಳು ಮತ್ತು ಜಾತ್ಯತೀತ ಪಕ್ಷಗಳೊಂದಿಗೆ ರಚಿತಗೊಂಡಿರುವ ಎಸ್‌ಐಆರ್ ವಿರೋಧಿ ಆಂದೋಲನವು ನಗರದ ಜಿಲ್ಲಾಧಿಕಾರಿಗಳ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸುವ ಮೂಲಕ, ಎಸ್‌ಐಆರ್ ಪಕ್ರಿಯ ವಿಶೇಷವಾಗಿ ಮಹಿಳೆಯರನ್ನು, ವಲಸೆ ಕಾರ್ಮಿಕರನ್ನು, ಅಲೆಮಾರಿ ಆದಿವಾಸಿ–ದಮನಿತ ಸಮುದಾಯಗಳನ್ನು ಹಾಗೂ ಅಲ್ಪಸಂಖ್ಯಾತರನ್ನು ಬೃಹತ್ ಸಂಖ್ಯೆಯಲ್ಲಿ ಪ್ರಜಾತಾಂತ್ರಿಕ ಪಕ್ರಿಯೆಯಿಂದ ಹೊರದಬ್ಬುತ್ತಿದೆ. ಎಸ್‌ಐಆರ್ ಪ್ರಕ್ರಿಯೆ ಹೊರಹಾಕಿದವರಿಗೆ ಯಾವ ಸರ್ಕಾರಿ ಸೌಲಭ್ಯಗಳೂ ದೊರಕುವುದಿಲ್ಲ ಎಂದು ಬಿಜೆಪಿ ಆಡಳಿತಾರೂಢ ರಾಜ್ಯಗಳ ಮುಖ್ಯಮಂತ್ರಿಗಳು ಘೋಷಿಸುತ್ತಿದ್ದಾರೆ ಎಂದು ಸಮಿತಿ ಆರೋಪಿಸಿತು.

ಎಸ್‌ಐಆರ್ ನಡೆದ ರಾಜ್ಯಗಳಲ್ಲಿ ಇದುವರೆಗೆ 6.5 ಕೋಟಿ ಮತದಾರರನ್ನು ಮತ ಪಟ್ಟಿಯಿಂದ ತೆಗೆಯಲಾಗಿದೆ. ಇದರಲ್ಲಿ ಕನಿಷ್ಠ ಅರ್ಹ ಮತದಾರರು ಇದ್ದಾರೆ ಎಂಬುದು ಅನೇಕ ಅಧ್ಯಯನಗಳು ನಿರೂಪಿಸಿವೆ. ಪಶ್ಚಿಮ ಬಂಗಾಳದಲ್ಲಂತೂ ದಾಖಲೆಗಳಿದ್ದರೂ 27 ಲಕ್ಷ ಜನರಿಗೆ ಮತದಾನದ ಹಕ್ಕನ್ನು ನಿರಾಕರಿಸಿದ್ದು ಅಕ್ಷಮ್ಯ ಅಪರಾಧ. ಅಲ್ಲಿ ಬಳಸಲಾದ 'ಲಾಜಿಕಲ್ ಡಿಸ್ಕಿಪನ್ಸಿ' ಸಾಫ್ಟ್‌ವೇರ್ ಸೃಷ್ಟಿಸಿದ ಅವಾಂತರ ಹಾಗೂ ಅದರ ಹಿಂದಿನ ರಾಜಕೀಯ ದುರುದ್ದೇಶ ನ್ಯಾಯಾಂಗಕ್ಕೆ ಕಾಣದಿದ್ದರೂ ಇಡೀ ದೇಶದ ಜನರ ಕಣ್ಣಿಗೆ ನಿಚ್ಚಳವಾಗಿ ಗೋಚರಿಸಿದೆ. ಕರ್ನಾಟಕದಲ್ಲಿ ಇದನ್ನೇ ಪುನರಾವರ್ತಿಸಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಇಂದು ನಾವೆಲ್ಲರೂ ಕೂಡಿ "ಕರ್ನಾಟಕ ಪ್ರತಿರೋಧದ'ದ ಮೂಲಕ ಘೋಷಿಸುತ್ತಿದ್ದೇವೆ. ನಾವು ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯ ಪರವಾಗಿ ಇದ್ದೇವೆ. ಆದರೆ, ಎಸ್‌ಐಆರ್ ಹೆಸರಲ್ಲಿ ದೋಷಪೂರಿತ ಪ್ರಕ್ರಿಯೆಯನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಸ್ಪಷ್ಟಪಡಿಸಿತು. ಕರ್ನಾಟಕದಲ್ಲಿ ಮತದಾರರ ಪಟ್ಟಿಯ ತ್ರಿವರ ಪರಿಷ್ಕರಣೆ ನಡೆಸಬೇಕಾದರೆ ಕೆಳಕಂಡ ನಾಲ್ಕು ಮೂಲಭೂತ ಬದಲಾವಣೆಗಳನ್ನು ಮಾಡಿಕೊಳ್ಳಲೇಬೇಕು ಎಂದು ಕೇಂದ್ರ ಚುನಾವಣಾ ಆಯೋಗವನ್ನು ನಾವು ಒತ್ತಾಯಿಸುತ್ತಿದ್ದೇವೆ ಎಂದು ಎಚ್ಚರಿಕೆ ನೀಡಿತು. ನಮ್ಮ ಹಕ್ಕೊತ್ತಾಯಗಳು: 'ಲಾಜಿಕಲ್ ಡಿಸ್ಕ್ರಿಪೆನ್ಸಿ' ಎನ್ನುವ ಅತಂತ್ರ ಅವೈಜ್ಞಾನಿಕ, ಅವಾಸ್ತವಿಕ, ಅಪಾರದರ್ಶಕ ಹಾಗೂ ದುರುದ್ದೇಶಪೂರಿತ ವಿಧಾನವನ್ನು ಕರ್ನಾಟಕದಲ್ಲಿ ಯಾವುದೇ ಕಾರಣಕ್ಕೂ ಅಳವಡಿಸಬಾರದು. ಸ್ಪೆಲ್ಲಿಂಗ್, ದಿನಾಂಕ ಇಂತಹ ಕ್ಷುಲ್ಲಕ ವಿಚಾರಗಳನ್ನು ಇಟ್ಟುಕೊಂಡು ಮತದಾನದ ಹಕ್ಕಿನಿಂದ ಯಾರನ್ನೇ ಹೊರಗಿಡುವುದು ಅಕ್ಷಮ್ಯ ಅಪರಾಧ. ಮತದಾರರ ಪಟ್ಟಿ ಎಂಬುದು ರಹಸ್ಯ ದಾಖಲೆಯಲ್ಲ. ಅದು ದೇಶದ ಮತದಾರರ ಮುಕ್ತ ಪಟ್ಟಿ. ಕರಡು ಪಟ್ಟಿ ತಯಾರಾದ ನಂತರ ಯಾರ ಮತವನ್ನಾದರೂ ಸುಲಭವಾಗಿ ಹುಡುಕಬಹುದಾದ ರೀತಿಯಲ್ಲಿ ಪಾರದರ್ಶಕತೆ ಇರುವ ರೀತಿಯಲ್ಲಿ ಅದನ್ನು 'ಕಂಪ್ಯೂಟರ್ ರೀಡಬಲ್ ಫಾರ್ಮ್ಯಾಟ'ನಲ್ಲಿ ನೀಡಬೇಕು.




**ಮತದಾರರ ಪಟ್ಟಿಯನ್ನು ಅಂತಿಮಗೊಳಿಸುವ ಮುನ್ನ ಚುನಾವಣಾ ಆಯೋಗದ ಮ್ಯಾನ್ಯುಯಲ್ ನಲ್ಲಿ ಇರುವ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು:** ಪ್ರತಿ ಗ್ರಾಮ ಪಂಚಾಯಿತಿ ಮತ್ತು ವಾರ್ಡ್ ಪ್ರದೇಶಗಳಲ್ಲಿ ಆ ಭಾಗದ ಮತದಾರರ ಕರಡು ಪಟ್ಟಿಯನ್ನು ಬಹಿರಂಗವಾಗಿ ಪ್ರಕಟಿಸಿ, ಸಾರ್ವಜನಿಕ ಪರಿಶೀಲನೆಗೆ ಒಳಪಡಿಸಿ, ಮುಕ್ತವಾದ ರೀತಿಯಲ್ಲಿ, ಎಲ್ಲರ ಸಮ್ಮುಖದಲ್ಲಿ ತಿದ್ದುಪಡಿಗಳನ್ನು ಮಾಡಬೇಕು.

ಈ ಪ್ರಕ್ರಿಯೆಯನ್ನು ಗಡಿಬಿಡಿಯಲ್ಲಿ ನಡೆಸಬಾರದು. ಕನಿಷ್ಠ 1 ವರ್ಷಗಳ ಅವಧಿ ನಿಗದಿ ಮಾಡಬೇಕು. ಮತದಾರರ ಪಟ್ಟಿಯ ಪರಿಶೀಲನೆ ನಡೆಸಿ ಕರಡು ಪಟ್ಟಿ ತಯಾರಿಸಲು. ಕರಡನ್ನು ಸಾರ್ವಜನಿಕ ಪರಿಶೀಲನೆಗೆ ಒಳಪಡಿಸಲು ಹಾಗೂ ಅಹವಾಲುಗಳನ್ನು ಸ್ವೀಕರಿಸಿ ಅಂತಿಮ ಪಟ್ಟಿ ತಯಾರಿಸಲು 6 ತಿಂಗಳು ಸಮಯ ಇರಬೇಕು.

ವಿವಾಹಿತ ಮಹಿಳೆಯರು, ವಲಸೆ ಕಾರ್ಮಿಕರು, ವಿದ್ಯಾರ್ಥಿಗಳು ಅಲೆಮಾರಿಗಳು, ಆದಿವಾಸಿಗಳು, ದಲಿತರು, ಬಡ ಅಲ್ಪಸಂಖ್ಯಾತರು ಮುಂತಾದ ದಾಖಲೆಗಳ ಗಂಭೀರ ಸಮಸ್ಯೆ ಎದುರಿಸುತ್ತಿರುವ ಜನ ವರ್ಗಗಳು ಪ್ರಜಾತಾಂತ್ರಿಕ ಪ್ರಕ್ರಿಯೆಯಿಂದ ವಂಚಿತರಾಗದಂತೆ ಒಳಗೊಳ್ಳಲು ಅವರಿಗಾಗಿ ವಿಶೇಷ ಸರಳ ಕ್ರಮಗಳು ರೂಪಿಸಬೇಕು. ಈ ಆಗ್ರಹವನ್ನು ಚುನಾವಣಾ ಆಯೋಗ ಲಘುವಾಗಿ ಪರಿಗಣಿಸಬಾರದು ಎಂದು ಮನವಿ. ಮೇಲ್ಕಂಡ ಪ್ರಜಾತಾಂತ್ರಿಕ ಬದಲಾವಣೆಗಳಿಗೆ ಕೇಂದ್ರ ಚುನಾವಣಾ ಆಯೋಗ ಮುಂದಾಗದಿದ್ದರೆ ಬಹಳ ಗಂಭೀರವಾದ ಕರ್ನಾಟಕದ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ. ನಮ್ಮ ಆಗ್ರಹವನ್ನು ಪರಿಗಣಿಸಿ ಅಗತ್ಯ ಬದಲಾವಣೆ ಮಾಡಿಕೊಂಡಲ್ಲಿ ಮತದಾರರ ಪಟ್ಟಿಯ ಪರಿಶೀಲನೆಯಲ್ಲಿ ನಾವೆಲ್ಲಾ ಸಂಪೂರ್ಣವಾಗಿ ಕೈಗೂಡಿಸಿ ಕೆಲಸ ಮಾಡುತ್ತೇವೆ ಎಂದರು.

ಪ್ರತಿಔಭಟನೆಯಲ್ಲಿ ಜಿಪಂ ಮಾಜಿ ಸದಸ್ಯ ಭೀಮರಾವ್ ಟಿಟಿ, ಸುನೀಲ ಮಾನಪಡೆ, ಮೈಲಾರಿ ದೊಡ್ಡಮನಿ, ರೇಣುಕಾ ಸಿಂಗೆ, ಶಾಹೀನಾಜ ಅಖ್ತರ್, ಡಾ.ನಿಲಾಂಬಿಕಾ, ಚಂದ್ರಿಕಾ ಪರಮೇಶ್ವರ, ಶೇಖರಸಿಂಗ, ಸಲೀಂ ಅಹ್ಮದ., ಅನುರಾಧಾ ನಿನ್ನೆ, ಬಾಲಾಜಿ ಕಾಂಬಳೆ, ಸಂಗೀತಾ, ವೈಶಾಲಿ, ಅನೀತಾ ಕೂರಬ, ಸಂಗಮೇಶ ಕಲಬುರಗಿ ಮತ್ತು ಹಣಮಂತ ಮಾನಪಡೆ ಮುಂತಾದವರ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು.

# ಮುಖ್ಯಮಂತ್ರಿ ಬದಲಾವಣೆ ಅಭಿವೃದ್ಧಿಗಾಗಿ ಅಲ್ಲ-ಅಧಿಕಾರಕ್ಕಾಗಿ: ಛಲವಾದಿ ನಾರಾಯಣಸ್ವಾಮಿ ಲೇವಡಿ

**ಕಲಬುರಗಿ, ಮೇ. 31:** ರಾಜ್ಯ ಕಾಂಗ್ರೆಸ್ ಸರ್ಕಾರವು ಮುಖ್ಯಮಂತ್ರಿ ಬದಲವಣೆ ಮಾಡಿರುವುದು ಕೇವಲ ಅಧಿಕಾರಕ್ಕಾಗಿ ಮಾತ್ರ, ಅಭಿವೃದ್ಧಿಗಾಗಿ ಅಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ರಾಜ್ಯ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಲೇವಡಿ ಮಾಡಿದರು.

ಬಿಜೆಪಿ ಕಚೇರಿಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಇಲ್ಲಿಯವರೆಗೆ ಅಭಿವೃದ್ಧಿಯಲ್ಲಿ ಶೂನ್ಯ ಸಾಧನೆಯಾಗಿದೆ. ಕಳೆದ ಮೂರು ವರ್ಷಗಳಿಂದ ಕೇವಲ ಅಧಿಕಾರ ಹಸ್ತಾಂತರದ ಗೊಂದಲವನ್ನು ಹುಟ್ಟುಹಾಕಿದೆ. ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ಭ್ರಷ್ಟಾಚಾರವನ್ನು ಕದ್ದುಮುಚಿ ನೋಡುತ್ತಿದ್ದ ಜನರು, ಇನ್ನು ಮೇಲೆ ಹೊಸ ಮುಖ್ಯಮಂತ್ರಿ ಬಂದ ಮೇಲೆ ನೇರಾನೇರವಾಗಿ ನೋಡುವಂತಹ ಹೊಸ ವ್ಯವಸ್ಥೆಯನ್ನು ಹುಟ್ಟುಹಾಕಿದೆ ಎಂದು ಆರೋಪಿಸಿದರು.

ಬೆಂಗಳೂರು ಅಭಿವೃದ್ಧಿಯ ಹೆಸರಿನಲ್ಲಿ ಸ್ಕ್ವ್ಯಾಯರ್ ಫೀಟ್ ಮೇಲೆ ರಾಜ್ಯ ಸರ್ಕಾರವು ಲಂಚ ಪಡೆಯುತ್ತಿದೆ. ವಿವಿಧ ಕಾರಣಗಳಿಗಾಗಿ ಫೀಟ್ ಸ್ಥಳದ ಅಡಿಯಲ್ಲಿ 300 ರೂ.ಗಳನ್ನು ಪಡೆಯುತ್ತಿದ್ದಾರೆ. ಈ ಹಿಂದೆ ಬೆಂಗಳೂರಿನಲ್ಲಿ ಬಿದ್ದ ಗುಂಡಿಗಳನ್ನು ಮುಚ್ಚಿಸಲು ಮಾಡಿರುವ ಖರ್ಚಿನ ಕುರಿತು ನಾನು ಪರಿಷತ್ತಿನಲ್ಲಿ ಕೇಳಿದಾಗ, ಆಗ ಒಂದು ಗುಂಡಿ ಮುಚ್ಚಲು 4,400ರೂ.ಗಳ ವೆಚ್ಚ ಹೇಳಿದ್ದರು. ಈಗ ಮತ್ತೆ ಗುಂಡಿಗಳನ್ನು ಮುಚ್ಚುವುದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂದು ಕೇಳಿದೆ. ಈಗ ಒಂದು ಗುಂಡಿ ಮುಚ್ಚಲು ಒಂದು ಲಕ್ಷ ರೂ.ಗಳ ವೆಚ್ಚ ಮಾಡಿರುವುದಾಗಿ ರಾಜ್ಯ ಸರ್ಕಾರದಿಂದ ಉತ್ತರ ಬಂದಿದೆ. ಇವರು ಗುಂಡಿಗಳನ್ನು ಮುಚ್ಚಲು ಚಿನ್ನ ಮತ್ತು ಬೆಳ್ಳಿಯನ್ನು ಬಳಸಿದ್ದಂತೂ ಕಂಡುಬಂದಿಲ್ಲ. ಬದಲಾಗಿ ಟಾರ್ ಮಾತ್ರ ಇದೆ. ಬೆಂಗಳೂರಿನ ಪರಿಸ್ಥಿತಿ ಇಡೀ ರಾಜ್ಯಾದ್ಯಂತ ಬಂದಿದೆ ಎಂದು ಅವರು ಆಕ್ರೋಶ ಹೊರಹಾಕಿದರು.

ಮೂರು ವರ್ಷಗಳ ಅವಧಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ ಎಂಬ ಕಾರಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ, ತಮ್ಮ ಕ್ಷೇತ್ರಗಳಲ್ಲಿ ಭೇಟಿ ನೀಡಲು ಹಿಂಜರಿಯುತ್ತಿದ್ದರು. ಜನರಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದರು. ಹೀಗಾಗಿ ಕಾಂಗ್ರೆಸ್ ಸರ್ಕಾರವು ಮುಸ್ಲಿಂ ಸಮುದಾಯದವರ ಓಲೈಕೆ ರಾಜಕಾರಣ,



ಒಂದು ಕೋಮಿಗೆ ಹೆಚ್ಚು ಅನುದಾನ, ಹಾಗೂ ಅವರ ಮೇಲಿನ ಪ್ರಕರಣಗಳನ್ನು ರದ್ದುಪಡಿಸುವ ಮೂಲಕ ಚುನಾವಣೆಯಲ್ಲಿ ಓಟ್ ಬ್ಯಾಂಕ್ ಮಾಡಿಕೊಂಡಿದೆ. ಅದಕ್ಕೆ ಜೀವಂತ ಉದಾಹರಣೆ ಎಂದರೆ ನಮ್ಮ ಕಲಬುರಗಿ ಜಿಲ್ಲೆಯ ಆಳಂದ್ ಪಟ್ಟಣದ ಲಾಡ್ಲೇ ಮಷಾಕ್ ದರ್ಗಾ ಆವರಣದಲ್ಲಿ ಮಹಾಶಿವರಾತ್ರಿಯ ದಿನದಂದು ರಾಘವ ಚೈತನ್ಯರ ಶಿವಲಿಂಗ ಪೂಜೆ ಸಂದರ್ಭದಲ್ಲಿ ಗಲಭೆಯಲ್ಲಿ ಜಿಲ್ಲಾಧಿಕಾರಿ, ಎಸ್‌ಪಿ ಮತ್ತು ಕೇಂದ್ರ ಸಚಿವರ ಮೇಲೆ ಹಲ್ಲೆ ನಡೆಸಿದ ಮುಸ್ಲಿಂರ ಮೇಲಿನ ಪ್ರಕರಣಗಳನ್ನು ಸಿದ್ಧರಾಮಯ್ಯ ಅವರು ಹಿಂಪಡೆಯುವ ಮೂಲಕ ತಮ್ಮ ಓಲೈಕೆಯನ್ನು ಮುಂದುವರೆಸಿದ್ದಾರೆ. ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಮೇಲೆ ತಾವು ರಾಜ್ಯ ರಾಜಕಾರಣದಲ್ಲಿಯೇ ಉಳಿದು, ಕೋಮುವಾದಿಗಳ ವಿರುದ್ಧ ಹೋರಾಡುತ್ತೇನೆ ಎಂದು ಹೇಳಿದ್ದಾರೆ. ಹಾಗೆ ನೋಡಿದರೆ ಮುಸ್ಲಿಂರ ಪರವಾಗಿ ಓಲೈಕೆ ರಾಜಕಾರಣ ಮಾಡಿದ ಸಿದ್ಧರಾಮಯ್ಯ ಅವರೇ ಕೋಮುವಾದಿ, ಅವರ ಕಾಂಗ್ರೆಸ್ ಸರ್ಕಾರವೇ ಕೋಮುವಾದಿ. ಹಾಗಾಗಿ ತಮ್ಮ ಹಾಗೂ ತಮ್ಮ ಪಕ್ಷದ ವಿರುದ್ಧವೇ ಸಿದ್ಧರಾಮಯ್ಯ ಅವರು ಇನ್ನು ಮುಂದೆ ಹೋರಾಡಬೇಕಾಗುತ್ತದೆ ಎಂದು ಸವಾಲು ಹಾಕಿದರು.

ಅಹಿಂದ ವರ್ಗದ ಹೆಸರಿನ ಮೇಲೆ ಅಧಿಕಾರಕ್ಕೆ ಬಂದ ಸಿದ್ಧರಾಮಯ್ಯ ಅವರು, ರಾಜೀನಾಮೆ ನೀಡುವ ಸಮಯದಲ್ಲಿಯೇ ಮಧುಸೂಧನ್ ನಾಯಕ್ ಅವರ ಜಾತಿ ಜನಗಣತಿಯ ವರದಿಯನ್ನು ಅಂಗೀಕರಿಸಿದರು. ಆ ವರದಿಯಂತೆ ರಾಜ್ಯದಲ್ಲಿಯೇ ಮುಸ್ಲಿಂ ಜನಸಂಖ್ಯೆ ಮೊದಲ ಸ್ಥಾನದಲ್ಲಿದೆ. ಇದೂ ಸಹ ಮುಸ್ಲಿಂ ಓಲೈಕೆಯ ಮತ್ತೊಂದು ರಾಜಕಾರಣವಾಗಿದೆ. ಈ ಹಿಂದೆ ಕಾಂತರಾಜ್ ವರದಿ ಜಾರಿ ಏನಾಯಿತು? ಜಯಪ್ರಕಾಶ್ ಹೆಗಡೆ ಅವರ ವರದಿ ಏನಾಯಿತು? ಎಂದು ಪ್ರಶ್ನಿಸಿದ ಅವರು, ಮೊದಲಿನ ವರದಿಗಳಲ್ಲಿ ಇಡೀ ಕರ್ನಾಟಕದಲ್ಲಿ ದಲಿತ ಸಮುದಾಯ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿ ನಂಬರ್ ಒನ್ ಸ್ಥಾನದಲ್ಲಿದೆ ಎಂದು ತಿಳಿಸಲಾಗಿತ್ತು. ಈಗ ಪರಿಶಿಷ್ಟರ ಮೀಸಲಾತಿಯನ್ನು ವಿಭಜಿಸಿ ರೋಸ್ಟರ್ ಬಿಂದು ಸಹ ಕೊಡದೇ ಎಲ್ಲ ಸಮುದಾಯಗಳನ್ನು ಮೂರು ಗುಂಪುಗಳನ್ನಾಗಿ ಒಡೆದು, ಅಲೆಮಾರಿಗಳನ್ನು ಅಲೆಮಾರಿಗಳನ್ನಾಗಿ ಮಾಡಿ, ಬೀದಿಗಳಲ್ಲಿ ಸಿದ್ಧರಾಮಯ್ಯ ಸರ್ಕಾರ ತಂದು ನಿಲ್ಲಿಸಿದೆ. ಜಾತಿ, ಜಾತಿಗಳಲ್ಲಿ ಒಡಕು, ಸಂಘರ್ಷ ವುಂಟು ಮಾಡಿ ಮುಸ್ಲಿಂ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಅನೇಕ ಸರ್ಕಾರದ ಕ್ರಮಗಳೇ ಬಹಿರಂಗಪಡಿಸುತ್ತವೆ ಎಂದು ಆಕ್ರೋಶ ಹೊರಹಾಕಿದರು.

ಸಿದ್ಧರಾಮಯ್ಯ ಅವರು ರಾಜೀನಾಮೆ ನೀಡಿದ ಮೇಲೂ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ರಾಜ್ಯಕ್ಕೆ 13000 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿಲ್ಲ ಎಂದು ದೂರಿದ್ದಾರೆ. ಆ ಕುರಿತು ದಾಖಲೆಗಳನ್ನು ಒದಗಿಸಿ ಎಂದು ಸವಾಲು ಹಾಕಿದ ಅವರು, ಯಾವುದೇ ರಾಜ್ಯ ಸರ್ಕಾರವು ಕೇಂದ್ರದೊಂದಿಗೆ ಸೌಹಾರ್ದಯುತ ಸಂಬಂಧ ಹೊಂದ ಬೇಕು. ಅಂತಹ ಸಂಬಂಧವನ್ನು ಮುಖ್ಯ ಮಂತ್ರಿಗಳಾಗಿದ್ದಾಗ ಸಿದ್ಧರಾಮಯ್ಯ ಮಾಡಲಿಲ್ಲ. ಪದೇ ಪದೇ ಕೇಂದ್ರದ ವಿರುದ್ಧ ಆರೋಪ ಮಾಡುತ್ತಾರೆ. ಈಗ ತೈಲ ಕಂಪೆನಿಗಳು ತೈಲ ದರವನ್ನು ಹೆಚ್ಚಿಸಿದ್ದು, ಅದನ್ನೂ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಪ್ರತಿ ಲೀಟರ್‌ಗೆ ಮೂರು ರೂ.ಗಳ ಹೆಚ್ಚಳವನ್ನು ತೈಲ ಕಂಪೆನಿಗಳು ಮಾಡಿವೆ. ಆದಾಗ್ಯೂ, ಪ್ರಧಾನಿ ನರೇಂದ್ರ ಮೋದಿ ಅವರು ತೈಲ ದರ ಹೊರೆಯಾಗಬಾರದು ಎಂದು ಶೇ.10ರಷ್ಟು ತೆರಿಗೆ ವಿನಾಯಿತಿ ಮಾಡಿದರು. ಆದಾಗ್ಯೂ, ರಾಜ್ಯ ಸರ್ಕಾರವು ಶೇಕಡಾ 30ರಷ್ಟು ತೆರಿಗೆಯನ್ನು ತೈಲಗಳ ಮೇಲೆ ವಿಧಿಸಿದೆ. ವರ್ಷಕ್ಕೆ 6000 ಕೋಟಿ ರೂ.ಗಳನ್ನು ಪಡೆದುಕೊಳ್ಳುತ್ತಿದೆ. ಆ ತೆರಿಗೆಯನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ವಿಧಾನ ಪರಿಷತ್ ಸದಸ್ಯರಾದ ಡಾ. ಬಿ.ಜಿ.ಪಾಟೀಲ್, ಶಶೀಲ್ ಜಿ. ನಮೋಶಿ, ಮಾಜಿ ಸಂಸದ ಡಾ. ಉಮೇಶ್ ಜಾಧವ್, ಮಾಜಿ ಶಾಸಕರಾದ ದತ್ತಾತ್ರೇಯ್ ಪಾಟೀಲ್ ರೇವೂರ್, ರಾಜಕುಮಾರ್ ಪಾಟೀಲ್ ತೆಲ್ಕೂರ್, ಬಿಜೆಪಿ ನಗರ ಜಿಲ್ಲಾಧ್ಯಕ್ಷ ಚಂದು ಪಾಟೀಲ್, ಮಾಜಿ ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ, ಮಾಧ್ಯಮ ಸಂಚಾಲಕ ಬಾಬುರಾವ್ ಪಾಟೀಲ್ ಹಾಗರಗುಂಡಗಿ ಮುಂತಾದವರು ಉಪಸ್ಥಿತರಿದ್ದರು.

# ತಿರುಪತಿ ಸಂಸ್ಕೃತ ವಿವಿಯಲ್ಲಿ ವೀರಶೈವ ಅಧ್ಯಯನ ಪೀಠ ಆರಂಭ: ಕುಂಬಾರಗೇರಿಶ್ರೀ

**ಕಲಬುರಗಿ, ಮೇ. 31:** ಭಾರತದಲ್ಲಿ ಮೊದಲ ಸಂಸ್ಕೃತ ವಿಶ್ವವಿದ್ಯಾಲಯ ತಿರುಪತಿಯಲ್ಲಿ ಆರಂಭವಾಗಿದ್ದು, ಅದರಲ್ಲಿ ವೀರಶೈವ ಗ್ರಂಥಗಳು ಹಾಗೂ ಕೃತಿಕಾರರ ಕುರಿತ ಅಧ್ಯಯನ ಪೀಠ ಸ್ಥಾಪನೆಯಾಗಿದೆ ಎಂದು ಶಹಾಪೂರದ ಕುಂಬಾರಗೇರಿ ಹಿರೇಮಠದ ಶ್ರೀ ಸುಗೂರೇಶ್ವರ ಶಿವಾಚಾರ್ಯರು ಹೇಳಿದರು.

ಜಿಲ್ಲೆಯ ಸುಕ್ಷೇತ್ರ ಸನ್ನತಿಯ ಸೋಮೇಶ್ವರ ದೇವಸ್ಥಾನದಲ್ಲಿ ಜರುಗಿದ 45 ದಿನಗಳ ಬೇಸಿಗೆ ಸಂಸ್ಕಾರ ಶಿಬಿರ ಸಮಾರೋಪದಲ್ಲಿ ಪಾಲ್ಗೊಂಡು ಮಾತನಾಡಿ, ತಿರುಪತಿಯ ಸಂಸ್ಕೃತ ವಿವಿಯಲ್ಲಿ ವೀರಶೈವ ಅಧ್ಯಯನ ಪೀಠ ಆರಂಭವಾಗಲು ಕಾಶಿ ಜಂಗಮವಾಡಿಯ ಹಿರೇಮಠದ ಜಗದ್ಗುರು ಡಾ.ಚಂದ್ರಶೇಖರ್ ಶಿವಾಚಾರ್ಯರ ಸೂಚನೆ ಮೇರೆಗೆ ತಾವು ಹಾಗೂ ಇನ್ನಿತರ ಶ್ರೀಗಳು ಸೇರಿ ತಿರುಪತಿಗೆ ತೆರಳಿ ವಿಶ್ವವಿದ್ಯಾಲಯದ ಕುಲಪತಿಗಳನ್ನು ಭೇಟಿಯಾಗಿ ಅವರೊಂದಿಗೆ ಚರ್ಚಿಸಿ ಚಿಂತನ ಮಂಥನ ವಿಚಾರ ವಿನಿಮಯ ನಡೆಸಲಾಯಿತು.




**ಕಲಬುರಗಿ ಜಿಲ್ಲೆಯ ಸುಕ್ಷೇತ್ರ ಸನ್ನತಿಯ ಸೋಮೇಶ್ವರ ದೇವಸ್ಥಾನದಲ್ಲಿ ಜರುಗಿದ 45 ದಿನಗಳ ಬೇಸಿಗೆ ಸಂಸ್ಕಾರ ಶಿಬಿರ ಸಮಾರೋಪದಲ್ಲಿ ಪಾಲ್ಗೊಂಡು ಶಹಾಪುರದ ಕುಂಬಾರಗೇರಿ ಹಿರೇಮಠದ ಶ್ರೀ ಸುಗೂರೇಶ್ವರ ಶಿವಾಚರ್ಯ ಸ್ವಾಮಿಗಳು ಮಾತನಾಡಿದರು. ವಿವಿಧ ಮಠಗಳ ಶ್ರೀಗಳು ಪಾಲ್ಗೊಂಡಿದ್ದರು.**

ವಿವಿಯಲ್ಲಿ ದೇಶದ ವಿವಿಧೆಡೆಯಿಂದ ಕಾಶಿ, ಗುಜರಾತ, ಮಹಾರಾಷ್ಟ್ರ, ತಮಿಳುನಾಡು ಸೇರಿದಂತೆ ಎಲ್ಲೆಡೆಯಿಂದ ಬಂದ ವಿದ್ವಾಂಸರು ಸಂಸ್ಕೃತಕ್ಕೆ ವೀರಶೈವರ ಕೊಡುಗೆಯ ಕುರಿತು ಮನವರಿಕೆ ಮಾಡಿಕೊಟ್ಟ ನಂತರ ನಂತರ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೀರಶೈವ ಧರ್ಮದ ಕೃತಿಗಳು ಹಾಗೂ ಕೃತಿಕಾರರ ಬಗ್ಗೆ ಸಮಗ್ರ ಅಧ್ಯಯನ ನಡೆಸಲು ಒಂದು ಅಧ್ಯಯನ ಪೀಠ ಆರಂಭಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಶ್ರೀ ಸೂಗೂರೇಶ್ವರ ಸ್ವಾಮೀಜಿ ತಿಳಿಸಿದರು.

ಈ ಪೀಠದಲ್ಲಿ ವೀರಶೈವ ಧರ್ಮದ ಲೇಖಕರು ಬರಹ ಮತ್ತು ಕೃತಿಕಾರರು ಕೃತಿಗಳು ಕುರಿತು ಅಧ್ಯಯನ ನಡೆಯಲಿದೆ ಎಂದ ಅವರು, ಪ್ರಸಕ್ತ ಸಾಲಿನ ಜೂನ್ ಜುಲೈ ತಿಂಗಳಲ್ಲಿ ಪ್ರವೇಶಗಳು ಕೂಡ ಪ್ರಾರಂಭವಾಗಲಿವೆ. ಆನ್‌ಲೈನ್‌ನಲ್ಲಿ ಪ್ರವೇಶವನ್ನೂ ಪಡೆಯಬಹುದಾಗಿದೆ. ಇದರ ಸದುಪಯೋಗವನ್ನು ಸಂಸ್ಕೃತ ಅಧ್ಯಯನ ಮಾಡಿದ ಮಾಡುವ ಪ್ರತಿಯೊಬ್ಬರು ಪಡೆದುಕೊಳ್ಳಬೇಕು ಎಂದು ಅವರು ಈ ಸಂದರ್ಭದಲ್ಲಿ ಪ್ರಕಟಿದರು.

ಕಾರ್ಯಕ್ರಮದಲ್ಲಿ ಬಾಡಿಯಾಲ್ ಮೂಲ ಮಠದ ಪೀಠಾಧಿಪತಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಘನಲಿಂಗ ದೇವರು, ವೈಜನಾಥ ಹಿರೇಮಠ, ವೇ.ಮೂ.ಚಂದ್ರಶೇಖರಯ್ಯ ಶಾಸ್ತ್ರಿ ಸನ್ನತಿ, ಮಲ್ಲಿಕಾರ್ಜುನ ಸ್ವಾಮಿ ನಾಲ್ವಾರ, ರಾಜಶೇಖರಯ್ಯ ಸ್ವಾಮಿ ಯಾದಗಿರಿ, ಮಂಜುನಾಥಗೌಡ ಪೊಲೀಸ್ ಪಾಟೀಲ್, ಚಂದ್ರಶೇಖರ ಸಾಹುಕಾರ ಅಣವಾರ ಇದ್ದರು.

## ಬಸ್‌ನಿಲ್ದಾಣದಲ್ಲಿ ಅನುಚಿತ ವರ್ತನೆ

# ಪುಂಡನಿಗೆ ಚಪ್ಪಲಿಯಿಂದ ಧರ್ಮದೇಟು ನೀಡಿದ ಮಹಿಳೆ

**ರಾಯಚೂರು, ಮೇ. 31:** ಜಿಲ್ಲೆಯ ಲಿಂಗಸುಗೂರು ಪಟ್ಟಣದ ಬಸ್ ನಿಲ್ದಾಣದಲ್ಲಿ ಮಹಿಳೆಯೊಬ್ಬರೊಂದಿಗೆ ಅಸಭ್ಯವಾಗಿ ವರ್ತಿಸಿದ ಯುವಕನಿಗೆ ಸಾರ್ವಜನಿಕರೆದುರೇ, ಮಹಿಳೆ ಚಪ್ಪಲಿಯಿಂದ ಸರಿಯಾಗಿ ಧರ್ಮದೇಟು ನೀಡಿರುವ ಘಟನೆ ನಡೆದಿದೆ.



ಲಿಂಗಸುಗೂರು ಬಸ್ ನಿಲ್ದಾಣದಲ್ಲಿ ಮಹಿಳೆಯೊಬ್ಬರು ಬಸ್ಸಿಗಾಗಿ ಕಾಯುತ್ತಾ ನಿಂತಿದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದ ಯುವಕನೋರ್ವ ಅವರೊಂದಿಗೆ ಅತ್ಯಂತ ಕೆಟ್ಟದಾಗಿ ನಡೆದುಕೊಂಡಿದ್ದಾನೆ. ಅಷ್ಟೇ ಅಲ್ಲದೆ, ಆಕೆಯ ಬಳಿ ಅಶ್ಲೀಲವಾಗಿ ಮಾತನಾಡಿದ್ದಾನೆ. ಇದರಿಂದ ತೀವ್ರ ಆಕ್ರೋಶಗೊಂಡ ಮಹಿಳೆ, ಆತನ ವರ್ತನೆಯನ್ನು ಸಹಿಸದೆ ತಕ್ಷಣವೇ ತನ್ನ ಕೈಯಲ್ಲಿದ್ದ ಚಪ್ಪಲಿಯನ್ನು ತೆಗೆದುಕೊಂಡು ಕೆನ್ನೆಗೆ ಬಾರಿಸಿ ತಕ್ಕ ಪಾಠ ಕಲಿಸಿದ್ದಾರೆ.

ಮಹಿಳೆ ಯುವಕನಿಗೆ ಹೊಡೆಯುತ್ತಿರುವುದನ್ನು ಗಮನಿಸಿದ ಬಸ್ ನಿಲ್ದಾಣದಲ್ಲಿದ್ದ ಇತರ ಪ್ರಯಾಣಿಕರು ಕೂಡ ತಕ್ಷಣವೇ ಮಹಿಳೆಯ ನೆರವಿಗೆ ಧಾವಿಸಿದ್ದಾರೆ. ಅಸಭ್ಯವಾಗಿ ವರ್ತಿಸಿದ ಆ ಪುಂಡ ಯುವಕನಿಗೆ ಅಲ್ಲಿದ್ದ ಸಾರ್ವಜನಿಕರು ಸಹ ಮನಬಂದಂತೆ ಥಳಿಸಿದ್ದಾರೆ. ಜನರಿಂದ ಒದೆ ತಿನ್ನುತ್ತಿದ್ದಂತೆ ಹೆದರಿದ ಯುವಕ ತಕ್ಷಣವೇ ಬಸ್ ನಿಲ್ದಾಣದಿಂದ ಕಾಲ್ಕಿತ್ತು ಪರಾರಿಯಾಗಿದ್ದಾನೆ.

ಈ ಇಡೀ ಘಟನೆ ಲಿಂಗಸುಗೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಮಹಿಳೆಯ ಧೈರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ.

# ಭಕ್ತನ ಹೃದಯ ಭಗವಂತನಿರುವ ಗುಡಿ: ರಂಭಾಪುರಿಶ್ರೀ

**ಶ್ರೀ ರಂಭಾಪುರಿ ಪೀಠ(ಬಾಳೆಹೊನ್ನೂರು)– ಮೇ.31**–ಶಿವಜ್ಞಾನದ ಬೀಜ ಬಿತ್ತಿ ಸಂಸ್ಕಾರ ನೀಡುವಾತನೇ ಶ್ರೀ ಗುರು. ಬಾಳಿನ ಬನ ಚಿಗುರಲು ಗುರು ಕಾರುಣ್ಯ ಕಿರಣ ಮುಖ್ಯ. ಭಕ್ತನ ಹೃದಯ ಭಗವಂತ ನೆಲೆಸಿರುವ ಗುಡಿಯಾಗಿದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ಕನಸು ಸಾಕಾರಗೊಳ್ಳಲು ಮಾರ್ಗ ಬದಲಿಸಬೇಕಲ್ಲದೇ ನಂಬಿದ ತತ್ವಗಳನ್ನಲ್ಲ. ಗಿಡಗಳು ಚಿಗುರು ಪಡೆಯಲು ಎಲೆ ಉದುರಿಸುತ್ತವೇ ಹೊರತು ಬೇರುಗಳನ್ನಲ್ಲ. ಸುಳ್ಳಿನ ಪರ ಜನ ಇದ್ದರೆ ಸತ್ಯದ ಪರ ದೇವರು ಯಾವಾಗಲೂ ಇರುತ್ತಾನೆ. ಸಾವು ಪಡೆಯಲು ಸಾವಿರ ದಾರಿ. ಆದರೆ ಬದುಕು ಪಡೆಯಲು ಇರುವುದೊಂದೇ ದಾರಿ. ಅದುವೇ ಆತ್ಮ ವಿಶ್ವಾಸ. ಧರ್ಮಕ್ಕಿಂತ ದಯಾಗುಣ ಪರಮ ಶ್ರೇಷ್ಠ. ಅರಿವಿಗಿಂತ ಆಚಾರ ದೊಡ್ಡದು. ಅಧಿಕಾರ ಅಂತಸ್ತಿಗಿಂತ ಅಭಿಮಾನ ದೊಡ್ಡದು. ಮಾನ ಸನ್ಮಾನಕ್ಕಿಂತ ಸಂಸ್ಕಾರ ಸಂಸ್ಕೃತಿ ದೊಡ್ಡದು. ನಂಬಿಕೆ ಅನ್ನುವ ಚಿಕ್ಕ ಆಸರೆ ಸಿಕ್ಕರೆ ಸಾಕು. ಜೀವನದಲ್ಲಿ ಏನನ್ನಾದರೂ ಸಾಧಿಸಬಹುದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಅಧಿಕ ಜೇಷ್ಠ ಮಾಸದ ಅಂಗವಾಗಿ ಬುಕ್ಕಾಂಬುಧಿ ತಪೋ ಬೆಟ್ಟದಲ್ಲಿ ವಿಶೇಷವಾಗಿ ಜಪ ತಪೋನುಷ್ಠಾನ ನೆರವೇರಿಸಿದ ಹಾರನಹಳ್ಳಿ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳವರಿಗೆ ರೇಶ್ಮೆ ಮಡಿ ಹೊದಿಸಿ ಶುಭ ಹಾರೈಸಿದರು.

ಈ ಅಪೂರ್ವ ಸಮಾರಂಭದಲ್ಲಿ ಹುಬ್ಬಳ್ಳಿಯ ವೀರೇಶ ಪಾಟೀಲ, ಹರಿಹರದ ಕೊಂಡಜ್ಜಿ ಪಂಚಾಕ್ಷರಿ, ಪ್ರೊ.ವಜ್ರೇಶ ನಾಗರಾಜ, ಸುರೇಶ, ತರ್ಲಘಟ್ಟದ ವೀರೇಶ ಹಿರೇಮಠ ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ತರ್ಲಘಟ್ಟ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಲಾಯಿತು.

ಅಧಿಕ ಜೇಷ್ಠ ಮಾಸದ ಹುಣ್ಣಿಮೆ ಅಂಗವಾಗಿ ಶ್ರೀ ಪೀಠದ ಎಲ್ಲ ದೈವಗಳಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

## ರಾಯಚೂರಿನಲ್ಲಿ ಐಸ್ ಪ್ಲಾಂಟ್ ಬೇಡಿಕೆಗೆ ಸಿಗದ ಸ್ಪಂದನೆ,

# ಮಂಜುಗಡ್ಡೆಗಾಗಿ ನೆರೆರಾಜ್ಯಗಳನ್ನೇ ನೆಚ್ಚಿಕೊಂಡ ಮೀನುಗಾರರು

**ರಾಯಚೂರು, ಮೇ. 31 :** ವಾರ್ಷಿಕ ಸರಾಸರಿ 265 ಕೋಟಿ ರೂ. ಮೀನು ವಹಿವಾಟು ನಡೆಯುವ ಜಿಲ್ಲೆಯಲ್ಲಿ ತಾಜಾ ಮೀನು ಉಳಿಸಿಕೊಳ್ಳಲು ಮಾರಾಟಗಾರರು ಹರಸಾಹಸ ಮಾಡುವಂತಾಗಿದೆ. ಜಿಲ್ಲೆಯಲ್ಲಿ ಖಾಸಗಿ ಅಥವಾ ಸರಕಾರಿ ಯಾವುದೇ ಮಂಜುಗಡ್ಡೆ ಘಟಕ ಇಲ್ಲದಿರುವ ಹಿನ್ನೆಲೆ ನೆರೆಯ ಆಂಧ್ರ, ತೆಲಂಗಾಣಗಳಿಗೆ ಅಲೆದಾಡುವಂತಾಗಿದೆ.

ಹೆಚ್ಚು ಆದಾಯ ಕೊಡುವ ನಾನಾ ಉದ್ಯಮಗಳ ಪೈಕಿ ಮೀನು ಕೃಷಿಯೂ ಒಂದು. ಬೇಡಿಕೆಯುಳ್ಳ ಮೀನು ಉತ್ಪಾದನೆಗೆ ಉತ್ತಮ ಹವಾಗುಣ, ನೀರು, ಭೂಮಿ ಲಭ್ಯತೆ, ಸರಕಾರದ ನಾನಾ ಪ್ರೋತ್ಸಾಹದಾಯಕ ಯೋಜನೆಗಳು ಇಲ್ಲಿಯ ರೈತರನ್ನು ಮೀನು ಕೃಷಿಯತ್ತ ಸೆಳೆಯುತ್ತಿವೆ. ಹಾಗಾಗಿ, ಕಳೆದ ಹಲವು ವರ್ಷಗಳಿಂದ ಜಿಲ್ಲೆಯಲ್ಲಿ ಮೀನು ಕೃಷಿ ಮಾಡುವವರ ಸಂಖ್ಯೆ ಹಂತಹಂತವಾಗಿ ಏರುತ್ತಾ ಸಾಗಿದೆ.

ಕೆರೆಗಳಲ್ಲಿ ಹೊಸ ಮೀನು ಮರಿ ಸಾಕಣೆ ಮಾಡುವವರ ಸಂಖ್ಯೆ ದ್ವಿಗುಣಗೊಳ್ಳುತ್ತಿದೆ. ವರ್ಷದಿಂದ ವರ್ಷಕ್ಕೆ ಸರಾಸರಿ 200ರಿಂದ 250 ಎಕರೆ ವ್ಯಾಪ್ತಿಯಲ್ಲಿ ಮೀನು ಉತ್ಪಾದನೆಯಾಗುವುದು ಹೆಚ್ಚುತ್ತಿದೆ. ಕಳೆದ ವರ್ಷ 20,235 ಟನ್ ಮೀನು ಉತ್ಪಾದನೆಯಾಗಿದ್ದು, ಇದರಲ್ಲಿ ಹೆಚ್ಚು ಆದಾಯ ಕೊಡುವ ಸಿಗಡಿ ತಳಿಯ ಮೀನಿನ ಉತ್ಪಾದನೆಯೇ 4,100 ಟನ್‌ನಷ್ಟಾಗಿದೆ.

265 ಕೋಟಿ ರೂ. ವಹಿವಾಟು: ಮೀನು ಸೇವನೆ ಮಾಡುವವರ ಸಂಖ್ಯೆ ಜಿಲ್ಲೆಯಲ್ಲಿ ಕಮ್ಮಿ ಇರಬಹುದಾದರೂ ಇಲ್ಲಿಂದ ಬೇರೆಡೆ ಸರಬರಾಜಾಗುವ ಮೀನಿನ ಪ್ರಮಾಣ ಜಾಸ್ತಿ ಇದೆ. ಹಾಗಾಗಿ, ವಾರ್ಷಿಕ ಸರಾಸರಿ 265.06 ಕೋಟಿ ರೂ.ನಷ್ಟು ಮೀನು ವಹಿವಾಟು ಜಿಲ್ಲೆಯಲ್ಲಿ ನಡೆಯುತ್ತಿದೆ. ಈ ವಹಿವಾಟನ್ನು ಆಧಾರವಾಗಿಟ್ಟುಕೊಂಡೇ ರೋಗ್, ಮೃಗಾಲ್, ಹುಲ್ಲುಗಂಡೆ, ಬಿಳಚಿ, ಬಾಳೆ, ಗೌರಿ, ಕಾಟ್ಲಮುಂತಾದ ತಳಿಯ ಮೀನುಗಳು ಗ್ರಾಹಕರನ್ನು ತಲುಪವವರೆಗೆ ತಾಜಾ ಆಗಿ ಉಳಿಸಿಕೊಳ್ಳುವುದು ಮಾರಾಟಗಾರರಿಗೆ ಸವಾಲಾಗಿವೆ. ಐಸ್ ಪ್ಲ್ಯಾಂಟ್‌ಗಳು ಜಿಲ್ಲೆಯಲ್ಲಿಇಲ್ಲದಿರುವುದೇ ಈ ಸಮಸ್ಯೆಗೆ ಕಾರಣವಾಗಿದೆ.

ಹೆಚ್ಚು ಖರ್ಚು: ಮಂಜುಗಡ್ಡೆ ಘಟಕ ಸ್ಥಾಪನೆಗೆ ಒಪ್ಪಿಗೆ ನೀಡುವಂತೆ ಸರಕಾರಕ್ಕೆ ಪತ್ರ ಬರೆದರೂ ಪ್ರಯೋಜನವಿಲ್ಲದಂತಾಗಿದೆ. ರಾಯಚೂರು, ಸಿಂಧನೂರು ತಾಲೂಕಿಗೆ ತಲಾ 30 ಟನ್ ಮತ್ತು ಮಾನ್ವಿ, ದೇವದುರ್ಗ, ಲಿಂಗಸುಗೂರು ತಾಲೂಕುಗಳಿಗೆ ತಲಾ 10 ಟನ್ ಸಾಮರ್ಥ್ಯದ ಮಂಜುಗಡ್ಡೆ ಘಟಕ ಸ್ಥಾಪನೆಗೆ ಅಗತ್ಯ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಕೆಯಾಗಿದ್ದರೂ ಸರಕಾರದಿಂದ ಸ್ಪಂದನೆ ಇಲ್ಲದಂತಾಗಿದೆ.

ಕನಿಷ್ಠ ಖಾಸಗಿ ಮಂಜುಗಡ್ಡೆ ಘಟಕವೂ ಇಲ್ಲಿಇರದ ಹಿನ್ನೆಲೆ ಬೇರೆಡೆ ಮೀನು ಸಾಗಣೆ ಮಾಡುವ ಮಾರಾಟಗಾರರು ಗ್ರಾಹಕರನ್ನು ತಲುಪಿಸುವವರೆಗೆ ಮಂಜುಗಡ್ಡೆಗಾಗಿ ಹೆಚ್ಚು ಖರ್ಚು ಮಾಡುವಂತಾಗಿದೆ.

ಅನ್ಯ ರಾಜ್ಯದತ್ತ ಮುಖ: ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಮೀನು ಉತ್ಪಾದನೆ ಪ್ರಮಾಣ ಹೆಚ್ಚುತ್ತಿದ್ದರೂ ಖಾಸಗಿ ಅಥವಾ ಸರಕಾರಿ ಮಂಜುಗಡ್ಡೆ ಘಟಕಗಳೇ ಇಲ್ಲದಿರುವ ಹಿನ್ನೆಲೆ ಸಿಂಧನೂರು, ಲಿಂಗಸುಗೂರು, ಮಾನ್ವಿ, ದೇವದುರ್ಗ, ರಾಯಚೂರು ಭಾಗಗಳಲ್ಲಿಮೀನು




ಉತ್ಪಾದಿಸುವ ರೈತರು ಕನಿಷ್ಠ ವಾರದವರೆಗೆ ತಾಜಾ ಆಗಿ ಉಳಿಸಿಕೊಳ್ಳಲು ಅತ್ಯವಶ್ಯಕವಾಗಿ ಬೇಕಿರುವ ಮಂಜುಗಡ್ಡೆಯನ್ನು ಆಂಧ್ರ ಪ್ರದೇಶದ ಕರ್ನೂಲು, ತೆಲಂಗಾಣದ ಮಹೆಬೂಬ್ ನಗರ, ಕಾರವಾರದಿಂದ ತರುವಂತಾಗಿದೆ.

ಪರಿಣಾಮ ಮೀನು ಕೃಷಿಯಲ್ಲಿ ತೊಡಗಿಕೊಂಡವರು, ಮಾರಾಟಗಾರರ ಮೇಲಾಗುತ್ತಿದ್ದರೆ ಪರೋಕ್ಷವಾಗಿ ಗ್ರಾಹಕರ ಜೇಬಿಗೂ ಕತ್ತರಿ ಬೀಳುತ್ತಿದೆ. ಸದ್ಯ ಪ್ರಥಮ ಬಾರಿಗೆ ಖಾಸಗಿ ಒಡೆತನದ 20 ಟನ್ ಸಾಮರ್ಥ್ಯದ ಮಂಜುಗಡ್ಡೆ ಘಟಕ ಸ್ಥಾಪನೆಯಾಗುತ್ತಿದ್ದು ಮೀನು ಕೃಷಿ, ಮಾರಾಟದಲ್ಲಿ ತೊಡಗಿಕೊಂಡವರಿಗೆ ನೆರವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

# ಆರು ತಿಂಗಳಿಂದ ದೇವದಾಸಿಯರಿಗೆ ಬಂದಿಲ್ಲ ಮಾಸಾಶನ

**ಹುಬ್ಬಳ್ಳಿ, ಮೇ. 31:** ಮಾಜಿ ದೇವದಾಸಿಯರಿಗೆ ಮಾಸಿಕ 5000 ರೂ. ಮಾಸಾಶನ ಘೋಷಣೆಯಲ್ಲೇ ಉಳಿದಿದೆ. ಪ್ರಸ್ತುತ ಸಿಗುತ್ತಿರುವ 2000 ರೂ. ಕಳೆದ 6 ತಿಂಗಳಿನಿಂದ ಬಂದಿಲ್ಲ. 3 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ದಾಖಲೆಗೆ ಸೀಮಿತವಾಗಿದ್ದು ಮಾಜಿ ದೇವದಾಸಿಯರು ಪರಿತಪಿಸುವಂತಾಗಿದೆ.

ಮಾಜಿ ದೇವದಾಸಿಯರ ಜೀವನ ನಿರ್ವಹಣೆಗೆ ಸಮರ್ಪಕ ಮಾಸಾಶನ, ಆರೋಗ್ಯ ಸೌಲಭ್ಯ, ವಸತಿ, ಕುಟುಂಬಕ್ಕೆ ಆರ್ಥಿಕ ನೆರವು ಇತರ ಘೋಷಣೆಗಳು ಆಗುತ್ತಿವೆಯಾದರೂ ಅನುಷ್ಠಾನಕ್ಕೆ ಬಂದಾಗ ಮಾತ್ರ ಅವು ಮೌನಕ್ಕೆ ಜಾರುತ್ತಿವೆ. ಮಾಜಿ ದೇವದಾಸಿಯರಿಗೆ ಮಾಸಾಶನ ಆರೇಳು ತಿಂಗಳಿಗೊಮ್ಮೆ ನೀಡಲಾಗುತ್ತಿದೆ. ಇದರಿಂದ



ವಿವಿಧ ವ್ಯಾಧಿಗಳಿಗೆ ಸಿಲುಕಿದ ಮಾಜಿ ದೇವದಾಸಿಯರು ಜೀವನ ನಿರ್ವಹಣೆಗೆ ಕಷ್ಟ ಪಡುತ್ತಿದ್ದಾರೆ. ರಾಜ್ಯದಲ್ಲಿ ಸುಮಾರು 14 ಜಿಲ್ಲೆಗಳಲ್ಲಿ 28660 ಮಾಜಿ ದೇವದಾಸಿಯರಿದ್ದಾರೆ. ಇದರಲ್ಲಿ 26488 ಜನರಿಗೆ ಮಾತ್ರ ಮಾಸಾಶನ ಪಡೆಯುತ್ತಿದ್ದಾರೆ. 2,72 ಮಾಜಿ ದೇವದಾಸಿಯರು ವಲಸೆ ಹೋಗಿದ್ದು ಎಲ್ಲಿದ್ದಾರೆ ಎಂಬ ಮಾಹಿತಿಯೂ ಇಲ್ಲ.


2025ರಲ್ಲಿ ಮಾಜಿ ದೇವದಾಸಿಯರ ಕುರಿತಾಗಿ ಸಮೀಕ್ಷೆ ನಡೆದಿದ್ದು, ಅಂಕಿ–ಅಂಶ ಬಹಿರಂಗಗೊಳ್ಳಬೇಕಾಗಿದೆ. ಈ ಹಿಂದೆ ನಡೆದ ಸಮೀಕ್ಷೆಯ ಅಂಕಿ ಅಂಶಗಳನ್ನು ನೋಡುವುದಾದರೆ ಬಳ್ಳಾರಿ ಜಿಲ್ಲೆಯಲ್ಲಿ ಅತಿ ಹೆಚ್ಚು 9733 ಮಾಜಿ ದೇವದಾಸಿಯರಿದ್ದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಕಡಿಮೆ 24 ಜನರಿದ್ದಾರೆ. ವಿಜಯಪುರ 4103, ಬಾಗಲಕೋಟೆ 7827, ಬೆಳಗಾವಿ 4724, ಕೊಪ್ಪಳ 6035, ರಾಯಚೂರು 3949, ಯಾದಗಿರಿ 1169, ಕಲಬುರಗಿ 1445, ಗದಗ 2900, ಧಾರವಾಡ 763, ಹಾವೇರಿ 990, ಚಿತ್ರದುರ್ಗ 406, ದಾವಣಗೆರೆಯಲ್ಲಿ 2,592 ಸೇರಿ ಒಟ್ಟು 46,660 ಮಾಜಿ ದೇವದಾಸಿಯರಿದ್ದಾರೆ. ಇದರಲ್ಲಿ ಜೀವಂತ ಇರುವವರು 28660 ಆಗಿದ್ದಾರೆ.

### 5,000 ರೂ. ಘೋಷಣೆಯಷ್ಟೇ

ಮಾಜಿ ದೇವದಾಸಿಯರಿಗೆ ಈ ಮೊದಲು 1500 ರೂ.ಗಳ ಮಾಸಾಶನ ನೀಡಲಾಗುತ್ತಿತ್ತು. ಹೋರಾಟದ ನಂತರ ಅದನ್ನು 2000 ರೂ.ಗೆ ಹೆಚ್ಚಿಸಲಾಯಿತು. ಮಾಸಿಕವಾಗಿ 5000 ರೂ.ಗಳನ್ನು ನೀಡಬೇಕೆಂಬ ಬೇಡಿಕೆಗೆ ಸರ್ಕಾರ ಸ್ಪಂದಿಸಿ 5000 ರೂ. ನೀಡುವ ಬಗ್ಗೆ ಘೋಷಣೆ ಮಾಡಿದೆಯಾದರೂ ಇದುವರೆಗೂ ಅದು ಅನುಷ್ಠಾನಗೊಂಡಿಲ್ಲ.– **ಅಮರೇಗೌಡ ಗೋನವಾರ.**

# ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಡಿಕೆಶಿ ಆಯ್ಕೆ: ಬಳ್ಳಾರಿಯಲ್ಲಿ 0ಬೆಂಬಲಿಗರಿಂದ ಸಂಭ್ರಮಾಚರಣೆ

**ಬಳ್ಳಾರಿ, ಮೇ.31:** ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಸಭೆಯ ನಾಯಕನನ್ನಾಗಿ ಆಯ್ಕೆ ಮಾಡಿದ್ದು. ಅವರು ಮುಖ್ಯಮಂತ್ರಿಯಾಗಿ ಜೂ.3ರಂದು ಸಂಜೆ ಲೋಕ ಭವನದ ಗ್ಲಾಸ್ ಹೌಸ್‌ನಲ್ಲಿ ಪ್ರಮಾಣವಚನ ಸ್ವೀಕರಿಸುವ ಹಿನ್ನಲೆಯಲ್ಲಿ ನಿನ್ನೆ ಸಂಜೆ ನಗರದಲ್ಲಿ ಮೇಯರ್ ಪಿ.ಗಾದೆಪ್ಪ, ಬೋಯಪಾಟಿ ವಿಷ್ಣು ವರ್ಧನ್ ಅವರ ನೇತೃತ್ವದಲ್ಲಿ ಡಿಕೆಶಿ ಅಭಿಮಾನಿಗಳು ಸಂಭ್ರಮಿಸಿದರು.



ಬುಡಾ ಅಧ್ಯಕ್ಷ ಜೆ.ಎಸ್. ಆಂಜನೇಯಲು ಅವರ ಮನೆ ಬಳಿಯಿಂದ ಬೈಕ್ ರ್ಯಾಲಿ ಕೈಗೊಂಡು ಗಡಗಿ ಚೆನ್ನಪ್ಪ ವೃತ್ತಕ್ಕೆ ಆಗಮಿಸಿ. ಕಾಂಗ್ರೆಸ್ ಪಕ್ಷದ ಬಾವುಟ, ಭಾವಚಿತ್ರದ ಫಲಕಗಳನ್ನು ಹಿಡಿದು ಪಟಾಕಿ ಸಿಡಿಸುತ್ತ ಡಿಕಿಶಿ ಪರ ಘೋಷಣೆ ಕೂಗಿದರು.

# ಉದ್ಯಮಿ ಗಣಪಾಲ್ ಐನಾಥರೆಡ್ಡಿ ಹುಟ್ಟುಹಬ್ಬದ ನಿಮಿತ್ತ ಹೆಲ್ಮೆಟ್ ವಿತರಣೆ

**ಬಳ್ಳಾರಿ ಮೇ 31.** ಪ್ರಮುಖ ಉದ್ಯಮಿ, ಉಖಖ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಗಣಪಾಲ ಐನಾಥರೆಡ್ಡಿರವರು ತಮ್ಮ ಹುಟ್ಟು ಹಬ್ಬವನ್ನು ನಗರದ ಅನಂತಪುರ ರಸ್ತೆಯಲ್ಲಿರುವ ವಿಜಯನಗರ ಫರ್ಟಿಲೈಜರ್ಸ್ ಪ್ರೈ.ಲಿ. (VFPL)ನಲ್ಲಿ ತಮ್ಮ ಎಲ್ಲಾ ಸಿಬ್ಬಂದಿ ವರ್ಗದವರೊಂದಿಗೆ ಹಾಗೂ ಕಾರ್ಮಿಕರೊಂದಿಗೆ ತುಂಬಾ ಸರಳವಾಗಿ ಆಚರಿಸಿಕೊಂಡರು.

ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀನಿವಾಸ ರೆಡ್ಡಿ ಎನ್.ಟಿ. (ಓಖಿಖಖ), ರವರು ಈ ಸುದಿನವನ್ನು ಮುಂದಿನ ವರ್ಷದಿಂದ ಉಖಖ ಸಮೂಹ ಸಂಸ್ಥೆಗಳ "ಸಂಸ್ಥಾಪನಾ ದಿನ" (Founder's Day) ವನ್ನಾಗಿ ಆಚರಿಸೋಣವೆಂದು ಕಾರ್ಯಕ್ರಮದಲ್ಲಿ ನೆರೆದಿದ್ದ ಅತಿಥಿಗಳು, ಎಲ್ಲಾ ಸಿಬ್ಬಂದಿ ವರ್ಗದವರು ಹಾಗೂ



ಕಾರ್ಮಿಕರ ಸಮಕ್ಷಮದಲ್ಲಿ ತಿಳಿಸಿದರು.

ನಂತರ ಗಣಪಾಲ ಐನಾಥರೆಡ್ಡಿ, ಯವರು ಮಾತನಾಡಿ, ಈ ದಿನ GIR ಸಮೂಹ ಸಂಸ್ಥೆಗಳ "ಸಂಸ್ಥಾಪನಾ ದಿನ" ಮಾತ್ರವಲ್ಲ, ನನ್ನ ಮತ್ತು ಸಂಸ್ಥೆಗಳ ಏಳಿಗೆಗೆ ಕಾರಣವಾದ ಎಲ್ಲಾ ಸಿಬ್ಬಂದಿಗಳ ಹಾಗೂ ಕಾರ್ಮಿಕರ ದಿನ ಎಂದು ಹರ್ಷ ವ್ಯಕ್ತಪಡಿಸಿದರು.

ಮಾನ್ಯ ಜಿಲ್ಲಾ ವರಿಷ್ಠಾಧಿಕಾರಿಗಳು ಜೂನ್1 ರಿಂದ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಕಡ್ಡಾಯಗೊಳಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ತಮ್ಮ ಸಿಬ್ಬಂದಿಗಳ ಸುರಕ್ಷತೆಯ ಹಿತದೃಷ್ಟಿಯಿಂದ ಹೆಲ್ಮೆಟ್ ವಿತರಣೆ ಮಾಡಿದರು.

ನಂತರ ಎಲ್ಲಾ ಸಿಬ್ಬಂದಿಗಳು, ಕಾರ್ಮಿಕರು, ವಿವಿಧ Fertilizer ಹಾಗೂ Pesticide ಕಂಪನಿಗಳ ಪ್ರತಿನಿಧಿಗಳು ಕೇಕ್ ಕತ್ತರಿಸುವ ಮೂಲಕ ಗಣಪಾಲ ಐನಾಥರೆಡ್ಡಿ ಯವರಿಗೆ ಶುಭ ಹಾರೈಸಿದರು.

# ಇಂದಿನಿಂದ ಬಳ್ಳಾರಿಯಲ್ಲಿ ಹೆಲ್ಮೆಟ್ ಖಡ್ಡಾಯ

**ಬಳ್ಳಾರಿ, ಮೇ.31:** ಸುಪ್ರೀಂ ಕೋರ್ಟ್ ಆದೇಶದಂತೆ ದೇಶದಲ್ಲಿ ಎಲ್ಲೂ ಹೆಲ್ಮೆಟ್ ಧರಿಸದೇ ಇರಲು ವಿನಾಯಿತಿ ಇಲ್ಲ. ಆದರೆ ಬೇಸಿಗೆ ಎಂಬ ಕಾರಣಕ್ಕೆ ಹೆಲ್ಮೆಟ್ ಕಡ್ಡಾಯಕ್ಕೆ ಒಂದಿಷ್ಟು ರಿಲ್ಯಾಕ್ಸ್ ನ್ನು ಅನಧಿಕೃತವಾಗಿಯೇ ನೀಡಿದಂತೆ ಇತ್ತು. ಆದರೆ ನಗರ ಮತ್ತು ಜಿಲ್ಲೆಯಾದ್ಯಂತ ನಾಳೆಯಿಂದ ಮತ್ತೆ ದ್ವಿಚಕ್ರ ವಾಹನ ಸವಾರರಿಗೆ ಯಾವ ಮೂಲಾಜಿಲ್ಲದೆ ಹೆಲ್ಮೆಟ್ ಖಡ್ಡಾಯ ಖಡ್ಡಾಯಗೊಳಿಸಲಿದೆಂದು ಎಸ್ಪಿ ಡಾ. ಸುಮನ್ ಡಿ.ಪನ್ನೇಕರ್ ಹೇಳಿದ್ದಾರೆ.

ಹೆಲ್ಮೆಟ್ ಧರಿಸದೇ ಇರಲು ಯಾವ ಕಾನೂನು, ಆದೇಶದಲ್ಲಿ ರಿಯಾಯತಿ ಇಲ್ಲ. ದ್ವಿಚಕ್ರವಾಹನ ಸವಾರರು ಖಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಇಲ್ಲದಿದ್ದರೆ 500 ರೂ ದಂಡ ವಿಧಿಸಲಿದೆಂದಿದ್ದಾರೆ.

ಕಳೆದ ಒಂದು ತಿಂಗಳಿನಿಂದಲೇ ಈ ಕುರಿತು ಸಾರ್ವಜನಿಕರಿಗೆ, ಸಂಘ ಸಂಸ್ಥೆಗಳಿಗೆ, ಸರ್ಕಾರಿ ನೌಕರರಿಗೆ ಸಾಕಷ್ಟು ಜಾಗೃತಿಯನ್ನು ಅಭಿಯಾನದ ಮೂಲಕ ಮಾಡಿದೆಂದರು.

ಹೆಲ್ಮೆಟ್ ಖಡ್ಡಾಯದ ಪರಿಶೀಲನೆ ಟ್ರಾಫಿಕ್ ಪೊಲೀಸರಷ್ಟೇ ಅಲ್ಲದೆ ಇತರೇ ಠಾಣೆಗಳ ಸಿಬ್ಬಂದಿ ಸಹ ಈ ಕಾರ್ಯ ಮಾಡಲಿದ್ದಾರೆ. ಹೆಲ್ಮೆಟ್ ಇಲ್ಲದೆ ಬರುವವರಿಗೆ ಪ್ರಥಮಬಾರಿಗೆ ಹೊಸ ಹೆಲ್ಮೆಟ್ ಖರೀದಿಸಿಕೊಂಡು ಬಂದು ತೋರಿಸಿ ಹೋಗಬಹುದು. ಇಲ್ಲ 5 ನೂರು ದಂಡ ಹಾಕಲಿದೆ. ಹೆಲ್ಮೆಟ್ ಸುಗುತ್ತಿಲ್ಲ ಎಂಬ ಸಬೂಬಿಗೆ, ಅವರಿವರಿಂದ ಶಿಫಾರಸ್ಸು ಯಾವುದಕ್ಕೂ ಮುಲಾಜಿಲ್ಲದೆ ಕಾರ್ಯನಿರ್ವಹಿಸಲಿದೆ. ಅಪ್ರಾಪ್ತರು ಬೈಕ್ ಚಾಲನೆ ಮಾಡಿದರೆ ಅವರ ಪೋಷಕರಿಗೆ 25 ಸಾವಿರ ರೂ ದಂಡ ಹಾಕಲಿದ್ದೇವೆಂದು ಹೇಳಿದ್ದಾರೆ.

# ಇರಾನ್ ಭೂಗತ ಕ್ಷಿಪಣಿ ತಾಣ ಮತ್ತೆ ಸಕ್ರಿಯ, ಕ್ಷಿಪಣಿ ಉಡಾವಣೆ ಸಾಧ್ಯತೆ: ವರದಿ

**ವಾಷಿಂಗ್ಟನ್, ಮೇ 31:** ಇರಾನ್ ತನ್ನ ಸಮಾಧಿ ಶಸ್ತ್ರಾಗಾರಗಳಿಗೆ ಪ್ರವೇಶವನ್ನು ತ್ವರಿತವಾಗಿ ಪುನಃಸ್ಥಾಪಿಸಿದ ನಂತರ ಇಸ್ರೇಲ್ ಮೇಲೆ ಗಮನಾರ್ಹವಾಗಿ ಹೆಚ್ಚಿನ ಸಂಖ್ಯೆಯ ದೀರ್ಘಶ್ರೇಣಿಯ ಕ್ಷಿಪಣಿಗಳನ್ನು ಹಾರಿಸುವ ಸಾಧ್ಯತೆಯಿದೆ ಎಂದು ಅಭಿವೃದ್ಧಿ ವಿಶ್ಲೇಷಕರು ಯುಎಸ್ ಮತ್ತು ಇಸ್ರೇಲಿ ವಾಯುದಾಳಿ ತಂತ್ರಗಳ ಮಿತಿಗಳನ್ನು ಎತ್ತಿತೋರಿಸುತ್ತಾರೆ.

ವಾರಗಳವರೆಗೆ, ಅಮೆರಿಕ ಮತ್ತು ಇಸ್ರೇಲ್ನ ಸಂಘಟಿತ ದಾಳಿಗಳು ಇರಾನ್‌ನ ಭೂಗತ ಕ್ಷಿಪಣಿ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡವು, ಪ್ರವೇಶ ರಸ್ತೆಗಳನ್ನು ನಾಶಮಾಡುವ ಮೂಲಕ ಮತ್ತು ಕ್ಷಿಪಣಿ ವ್ಯವಸ್ಥೆಗಳನ್ನು ಸಂಗ್ರಹಿಸಲು ಮತ್ತು ನಿಯೋಜಿಸಲು ಬಳಸುವ ಸುರಂಗ ಪ್ರವೇಶದ್ವಾರಗಳನ್ನು ಕುಸಿಯುವ ಮೂಲಕ ಕಾರ್ಯಾಚರಣೆಯ ಸಾಮರ್ಥ್ಯವನ್ನು ನಿಷ್ಕ್ರಿಯಗೊಳಿಸುವುದರ ಮೇಲೆ ಕೇಂದ್ರೀಕರಿಸಿದವು.

ಈ ಅಭಿಯಾನವು ಆರಂಭದಲ್ಲಿ ಪ್ರಮುಖ ಭೂಗತ ಸೌಲಭ್ಯಗಳಿಂದ ಉಪಕರಣಗಳನ್ನು ಚಲಿಸುವ ಮತ್ತು ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ನಿರ್ಬಂಧಿಸುವಲ್ಲಿ, ಕ್ಷಿಪಣಿ ಚಟುವಟಿಕೆಯನ್ನು ತಾತ್ಕಾಲಿಕವಾಗಿ ಕಡಿಮೆ ಮಾಡುವಲ್ಲಿ ಮತ್ತು ಉಡಾವಣಾ ಲಾಜಿಸ್ಟಿಕ್ಸ್ ಅನ್ನು ಸಂಕೀರ್ಣಗೊಳಿಸುವಲ್ಲಿ ಯಶಸ್ವಿಯಾಯಿತು.

ಚಿತ್ರಗಳು ಇರಾನಿನ ಪಡೆಗಳು ಬುಲ್ಡೋಜರ್‌ಗಳು ಮತ್ತು ಡಂಪ್ ಟ್ರಕ್‌ಗಳನ್ನು ಬಳಸಿ ಅವಶೇಷಗಳನ್ನು ತೆರವುಗೊಳಿಸಲು ಮತ್ತು ಬಹು ಭೂಗತ ತಾಣಗಳಿಗೆ ಪ್ರವೇಶವನ್ನು ಪುನಃಸ್ಥಾಪಿಸುವುದನ್ನು ತೋರಿಸುತ್ತವೆ, ಇದು ಕಡಿಮೆ-ವೆಚ್ಚದ ಆದರೆ ಪರಿಣಾಮಕಾರಿ ಚೇತರಿಕೆ ಪ್ರಯತ್ನ ಎಂದು ವಿಶ್ಲೇಷಕರು ವಿವರಿಸುತ್ತಾರೆ, ಇದು ಆಳವಾಗಿ ಹೂತುಹೋಗಿರುವ ಮಿಲಿಟರಿ ಮೂಲಸೌಕರ್ಯವನ್ನು ನಿಷ್ಕ್ರಿಯಗೊಳಿಸುವಲ್ಲಿ ವೈಮಾನಿಕ ದಾಳಿಯ ಮಿತಿಗಳನ್ನು ಮಾತ್ರ ಒತ್ತಿಹೇಳುತ್ತದೆ ಎಂದು ಸಿಎನ್‌ಎನ್ ವರದಿ ಮಾಡಿದೆ. "ಯುದ್ಧಗಳು ಪುನರಾರಂಭವಾದರೆ, ಇರಾನ್ "ಉತ್ಪಾದನೆ ಸ್ಥಗಿತಗೊಂಡಿದ್ದರೂ ಸಹ, ಲಾಂಚರ್‌ಗಳು ಮತ್ತು ಸಿಬ್ಬಂದಿಗಳನ್ನು ಹೊಂದಿರುವವರೆಗೆ ಕ್ಷಿಪಣಿಗಳನ್ನು ಉಡಾಯಿಸುವುದನ್ನು ಮುಂದುವರಿಸುವ ಸ್ಥಿತಿಯಲ್ಲಿದೆ" ಎಂದು ಇರಾನ್ನ ಕ್ಷಿಪಣಿ ಸಾಮರ್ಥ್ಯಗಳನ್ನು ವಿಶ್ಲೇಷಿಸುವ ಜೇಮ್ಸ್ ಮಾರ್ಟಿನ್ ಪರಮಾಣು ನಿಶಸ್ತ್ರೀಕರಣ ಅಧ್ಯಯನ ಕೇಂದ್ರದ ಸಂಶೋಧನಾ ಸಹವರ್ತಿ ಸ್ಯಾಮ್‌ಲೈರ್ ಅವರನ್ನು ಸಿಎನ್‌ಎನ್ ಉಲ್ಲೇಖಿಸಿದೆ.



"ಇರಾನಿಯನ್ನರು ಇನ್ನೂ ಹೊಂದಿರುವ ಸಾಕಷ್ಟು ಕ್ಷಿಪಣಿಗಳ ಸಂಗ್ರಹದೊಂದಿಗೆ ಲಾಂಚರ್‌ಗಳು ಶಸ್ತ್ರಸಜ್ಜಿತವಾಗುವುದನ್ನು ತಡೆಯಲು ಏನೂ ಇಲ್ಲ." 18 ಕ್ಷಿಪಣಿ ಸೌಲಭ್ಯಗಳಲ್ಲಿ ಇತ್ತೀಚಿನ ಮಿಲಿಟರಿ ಕಾರ್ಯಾಚರಣೆಗಳ ಸಮಯದಲ್ಲಿ ಹೊಡೆದ 69 ಸುರಂಗ ಪ್ರವೇಶದ್ವಾರಗಳಲ್ಲಿ 50 ಈಗ ಪುನಃ ತೆರೆಯಲಾಗಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ. ಲಾಂಚರ್ ಚಲನೆಯನ್ನು ತಡೆಯಲು ಹಿಂದೆ ಗುಂಡಿ ಹಾಕಲಾದ ರಸ್ತೆಗಳನ್ನು ಸಹ ದುರಸ್ತಿ ಮಾಡಲಾಗಿದೆ ಮತ್ತು ಕೆಲವು ಸಂದರ್ಭಗಳಲ್ಲಿ ದುರಸ್ತಿ ಮಾಡಲಾಗಿದೆ. ವರದಿಯಲ್ಲಿ ಉಲ್ಲೇಖಿಸಲಾದ ತಜ್ಞರು, ಲಾಂಚರ್‌ಗಳು ಮತ್ತು ಸಿಬ್ಬಂದಿ ಹಾಗೇ ಇರುವವರೆಗೆ, ನಿರಂತರ ಬಾಂಬ್ ದಾಳಿಯ ನಂತರವೂ ಇರಾನ್ ತನ್ನ ಕ್ಷಿಪಣಿ ಪಡೆಯನ್ನು ನಿರ್ವಹಿಸುವುದನ್ನು ಮುಂದುವರಿಸಬಹುದು ಎಂದು ಸೂಚಿಸುತ್ತದೆ. ಇರಾನ್‌ನ ಭೂಗತ ಕ್ಷಿಪಣಿ ನೆಲೆಗಳ ಜಾಲ – ಕೆಲವು ನೂರಾರು ಮೀಟರ್ ಕೆಳಗೆ ಇದೆ ಎಂದು ವರದಿಯಾಗಿದೆ – ವೈಮಾನಿಕ ದಾಳಿಗಳನ್ನು ತಡೆದುಕೊಳ್ಳಲು ದೀರ್ಘಕಾಲ ವಿನ್ಯಾಸಗೊಳಿಸಲಾಗಿದೆ. ಯುಎಸ್ ಮತ್ತು ಇಸ್ರೇಲಿ ದಾಳಿಗಳು ಸುರಂಗ ಪ್ರವೇಶದ್ವಾರಗಳು ಮತ್ತು ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆಗಳನ್ನು ತಾತ್ಕಾಲಿಕವಾಗಿ ಅಡ್ಡಿಪಡಿಸುವಲ್ಲಿ ಯಶಸ್ವಿಯಾಗಿದೆ ಎಂದು ವರದಿಯಾಗಿದ್ದರೂ, ಪ್ರವೇಶವನ್ನು ತ್ವರಿತವಾಗಿ ಪುನಃಸ್ಥಾಪಿಸುವ ಇರಾನ್ನ ಸಾಮರ್ಥ್ಯವು ಅದರ ಕ್ಷಿಪಣಿ ಕಾರ್ಯಕ್ರಮದ ಸ್ಥಿತಿಸ್ಥಾಪಕತ್ವವನ್ನು ಎತ್ತಿ ತೋರಿಸುತ್ತದೆ ಎಂದು ವಿಶ್ಲೇಷಕರು ಹೇಳುತ್ತಾರೆ.

"ಇರಾನಿಯನ್ನರು ಪುನರ್ನಿರ್ಮಾಣಕ್ಕಾಗಿ ಗುಪ್ತಚರ ಸಮುದಾಯ ಹೊಂದಿದ್ದ ಎಲ್ಲಾ ಸಮಯಾವಧಿಯನ್ನು ಮೀರಿದ್ದಾರೆ" ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಉತ್ಪಾದನಾ ತಾಣಗಳು ಮತ್ತು ಮೂಲಸೌಕರ್ಯಗಳಿಗೆ ಹಾನಿಯಾಗಿದ್ದರೂ, ಇರಾನ್ ಇನ್ನೂ ಆಳವಾದ ಭೂಗತದಲ್ಲಿ ಸಂಗ್ರಹವಾಗಿರುವ ಗಮನಾರ್ಹ ಕ್ಷಿಪಣಿ ದಾಸ್ತಾನು ಹೊಂದಿದೆ ಎಂದು ನಂಬಲಾಗಿದೆ, ಯುದ್ಧಗಳು ಪುನರಾರಂಭವಾದರೆ ನಿರಂತರ ಉಡಾವಣೆಗಳನ್ನು ಸಕ್ರಿಯಗೊಳಿಸಬಹುದು ಎಂದು ವರದಿ ಹೇಳುತ್ತದೆ. ಸಿಎನ್‌ಎನ್ ಉಲ್ಲೇಖಿಸಿದ ಮಿಲಿಟರಿ ವಿಶ್ಲೇಷಕರು ವೈಮಾನಿಕ ದಾಳಿಗಳು ಅಲ್ಪಾವಧಿಯ ಅಡ್ಡಿ ಸಾಧಿಸಬಹುದಾದರೂ, ಅವುಗಳಿಗೆ ಕೊರತೆಯಿರಬಹುದು ಎಂದು ಎಚ್ಚರಿಸಿದ್ದಾರೆ. ದೀರ್ಘಾವಧಿಯ ನಿಯಂತ್ರಣ ಕ್ರಮಗಳೊಂದಿಗೆ ಜೋಡಿಸದಿದ್ದರೆ ಕಾರ್ಯತಂತ್ರದ ಉದ್ದೇಶಗಳು.

ಪೆಂಟಗನ್ ನಿರ್ದಿಷ್ಟ ಸಂಶೋಧನೆಗಳ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ, ಯುಎಸ್ ಪಡೆಗಳು ಅಧ್ಯಕ್ಷರ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸಲು ಸಮರ್ಥವಾಗಿವೆ ಎಂದು ಪುನರುಚ್ಚರಿಸಿದೆ. ಈ ಬೆಳವಣಿಗೆಗಳು ಗಟ್ಟಿಯಾದ ಭೂಗತ ಮಿಲಿಟರಿ ಜಾಲಗಳ ವಿರುದ್ಧ ಹೆಚ್ಚಿನ ವೆಚ್ಚದ ಬಾಂಬ್ ದಾಳಿ ಕಾರ್ಯಾಚರಣೆಗಳ ಪರಿಣಾಮಕಾರಿತ್ವದ ಬಗ್ಗೆ ವಿಶಾಲವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ ಎಂದು ತಜ್ಞರು ಹೇಳುತ್ತಾರೆ, ವಿಶೇಷವಾಗಿ ಚೇತರಿಕೆ ಪ್ರಯತ್ನಗಳು ತುಲನಾತ್ಮಕವಾಗಿ ಸರಳ ಎಂಜಿನಿಯರಿಂಗ್ ಉಪಕರಣಗಳನ್ನು ಅವಲಂಬಿಸಿರುವಾಗ.

# ದೇಶದ ಶ್ರೀಮಂತ ಮಾವಿನತಳಿಗಳ ಪರಂಪರೆ ಶ್ಲಾಘಿಸಿದ ಮೋದಿ

**ನವದೆಹಲಿ, ಮೇ 31:** ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಮಧ್ಯಾಹ್ನ ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕೀ ಬಾತ್‌ನ 134ನೇ ಸಂಚಿಕೆಯಲ್ಲಿ ದೇಶದ ಶ್ರೀಮಂತ ಮಾವಿನತಳಿಗಳ ಪರಂಪರೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.ಬೇಸಿಗೆಯ ಈ ಅವಧಿಯಲ್ಲಿ ಮಾವಿನ ಹಣ್ಣಿನ ಜನಪ್ರಿಯತೆ ಮತ್ತು ದೇಶದ ಕೃಷಿ ಆರ್ಥಿಕತೆಗೆ ಮಾವು ಬೆಳಗಾರರು ನೀಡುತ್ತಿರುವ ಕೊಡುಗೆಯನ್ನು ಪ್ರಧಾನಿ ಅವರು ವಿಶೇಷವಾಗಿ ಪ್ರಸ್ತಾಪಿಸಿದ್ದಾರೆ.ಬೇಸಿಗೆ ಕಾಲ ಬಂದ ತಕ್ಷಣ ಭಾರತದ ಪ್ರತಿಯೊಂದು ಮನೆಯಲ್ಲೂ ಮಾವಿನ ಹಣ್ಣಿನ ಬಗ್ಗೆ ಚರ್ಚೆ ಆರಂಭವಾಗುತ್ತದೆ. ಬೇಸಿಗೆಯಲ್ಲಿ ಮಾವಿನ ಹಣ್ಣಿನ ಬಗ್ಗೆ ಮಾತನಾಡದ ಒಂದೇ ಒಂದು ಮನೆಯೂ ಭಾರತದಲ್ಲಿ ಇರಲು ಸಾಧ್ಯವಿಲ್ಲ ಎಂದು ಪ್ರಧಾನಿ ಮೋದಿ ಅವರು ಹಣ್ಣುಗಳ ರಾಜನ ಮೇಲಿರುವ ಜನರ ಪ್ರೀತಿಯನ್ನು ಸ್ಮರಿಸಿದರು.ಭಾರತದ ಮಾವಿನ ತಳಿಗಳ ಭೌಗೋಳಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಎತ್ತಿಹಿಡಿದ ಪ್ರಧಾನಿ, ದೇಶದ ಪ್ರತಿ ಪ್ರದೇಶವೂ ತನ್ನದೇ ಆದ ವಿಶಿಷ್ಟ ಮಾವಿನಹಣ್ಣು, ಅದರ ಅದ್ಭುತ ರುಚಿ ಮತ್ತು ಪರಿಮಳಕ್ಕೆ ಹೆಸರುವಾಸಿಯಾಗಿದೆ ಎಂದು ಹೇಳಿದರು. ಈ ವೇಳೆ ಅವರು ದೇಶದ ಪ್ರಮುಖ ಮಾವಿನ ತಳಿಗಳನ್ನು ಹೆಸರಿಸಿದರು.



ದಸೇರಿ ಹಾಗೂ ಲಂಗ್ರಾ ಮಾವು, ಲಂಗ್ರಾ ಮಾವಿನ ವಿಶೇಷತೆಯೆಂದರೆ ಅದು ಪೂರ್ತಿ ಹಣ್ಣಾದರೂ ಹೊರಗಡೆ ಹಸಿರಾಗಿಯೇ ಇರುತ್ತದೆ ಎಂದು ಮೋದಿ ತಿಳಿಸಿದರು. ಜರ್ದಾಲು ಮಾವು ಇದರ ಸುವಾಸನೆಯನ್ನು ದೂರದಿಂದಲೇ ಗುರುತಿಸಬಹುದು ಚೌಸಾ ಮತ್ತು ಮಾಲ್ಡಾ ತಳಿಗಳ ಬಗ್ಗೆ ಮಾಹಿತಿ ನೀಡಿದರು.ಇನ್ನು ಬಂಗನಪಲ್ಲಿ, ತೋತಾಪುರಿ, ನೀಲಂ ಹಾಗೂ ಮಲಗೋವಾ. ಸುವರ್ಣರೇಖಾ ತಳಿಯ ಬಗ್ಗೆ ಕಾರ್ಯಕ್ರಮದಲ್ಲಿ ವಿಶೇಷವಾಗಿ ಪ್ರಸ್ತಾಪಿಸಲಾಯಿತ. ಸ್ನೇಹಿತರೇ, ಜಾಗ ಬದಲಾದಂತೆ ಮಾವಿನ ಹಣ್ಣಿನ ಆಕಾರ, ಬಣ್ಣ, ರುಚಿ ಮತ್ತು ಸುವಾಸನೆಯೂ ಬದಲಾಗುತ್ತದೆ. ಇದು ನಮ್ಮ ದೇಶದ ಸಾಂಸ್ಕೃತಿಕ ಮತ್ತು ಕೃಷಿ ವೈವಿಧ್ಯತೆಯ ಪ್ರತಿಬಿಂಬವಾಗಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು.ಭಾರತದ ಮಾವಿನ ಹಣ್ಣುಗಳು ಈಗ ಕೇವಲ ಹಳ್ಳಿಗಳು ಮತ್ತು ಸ್ಥಳೀಯ ಮಾರುಕಟ್ಟೆಗಳಿಗೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ಜಾಗತಿಕ ಮಟ್ಟದಲ್ಲಿ ಭಾರಿ ಮನ್ನಣೆ ಗಳಿಸುತ್ತಿವೆ ಎಂದು ಪ್ರಧಾನಿ ಸಂತಸ ವ್ಯಕ್ತಪಡಿಸಿದರು. ಮಾವಿನಹಣ್ಣಿನ ಈ ಸುಂದರ ಪಯಣ ಈಗ ಹಳ್ಳಿಗಳಿಂದ ಹೊರಟು ಅಂತರರಾಷ್ಟ್ರೀಯ ಮಾರುಕಟ್ಟೆಗಳನ್ನು ತಲುಪುತ್ತಿದೆ ಎಂದರು.ತಮ್ಮ ಭಾಷಣದ ಕೊನೆಯಲ್ಲಿ ಮಾವು ಕೃಷಿಯಲ್ಲಿ ತೊಡಗಿರುವ ದೇಶದ ರೈತರನ್ನು ಗ್ರಾಮೀಣ ಆರ್ಥಿಕತೆಯ ಪ್ರಮುಖ ಆಧಾರಸ್ತಂಭ ಎಂದು ಬಣ್ಣಿಸಿದ ಪ್ರಧಾನಿ ಮೋದಿ, ಮನ್ ಕೀ ಬಾತ್ ಮೂಲಕ ಮಾವು ಕೃಷಿ ಮಾಡುತ್ತಿರುವ ನನ್ನ ಎಲ್ಲಾ ರೈತ ಬಾಂಧವರನ್ನು ನಾನು ಪ್ರಶಂಸಿಸಲು ಬಯಸುತ್ತೇನೆ. ನೀವು ಕೇವಲ ಸಾಮಾನ್ಯ ರೈತರಲ್ಲ, ದೇಶದ ಕೃಷಿ ಆರ್ಥಿಕತೆಯ ಅತ್ಯಂತ ವಿಶೇಷ ಶಕ್ತಿ. ನೀವು ಹೀಗೆಯೇ ಸದಾ ಹೊಳೆಯುತ್ತಿರಿ ಮತ್ತು ದೇಶದ ಕೀರ್ತಿಯನ್ನು ಜಗತ್ತಿನಾದ್ಯಂತ ಹೆಚ್ಚಿಸುತ್ತಿರಿ ಎಂದು ರೈತ ಸಮೂಹಕ್ಕೆ ಹಾರೈಸಿದರು.



ಶಾಂಗ್ರಿಲಾ ಸಂವಾದ ಸಂದರ್ಭದಲ್ಲಿ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಭಾನುವಾರ ನ್ಯೂಜಿಲೆಂಡ್ ರಕ್ಷಣಾ ಸಚಿವ ಕ್ರಿಸ್ ಪೆಂಕ್ ಅವರನ್ನು ಭೇಟಿಯಾಗಿದ್ದರು.

# ಅಭಿಷೇಕ್ ಬಳಿಕ ಮತ್ತೊಬ್ಬ ಟಿಎಂಸಿ ಸಂಸದನ ಮೇಲೂ ದಾಳಿ: ಕಲ್ಯಾಣ್ ಬ್ಯಾನರ್ಜಿ ತಲೆಗೆ ಗಂಭೀರ ಪೆಟ್ಟು



**ಕೋಲ್ಕತ್ತಾ, ಮೇ 31:** ತೃಣಮೂಲ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮೇಲೆ ಹಲ್ಲೆ ನಡೆದ ಮರುದಿನವೇ, ಪಕ್ಷದ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರ ಮೇಲೂ ದಾಳಿ ನಡೆದಿದೆ.

ಚುನಾವಣೆ ಬಳಿಕ ಟಿಎಂಸಿ ಕಾರ್ಯಕರ್ತರ ಸರಣಿ ಬಂಧನ ವಿರೋಧಿಸಿ ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಚಂಡಿತಾಲ ಪೊಲೀಸ್ ಠಾಣೆ ಎದುರು ಟಿಎಂಸಿ ನಿಯೋಗ ಪ್ರತಿಭಟನೆ ನಡೆಸುತ್ತಿತ್ತು. ಈ ವೇಳೆ ಬಿಜೆಪಿ – ಟಿಎಂಸಿ ಕಾರ್ಯಕರ್ತರ ನಡುವೆ ಘರ್ಷಣೆ ಏರ್ಪಟ್ಟಿದ್ದು, ಕಲ್ಯಾಣ್ ಬ್ಯಾನರ್ಜಿ ಅವರ ಮೇಲೆ ದಾಳಿ ನಡೆದಿದೆ.

ವರದಿಗಳ ಪ್ರಕಾರ, ಟಿಎಂಸಿ ಕಾರ್ಯಕರ್ತರ ಬಂಧನ ವಿರೋಧಿ ಕಲಾಣ್ ಬ್ಯಾನರ್ಜಿ ನೇತೃತ್ವದ ಟಿಎಂಸಿ ನಿಯೋಗ ಪ್ರತಿಭಟನೆ ನಡೆಸುತ್ತಿತ್ತು. ಮುಂಚಿತವಾಗಿಯೇ ಚಂಡಿತಾಲ ಪೊಲೀಸ್ ಠಾಣೆಯಿಂದ ಅನುಮತಿ ಪಡೆಯಲಾಗಿತ್ತು. ಆದಾಗ್ಯೂ, ನಿಯೋಗ ಒಳಗೆ ತಲುಪುವ ಮೊದಲು, ಪೊಲೀಸ್ ಠಾಣೆ ಆವರಣದ ಹೊರಗೆ ಪರಿಸ್ಥಿತಿ ಉದ್ವಿಗ್ನಗೊಂಡಿದೆ.

### ಘರ್ಷಣೆ ಏರ್ಪಟ್ಟಿದ್ದು ಹೇಗೆ?

ಕಪ್ಪು ಧ್ವಜ ಹಿಡಿದು ಪ್ರತಿಭಟಿಸುತ್ತಿದ್ದ ಟಿಎಂಸಿ ಕಾರ್ಯಕರ್ತರನ್ನ ಬಿಜೆಪಿ ಕಾರ್ಯಕರ್ತರು ಚೋರ್ ಚೋರ್ ಎಂದು ಕೆಣಕಿದ್ದಾರೆ. ಬಳಿಕ ಸ್ಥಳದಲ್ಲಿ ಉದ್ವಿಗ್ನತೆ ಉಂಟಾಗಿದ್ದು, ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರ ಮೇಲೂ ದಾಳಿಯಾಗಿದೆ. ಘರ್ಷಣೆ ವೇಳೆ ಕಲ್ಯಾಣ್ ಬ್ಯಾನರ್ಜಿ ಅವರ ತಲೆಗೆ ಗಾಯವಾಗಿದೆ ಎಂದು ತಿಳಿದುಬಂದಿದೆ.

# ಅಭಿಷೇಕ್ ಬ್ಯಾನರ್ಜಿ ಮೇಲೆ ಹಲ್ಲೆ ಆರೋಪ: ಐವರ ಬಂಧನ

**ಕೋಲ್ಕತ್ತಾ, ಮೇ 31:** ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕ ಅಭಿಷೇಕ್ ಬ್ಯಾನರ್ಜಿ ದಕ್ಷಿಣ 24 ಪರಗಣ ಜಿಲ್ಲೆಯ ಸೋನಾರ್ ಪುರಕ್ಕೆ ಭೇಟಿ ನೀಡಿದಾಗ, ಅವರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಐವರನ್ನು ಬಂಧಿಸಲಾಗಿದೆ.




ಸೋನಾರ್ ಪುರ ಪ್ರದೇಶದಿಂದ ಸಂಗ್ರಹಿಸಲಾದ ವಿಡಿಯೊ ದೃಶ್ಯಾವಳಿಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶನಿವಾರ ಸೋನಾರ್ ಪುರಕ್ಕೆ ಡೈಮಂಡ್ ಹಾರ್ಬರ್ ಸಂಸದ ಅಭಿಷೇಕ್ ಬ್ಯಾನರ್ಜಿ ಭೇಟಿ ನೀಡಿದ್ದಾಗ, ಜನರ ಗುಂಪೊಂದು ಅವರ ಮೇಲೆ ಮೊಟ್ಟೆ, ಕಲ್ಲುಗಳ ತೂರಾಟ ನಡೆಸಿತ್ತು. ಈ ವೇಳೆ, ಕ್ರಿಕೆಟ್ ಹೆಲ್ಮೆಟ್ ಧರಿಸಿ, ಭದ್ರತಾ ಸಿಬ್ಬಂದಿಗಳ ನೆರವಿನೊಂದಿಗೆ ಅಭಿಷೇಕ್ ಬ್ಯಾನರ್ಜಿ ಅಲ್ಲಿಂದ ಪಾರಾಗಿದ್ದರು.

ಚುನಾವಣೋತ್ತರ ಹಿಂಸಾಚಾರದ ಸಂತ್ರಸ್ತರನ್ನು ಭೇಟಿಯಾಗಲು ಅಭಿಷೇಕ್ ಬ್ಯಾನರ್ಜಿ ಸೋನಾರ್‌ಪುರ್‌ಗೆ ಭೇಟಿ ನೀಡಿದ್ದಾಗ, ಅವರ ಮೇಲೆ ಈ ದಾಳಿ ನಡೆದಿತ್ತು. ಬಳಿಕ, ತನ್ನನ್ನು ಹತ್ಯೆ ನಡೆಸಲು ಬಿಜೆಪಿ ಕಾರ್ಯಕರ್ತರು ಪ್ರಯತ್ನಿಸಿದರು ಎಂದು ಅವರು ದೂರಿದ್ದರು. ಸಂಸದ ಅಭಿಷೇಕ್ ಬ್ಯಾನರ್ಜಿಯೊಂದಿಗೆ ಸಂಘರ್ಷಕ್ಕಿಳಿದ ಅಪರಿಚಿತರ ಗುಂಪೊಂದು, ಅವರನ್ನು ತಳ್ಳಾಡಿ, ಕಳ್ಳ, ಕಳ್ಳ ಎಂಬ ಘೋಷಣೆಗಳನ್ನು ಕೂಗಿತ್ತು. ಇದರಿಂದ ಸ್ಥಳದಲ್ಲಿ ದಿಢೀರನೆ ಗದ್ದಲದ ವಾತಾವರಣ ನಿರ್ಮಾಣವಾಗಿ, ಅಭಿಷೇಕ್ ಬ್ಯಾನರ್ಜಿ ಮೇಲೆ ಜನರ ಗುಂಪು ಹಲ್ಲೆ ನಡೆಸಿ, ಅವರ ಮೇಲೆ ದೈಹಿಕ ದಾಳಿ ನಡೆಸಲು ಪ್ರಯತ್ನಿಸಿತು. ತಕ್ಷಣವೇ ಮಧ್ಯಪ್ರವೇಶಿಸಿದ ಭದ್ರತಾ ಸಿಬ್ಬಂದಿಗಳು, ಅವರನ್ನು ಅಲ್ಲಿಂದ ಸುರಕ್ಷಿತವಾಗಿ ಕರೆದೊಯ್ದಿದ್ದರು. ಈ ಕುರಿತು ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ದೆಹಲಿಯಲ್ಲಿ 5 ಅಂತಸ್ತಿನ ಕಟ್ಟಡ ಕುಸಿತ 6 ಜನರ ಸಾವು, 12 ಮಂದಿ ರಕ್ಷಣೆ

**ನವದೆಹಲಿ,ಮೇ 31:** ದಕ್ಷಿಣ ದೆಹಲಿಯ ಸಾಕೇತ್ ಮೆಟ್ರೋ ನಿಲ್ದಾಣದ ಸಮೀಪ 5 ಅಂತಸ್ತಿನ ಕಟ್ಟಡವೊಂದು ಕುಸಿದು ಬಿದ್ದಿದ್ದು, 6 ಜನರು ಮೃತಪಟ್ಟಿದ್ದಾರೆ. 12 ಮಂದಿಯನ್ನು ರಕ್ಷಿಸಲಾಗಿದೆ. ಶನಿವಾರ ರಾತ್ರಿ 7:45ರ ಸುಮಾರಿಗೆ ಈ ಅವಘಡ ಸಂಭವಿಸಿದೆ. ಕಟ್ಟಡದ ನೆಲಮಹಡಿಯಲ್ಲಿ ಕೋಚಿಂಗ್ ಸೆಂಟರ್ ಇತ್ತು. ಮೇಲಿನ ಮೂರು ಅಂತಸ್ತುಗಳಲ್ಲಿ ಕೆಫೆ ಹಾಗೂ ಕಚೇರಿಗಳು ಇದ್ದವು. ಅಲ್ಲದೇ ಮೂರನೇ ಮಹಡಿಯಲ್ಲಿ ನಿರ್ಮಾಣ ಕಾಮಗಾರಿ ನಡೆಯುತ್ತಿತ್ತು. ಅವಶೇಷಗಳಡಿ ವಿದ್ಯಾರ್ಥಿಗಳು ಸಿಲುಕಿರುವ ಶಂಕೆ ವ್ಯಕ್ತವಾಗಿದೆ.

5 ಅಂತಸ್ತಿನ ಕಟ್ಟಡ ಸಂಪೂರ್ಣ ಕುಸಿದಿದ್ದು, 12 ಮಂದಿಯನ್ನು ರಕ್ಷಿಸಲಾಗಿದೆ. ಈ ಪೈಕಿ ಇಬ್ಬರಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಕುರಿತು ಮುಖ್ಯಮಂತ್ರಿ ರೇಖಾಗುಪ್ತ ಕಳವಳ ವ್ಯಕ್ತಪಡಿಸಿದ್ದು, ತ್ವರಿತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.



ಇನ್ನೂ ಅನೇಕರು ಅವಶೇಷಗಳಡಿ ಸಿಲುಕಿರುವ ಶಂಕೆ ವ್ಯಕ್ತವಾಗಿದ್ದು, ಅಗ್ನಿಶಾಮಕ ಸಿಬ್ಬಂದಿ, ಎಸ್‌ಡಿಆರ್‌ಎಫ್ ಮತ್ತು ಪೊಲೀಸ್ ತಂಡಗಳು ಸ್ಥಳಕ್ಕೆ ಧಾವಿಸಿದ್ದಾರೆ. ಜೆಸಿಬಿ ಸೇರಿದಂತೆ ಭಾರೀ ಯಂತ್ರಗಳ ನೆರವಿನಿಂದ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ.


# ಹಿಮಾಚಲಪ್ರದೇಶ: ಕಂದಕಕ್ಕೆ ಉರುಳಿದ ವಾಹನ ಬೆಂಗಳೂರು ದಂಪತಿ ಸೇರಿ 8 ಪ್ರವಾಸಿಗರ ಸಾವು

**ಧರ್ಮಶಾಲಾ, ಮೇ 31:** ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ವಾಹನವೊಂದು ಕಂದಕಕ್ಕೆ ಉರುಳಿದ ಪರಿಣಾಮ ಬೆಂಗಳೂರು ದಂಪತಿ ಸೇರಿದಂತೆ 8 ಮಂದಿ ಸಾವನ್ನಪ್ಪಿರುವ ಘಟನೆ ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯಲ್ಲಿ ನಡೆದಿದೆ.

ಚಂಬಾ ಜಿಲ್ಲೆಯ ಚುರಾ ಉಪವಿಭಾಗದ ಬೈರಾಗಢ–ಸಚ್ ಪಾಸ್–ಕಿಲ್ಲರ್ ಮಾರ್ಗದ ಕಲಾಬನ್ ಬಳಿ ಈ ಘಟನೆ ಸಂಭವಿಸಿದೆ. ರಜೆ ಹಿನ್ನೆಲೆ ಡಾಲ್ಹೌಸಿಗೆ ಪ್ರವಾಸ ತೆರಳಿದ್ದ ಬೆಂಗಳೂರು ದಂಪತಿ ಹಾಗೂ ಛತ್ತೀಸ್ಗಢದ ದಂಪತಿ ಮತ್ತು ಇಬ್ಬರು ಮಕ್ಕಳು ಘಟನೆಯಲ್ಲಿ ಮೃತಪಟ್ಟಿದ್ದಾರೆ.

ಬೆಂಗಳೂರಿನ ಕುಟುಂಬವೊಂದು ಹಿಮದಿಂದ ಆವೃತವಾದ ಪರ್ವತಗಳ ವೀಕ್ಷಣೆಗೆಂದು ಡಾಲ್‌ಹೌಸಿಯಲ್ಲಿ ಟ್ಯಾಕ್ಸಿಯನ್ನು ಬಾಡಿಗೆಗೆ ಪಡೆದಿತ್ತು. ಬಳಿಕ ಈ ದಂಪತಿ ಗಿರಿಧಾಮದಲ್ಲಿ ವಾಸಿಸುವ ಮತ್ತೊಂದು ಪ್ರವಾಸಿ ಕುಟುಂಬದೊಂದಿಗೆ ವಾಹನವನ್ನು ಹಂಚಿಕೊಂಡರು.


ಎರಡೂ ಕುಟುಂಬಗಳು ಶುಕ್ರವಾರ ಸಚ್ ಪಾಸ್ ಮೂಲಕ ಬೈರಾಗಢ–ಕಿಲ್ಲರ್ ಮಾರ್ಗದಲ್ಲಿ ಪ್ರವಾಸಕ್ಕೆ ಹೊರಟಿತು. ಟ್ಯಾಕ್ಸಿ ನಿಗದಿತ ಸಮಯಕ್ಕೆ ಡಾಲ್‌ಹೌಸಿಗೆ ಹಿಂತಿರುಗದ ಹಿನ್ನೆಲೆ ವಾಹನ ಮಾಲೀಕರು ಜಿಪಿಎಸ್ ಬಳಸಿ ಟ್ಯಾಕ್ಸಿಯನ್ನು ಟ್ರ್ಯಾಕ್ ಮಾಡಿದರು. ಈ ವೇಳೆ ವಾಹನ ದೀರ್ಘಕಾಲದವರೆಗೆ ಕಲಾಬನ್ ಬಳಿ ನಿಂತಿರುವುದು ತಿಳಿದುಬಂದಿದೆ.



ಈ ವಿಷಯವನ್ನು ವಾಹನ ಮಾಲೀಕರು ಪೊಲೀಸರಿಗೆ ತಿಳಿಸಿದ್ದಾರೆ. ತಕ್ಷಣವೇ ಅಧಿಕಾರಿಗಳು ಶೋಧ ಕಾರ್ಯಾಚರಣೆಯನ್ನು ನಡೆಸಿದ್ದಾರೆ. ಈ ವೇಳೆ ವಾಹನ ಕಂದಕಕ್ಕೆ ಉರುಳಿರುವುದು ಪತ್ತೆಯಾಗಿದೆ. ಈ ಘಟನೆಯನ್ನು ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು ಅತ್ಯಂತ ಹೃದಯವಿದ್ರಾವಕ ಎಂದು ಹೇಳಿದ್ದಾರೆ. ಅಲ್ಲದೇ ಸ್ಥಳೀಯ ಆಡಳಿತ ಅಧಿಕಾರಿಗಳು, ರಕ್ಷಣಾ ತಂಡಗಳು ಮತ್ತು ನಿವಾಸಿಗಳು ಕಾರ್ಯಾಚರಣೆಯನ್ನು ಕೈಗೊಳ್ಳಲು ಸಮನ್ವಯದಿಂದ ಕೆಲಸ ಮಾಡುತ್ತಿದ್ದಾರೆ ಮತ್ತು ರಾಜ್ಯ ಸರ್ಕಾರವು ಅಗತ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಒದಗಿಸುತ್ತಿದೆ ಎಂದು ತಿಳಿಸಿದ್ದಾರೆ.

# ಸಿಂಗಾಪುರ ಓಪನ್: ಪುರುಷರ ಡಬಲ್ಸ್ ಫೈನಲ್‌ನಲ್ಲಿ ಸಾತ್ವಿಕ್–ಚಿರಾಗ್‌ಗೆ ಪ್ರಶಸ್ತಿ

**ಸಿಂಗಾಪುರ, ಮೇ 31:** ಭಾನುವಾರ ನಡೆದ ಪುರುಷರ ಡಬಲ್ಸ್ ಫೈನಲ್‌ನಲ್ಲಿ ಇಂಡೋನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ಫಿಕ್ರಿ ಅವರನ್ನು ಸೋಲಿಸುವ ಮೂಲಕ ಭಾರತದ ಸಾತ್ವಿಕ್ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಸಿಂಗಾಪುರ ಓಪನ್ ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ಸೂಪರ್ 750 ಪ್ರಶಸ್ತಿಯನ್ನು ಗೆದ್ದುಕೊಂಡರು. ನಾಲ್ಕನೇ ಶ್ರೇಯಾಂಕದ ಭಾರತೀಯ ಜೋಡಿಯು ಮೂರನೇ ಶ್ರೇಯಾಂಕದ ಇಂಡೋನೇಷ್ಯಾದ ಜೋಡಿಯ ವಿರುದ್ಧ ಒಂದು ಗಂಟೆ 13 ನಿಮಿಷಗಳಲ್ಲಿ 18–21, 21–17, 21–16 ಅಂತರದಲ್ಲಿ ಮೊದಲ ಪಂದ್ಯದಲ್ಲಿ ಸೋತ ನಂತರ ಫೈನಲ್ನಲ್ಲಿ ಪ್ರಾಬಲ್ಯ ಸಾಧಿಸಿತು. ಸಿಂಗಾಪುರ ಓಪನ್ ಗೆಲುವು ಭಾರತೀಯ ಜೋಡಿಗೆ ಮೂರನೇ ಸೂಪರ್ 750 ಕಿರೀಟವಾಗಿದ್ದು, 2022 ಮತ್ತು 2024 ರಲ್ಲಿ ಫ್ರೆಂಚ್ ಓಪನ್ ಗೆದ್ದಿತ್ತು. ಅವರು 2023 ರಲ್ಲಿ ಇಂಡೋನೇಷ್ಯಾ ಸೂಪರ್ 1000 ಪ್ರಶಸ್ತಿಯನ್ನು ಸಹ ಗೆದ್ದಿದ್ದರು. ಥೈಲ್ಯಾಂಡ್ ಓಪನ್ 2024 ರಲ್ಲಿ ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್‌ನಲ್ಲಿ




ಕೊನೆಯ ಬಾರಿಗೆ ಪ್ರಶಸ್ತಿ ಗೆದ್ದಿದ್ದ ಸಾತ್ವಿಕ್ ಮತ್ತು ಚಿರಾಗ್, ಮೇ ತಿಂಗಳಲ್ಲಿ ಥಾಮಸ್ ಮತ್ತು ಉಬರ್ ಕಪ್‌ನಲ್ಲಿ ಭಾರತದ ಕಂಚಿನ ಪದಕ ವಿಜೇತ ಪ್ರದರ್ಶನದಲ್ಲಿ ಪ್ರಮುಖ ಪಾತ್ರ ವಹಿಸಿದಾಗಿನಿಂದ ಉತ್ತಮ ಫಾರ್ಮ್ನಲ್ಲಿದ್ದಾರೆ. ಚಿರಾಗ್ ಮತ್ತು ಸಾತ್ವಿಕ್ಸಾಯಿರಾಜ್ ಸಿಂಗಾಪುರ ಓಪನ್ನಲ್ಲಿ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಡಬಲ್ಸ್ ಜೋಡಿಯಾಗಿದ್ದಾರೆ. ಭಾರತೀಯ ಜೋಡಿ ಮುಂದಿನ ಬಾರಿ 2026 ರ ಜೂನ್ 2 ರಿಂದ 7 ರವರೆಗೆ ನಡೆಯಲಿರುವ ಬಿಡಬ್ಲ್ಯೂಎಫ್ ಇಂಡೋನೇಷ್ಯಾ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಕಾಣಿಸಿಕೊಳ್ಳಲಿದೆ.